ಸಂಪುಟ: 05 ಸಂಚಿಕೆ: 312 ಪುಟಗಳು: 08 ಭಾನುವಾರ 25 ಜನವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಬದುಕು ನಮ್ಮನ್ನು ಅಷ್ಟು ಸುಲಭವಾಗಿ ಸೋಲಲು ಬಿಡುವುದಿಲ್ಲ. ನಾವು ಎಲ್ಲವನ್ನು ಕಳೆದುಕೊಂಡಗಾಲು ಸಹ,,, - ಬದುಕು ನಮಗೆ ಒಂದು ಅವಕಾಶವನ್ನು ಕೊಡುತ್ತದೆ.

## ಇನ್ನೂ ಪೊಲೀಸರ ಕೈಗೆ ಸಿಕ್ಕಿಲ್ಲ ಮಹಿಳಾ ಅಧಿಕಾರಿಗೆ ನಿಂದಿಸಿದ್ದ ರಾಜೀವ್‌ಗೌಡ

• ಉದಯವಾಹಿನಿ, ಬೆಂಗಳೂರು

ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಾಗೌಡ ಅವರಿಗೆ ನಿಂದಿಸಿ ಬಂಧನ ಭೀತಿಯಿಂದ ತಲೆ ಮರೆಸಿಕೊಂಡಿರುವ ರಾಜೀವ್‌ಗೌಡನ ಮನೆ ಮೇಲೆ ಚಿಕ್ಕಬಳ್ಳಾಪುರ ಠಾಣೆ ಪೊಲೀಸರು ದಾಳಿ ಮಾಡಿದ್ದಾರೆ.

ನಗರದ ಸಂಜಯ ನಗರದಲ್ಲಿರುವ ಆತನ ಮನೆ ಮೇಲೆ ಪೊಲೀಸರು ದಾಳಿ ಮಾಡಿ ಪರಿಶೀಲಿಸಿದಾಗ ರಾಜೀವ್‌ಗೌಡ ಪತ್ತೆಯಾಗಿಲ್ಲ. ಆಯುಕ್ತೆ ಅವರಿಗೆ ಬೆದರಿಕೆ ನಂತರ ರಾಜೀವ್‌ಗೌಡ ತಲೆಮರೆಸಿ ಕೊಂಡಿದ್ದು ಆತ ವಿದೇಶಕ್ಕೆ ಹೋಗದ ಹಾಗೆ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದಾರೆ. ಈಗಾಗಲೇ ರಾಜೀವ್‌ಗೌಡನನ್ನು ಕೆಪಿಸಿಸಿ ವತಿಯಿಂದ ಅಮಾನತು ಮಾಡಲಾಗಿದೆ.ಈ ಎಲ್ಲಾ ಬೆಳವಣಿಗೆಗಳ ನಡುವೆ ಅಮೃತಾಗೌಡ ರವರಿಗೆ ಆ್ಯಸಿಡ್ ದಾಳಿ ಬೆದರಿಕೆಯ ಪತ್ರ ಅವರ ಕಚೇರಿಗೆ ಬಂದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಅಮೃತಾಗೌಡ ಅವರ ನಿವಾಸ ಹಾಗೂ ಕರ್ಚೇರಿಗೆ ಭದ್ರತೆ ಹೆಚ್ಚಿಸಿದ್ದಾರೆ.

## ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ 'ಮಾಮೂಲಿ' ಸಂಕಷ್ಟ

• ಉದಯವಾಹಿನಿ, ಬೆಂಗಳೂರು

ಅಬಕಾರಿ ಇಲಾಖೆಯಲ್ಲಿ ಲೈಸೆನ್ಸ್ ನೀಡಲು ಲಂಚಕ್ಕೆ ಬೇಡಿಕೆ ಇಟ್ಟ ಪ್ರಕರಣ ತಿರುವು ಪಡೆದಿದ್ದು, ಸಚಿವರಿಗೂ ಪ್ರತಿ ತಿಂಗಳು ಮಾಮೂಲು ಕೊಡಬೇಕೆಂಬ ವಿಷಯ ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ.

ಲೋಕಾಯುಕ್ತ ಅಧಿಕಾರಿಗಳು ದಾಖಲಿಸಿರುವ ಎಫ್‌ಐಆರ್ ನಲ್ಲಿ ಮಿನಿಸ್ಟರ್ ಅವರಿಗೆ ಲಂಚದ ಪಾಲು ಹೋಗುತ್ತದೆ ಎಂದು ಉಲ್ಲೇಖವಾಗಿರುವುದರಿಂದ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಕಾನೂನಿನ ಸಂಕಷ್ಟ ಮತ್ತಷ್ಟು ಬಿಗಿಗೊಂಡಿದೆ.

ಲೋಕಾಯುಕ್ತ ಅಧಿಕಾರಿಗಳು ದಾಖಲಿಸಿರುವ ಎಫ್‌ಐಆರ್ ನಲ್ಲಿ ಎಲ್ಲಿಯೂ ನೇರವಾಗಿ ಸಚಿವ ತಿಮಾಪುರ ಹೆಸರು ಉಲ್ಲೇಖ ಮಾಡಿಲ್ಲ. ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಹಾಗೂ ಸೇವೆಯಿಂದ ಅಮಾನತುಕೊಂಡಿರುವ ಅಬಕಾರಿ ಇಲಾಖೆಯ ಹೆಚ್ಚುವರಿ ಉಪಾಯುಕ್ತ ಜಗದೀಶ್ ನಾಯಕ್ ಮತ್ತು ಸೂಪರಿಂಟೆಂಡೆಂಟ್ ತಮ್ಮಣ್ಣ ಅವರ ವಿರುದ್ಧ ದೂರು ನೀಡಿರುವ ಲಕ್ಷ್ಮೀನಾರಾಯಣ.ಸಿ ಅವರ ಹೇಳಿಕೆಗಳನ್ನು ದಾಖಲಿಸಿ ಎಫ್‌ಐಆರ್ ದಾಖಲಾಗಿದೆ.

## ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದಾಗಿಂದ ದ್ವೇಷದ ರಾಜಕಾರಣ ಹೆಚ್ಚಾಗಿದೆ: ಕಾರಜೋಳ

• ಉದಯವಾಹಿನಿ, ಚಿತ್ರದುರ್ಗ

ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದಾಗಿಂದ ರಾಜ್ಯದಲ್ಲಿ ದ್ವೇಷದ ರಾಜಕಾರಣ ಹೆಚ್ಚಾಗಿದೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದ್ದಾರೆ. ಚಿತ್ರದುರ್ಗದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಳ್ಳಾರಿ ಮಾತ್ರ ಅಲ್ಲ ರಾಜ್ಯದೆಲ್ಲೆಡೆ ದ್ವೇಷದ ರಾಜಕಾರಣ ನಡೆಯುತ್ತಿದೆ. ರಾಜ್ಯದಲ್ಲಿ ಅತ್ಯಾಚಾರ, ಕೊಲೆ ಪ್ರಕರಣ ಹೆಚ್ಚಳವಾಗಿವೆ. ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡಲು ಆಗದಿದ್ದರೆ ಸಿಎಂ ರಾಜೀನಾಮೆ ನೀಡಲೆಂದು ಒತ್ತಾಯಿಸಿದರು. ಬಳ್ಳಾರಿ ಘಟನೆಯಲ್ಲಿ ಗುಂಡು ಹಾರಿಸಿದವರು ಗನ್‌ಮ್ಯಾನ್ ಅಲ್ಲ. ನನ್ನ ದೃಷ್ಟಿಯಲ್ಲಿ ಅವರು ಸುಪಾರಿ ಕಿಲ್ಲರ್ಸ್ ಎನಿಸಿದ್ದಾರೆ. ಹೀಗಾಗಿ ಶಾಸಕ ಭರತರೆಡ್ಡಿ ಬಂಧನಕ್ಕೆ ಆಗ್ರಹಿಸಿದ್ದೇವೆ ಎಂದರು. ಹಾಗೆಯೇ ಬಳ್ಳಾರಿಯಲ್ಲಿ ಮಾಡಲ್ ಹೌಸ್‌ಗೆ ಬೆಂಕಿ ಪ್ರಕರಣ ಈ ರೀತಿ ಗೂಂಡಾಗಿರಿ ಸಮಾಜಕ್ಕೆ ಒಳ್ಳೆಯದಲ್ಲ. ಸಮಾಜ ಸೇವೆಯಲ್ಲಿ ಗೂಂಡಾಗಿರಿ ಮಾಡುವ ಜನ ಇರಬಾರದು. ಶಾಸಕರು, ಸಂಸದರು ಶರಣರು, ಸಂತರಂತೆ ಕೆಲಸ ಮಾಡಬೇಕು. ಜನಪ್ರತಿನಿಧಿಗಳಾಗಿ ಚಂಬಲ್ ಕಣಿವೆ ಡಕಾಯಿತರಂತೆ ಮಾಡಬಾರದು ಎಂದು ಕಿಡಿಕಾರಿದರು.

## ವಿಪಕ್ಷ ಶಾಸಕರ ವಿರುದ್ಧ ಮಾತ್ರವೇ ಕ್ರಮವೇಕೆ: ಯು.ಟಿ.ಖಾದರ್

• ಉದಯವಾಹಿನಿ, ಬೆಂಗಳೂರು


ಸದನದ ಕಲಾಪಕ್ಕೆ ಅಡ್ಡಿಪಡಿಸಿದ್ದಕ್ಕೆ ವಿರೋಧ ಪಕ್ಷಗಳ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಅವರು, ರಾಜ್ಯಪಾಲರ ಅವಮಾನಿಸಿದ ಕಾಂಗ್ರೆಸ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಬಿಜೆಪಿ ಹೇಳಿದ್ದು, ಪಕ್ಷಪಾತದ ನಡೆಸುತ್ತಿರುವುದಾಗಿ ಆರೋಪ ಮಾಡಿದ್ದಾರೆ. ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಕಾಂಗ್ರೆಸ್ ಶಾಸಕರು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿದರು. ರಾಜ್ಯಪಾಲರು ಸದನದಿಂದ ಹೊರಬಂದಾಗ, ಸ್ಪೀಕರ್ ಸೇರಿದಂತೆ ಯಾರೂ ಅವರೊಂದಿಗೆ ಇರಲಿಲ್ಲ. ರಾಜ್ಯಪಾಲರು ಸದನದಿಂದ ಓಡಿಹೋದರು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್. ಕೆ. ಪಾಟೀಲ್ ಹೇಳಿದ್ದಾರೆ. ಇದು ರಾಜ್ಯದ ರಾಜ್ಯಪಾಲರಿಗೆ ಮಾಡಿದ ಅವಮಾನ. ಕೆಲವು ಕಾಂಗ್ರೆಸ್ ಶಾಸಕರು ರಾಜ್ಯಪಾಲರು ಸದನದಿಂದ ಹೊರಹೋಗದಂತೆ ತಡೆಯಲು ಪ್ರಯತ್ನಿಸಿದಾಗ, ಸ್ಪೀಕರ್ ಆಗಿ ನೀವು ಕ್ರಮ ಕೈಗೊಳ್ಳಬೇಕಿತ್ತು. ಘಟನೆಗೆ ಸಾಕ್ಷಿಯಾಗಿ ವಿಡಿಯೋಗಳು ನಮ್ಮಲ್ಲಿವೆ. ಅವರ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಹೇಳಿದರು. ನಿಯಮದ ಪ್ರಕಾರ, ಸದನದ ಮುಖ್ಯಸ್ಥರು 24 ಗಂಟೆಗಳ ಒಳಗೆ ಕ್ರಮ ಕೈಗೊಳ್ಳಬೇಕು. ಆದರೆ ಇಲ್ಲಿ, 24 ಗಂಟೆಗಳ ನಂತರವೂ ಸ್ಪೀಕರ್ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಪೀಕರ್ ಆಡಳಿತ ಪಕ್ಷದ ಶಾಸಕರ ಪರವಾಗಿ ನಿಂತಿದ್ದು, ಈ ಮೂಲಕ ಪಕ್ಷಪಾತ ಮಾಡುತ್ತಿದ್ದಾರೆಂದು ಆರೋಪಿಸಿದರು.

## ಅತ್ಯಾಚಾರವನ್ನು ಸಣ್ಣ ಘಟನೆ ಎಂದ ರಾಜಶೇಖರ ಹಿಟ್ನಾಳ್ ವಿರುದ್ಧ ಆಕ್ರೋಶ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ದುರಾಡಳಿತ ಮೇರೆ ಮೀರಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಆಕ್ಷೇಪಿಸಿದ್ದಾರೆ. ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಎಂದರೆ ಕಮಿಷನ್, ಕರಪ್ಶನ್, ಲೂಟಿ, ದುಂಡಾವರ್ತಿ ಎಂದು ಮಾತನಾಡುತ್ತಿದ್ದೆವು. ಕಾಂಗ್ರೆಸ್ ಇದೀಗ ಮಾನವೀಯ ಮೌಲ್ಯಗಳನ್ನು ಗಾಳಿಗೆ ತೂರಿ ಅಧಿಕಾರವೊಂದಿದ್ದರೆ ಸಾಕು, ಏನು ಬೇಕಾದರೂ ಮಾಡಬಹುದು, ಹೇಗೆ ಬೇಕಾದರೂ ಮೆರೆಯಬಹುದು, ಎಂಬ ದುರ್ನಡತೆಯನ್ನು ಮೈಗೂಡಿಸಿಕೊಂಡಂತೆ ಕಾಣುತ್ತಿದೆ ಎಂದು ಟೀಕಿಸಿದರು. ಹೊರದೇಶದಿಂದ ಪ್ರವಾಸಕ್ಕಾಗಿ ಬಂದ ಮಹಿಳೆಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿತ್ತು. ಇದೊಂದು ದೊಡ್ಡ ವಿಷಯವಾಗಿತ್ತು. ಇದು ಕೇವಲ ರಾಷ್ಟ್ರೀಯ ವಿಚಾರವಲ್ಲ, ಅಂತರರಾಷ್ಟ್ರೀಯ ವಿಚಾರ. ಇದನ್ನು ಗೌರವಾನ್ವಿತ ಎಂಪಿ ರಾಜಶೇಖರ ಹಿಟ್ನಾಳ್ ಅವರು ಎಷ್ಟು ಕೇವಲವಾಗಿ ಹೇಳಿದ್ದಾರೆಂದರೆ, ಅದೊಂದು ಸಣ್ಣ (ಮೈನರ್) ಘಟನೆಯಂತೆ. ಈ ಕಾಂಗ್ರೆಸ್ಸಿನ ಸಂಸ್ಕೃತಿ ಎಂಥದ್ದೆಂದು ಗೊತ್ತಾಯಿತಲ್ಲವೇ? ಎಂದು ಪ್ರಶ್ನಿಸಿದರು.

**ಕಾಂಗ್ರೆಸ್ ಎಂದರೆ ಕಮಿಷನ್, ಕರಪ್ಶನ್**



ಇಷ್ಟೊಂದು ನೀಚತನಕ್ಕೆ ಅಧಿಕಾರ ನಡೆಸುವವರು ಇಳಿದರೆ ಏನೆನ್ನಬೇಕು ಒಬ್ಬರು ಮಹಿಳೆಯ ಮೇಲೆ ಆಗಿರುವ ಅತ್ಯಾಚಾರವನ್ನೇ ನಾವು ಖಂಡಿಸಬೇಕು. ಅದು ಸಣ್ಣ ವಿಷಯ ಎಂದು ಯಾರೂ ಭಾವಿಸಬಾರದು. ಅದರಲ್ಲೂ ಅವರನ್ನು ಕೊಲೆ ಮಾಡಿದ ಘಟನೆ ಎಷ್ಟೊಂದು ನೀಚತನದಿಂದ ಕಾಂಗ್ರೆಸ್ಸಿನವರು ಈ ಮಾತುಗಳನ್ನು ಆಡಿದ್ದಾರೆಂದರೆ, ಅವರ ನೀಚತನಕ್ಕೆ ಜನರು ಉತ್ತರ ಕೊಡಬೇಕಿದೆ, ಬುದ್ಧಿ ಕಲಿಸುವ ಕೆಲಸ ಮಾಡಲೇಬೇಕಾಗಿದೆ ಎಂದು ಮನವಿ ಮಾಡಿದರು. ಕಾಂಗ್ರೆಸ್ ಸರಕಾರವು ಪೊಲೀಸ್ ಇಲಾಖೆಯನ್ನು ನಿರ್ಲಿಪ್ತ ಮಾಡಿದೆ ಬಳ್ಳಾರಿಯಲ್ಲಿ ಜನಾರ್ಧನ ರೆಡ್ಡಿಯವರ ಮಾಡೆಲ್ ಹೌಸ್ ಗೆ ಬೆಂಕಿ ಹಾಕುವ ಕೆಲಸ ನಡೆದಿದ. ಕಾಂಗ್ರೆಸ್ಸಿನ ದುರಾಡಳಿತ ಇನ್ನೂ ಯಾವ ಮಟ್ಟಕ್ಕೆ ಹೋಗಿದೆ ಎಂಬುದು ಈಗ ಗೊತ್ತಾಗುತ್ತಿದೆ. ಇವರೇ ಇವರ ಕಾರ್ಯಕರ್ತನನ್ನು ಕೊಲೆ ಮಾಡಿ, ಸರಕಾರದ ಹಣ 25 ಲಕ್ಷ ನಗದು ಕೊಟ್ಟಿದ್ದಾರೆ. ನಗದಾಗಿ ಹಣ ಕೊಡಲು ಆಗುವುದಿಲ್ಲ ಎಂದರು. ನಗದು ಕೊಡುವುದಾದರೆ, ಅದಕ್ಕೆ ಲೆಕ್ಕ ಇರಬೇಕು ಆದಾಯ ತೆರಿಗೆ ಪಾವತಿ ಮಾಡಿರಬೇಕು. ಸರಕಾರದ ಹಣ ನೀವು ಚೆಕ್ ಮೂಲಕವೇ ಕೊಡಬೇಕಿತ್ತು ಎಂದು ತಿಳಿಸಿದರು. ನಾನು ಗೋಲ್ಡನ್ ಸ್ಪೂನ್ ಜೊತೆ ಹುಟ್ಟಿದ್ದಾಗಿ ಹೇಳುವ ಶಾಸಕ, ಅವನ ಕಡೆಯಿಂದ ಹಣ ಕೊಡಿಸಬೇಕಿತ್ತು ಎಂದು ಆಗ್ರಹಿಸಿದರು. ಕೊಲೆ ಮಾಡಿದ ಅವರನ್ನೇ ಬಂಧಿಸಬೇಕಿತ್ತು. ಇವತ್ತಿನ ವರೆಗೆ ಬಂಧಿಸಿಲ್ಲ ಎಂದು ಆಕ್ಷೇಪಿಸಿದರು.



# ಕೈ ಸರ್ಕಾರ 45 ಸಾವಿರ ಮನೆಗಳ ಹಸ್ತಾಂತರ

• ಉದಯವಾಹಿನಿ, ಬೆಂಗಳೂರು

ಕೊಳೆಗೇರಿ ಜನರೂ ಮುಖ್ಯವಾಹಿನಿಗೆ ಬರಬೇಕು. ಇದಕ್ಕಾಗಿ ಇಷ್ಟು ಬೃಹತ್ ಪ್ರಮಾಣದಲ್ಲಿ ಮನೆ ವಿತರಣೆ ಮಾಡುತ್ತಿದ್ದೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಇರುವುದೇ ಬಡವರನ್ನು ಮುಖ್ಯವಾಹಿನಿಗೆ ತರಲು ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ವಸತಿ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗೃಹಮಂಡಳಿ ವತಿಯಿಂದ ಶನಿವಾರ ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗೃಹ ಮಂಡಳಿ ನಿರ್ಮಿಸಿರುವ 42,345 ಮನೆಗಳು ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿಯ 46,000 ಮನೆಗಳನ್ನು ಅವರು ಅರ್ಹ ಫಲಾನುಭವಿಗಳಿಗೆ ವಿತರಿಸಿ, ಶುಭ ಹಾರೈಸಿದರು. ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ನಮ್ಮ ಕಾಂಗ್ರೆಸ್ ಸರ್ಕಾರ 14,58,000 ಮನೆಗಳನ್ನು ಕಟ್ಟಿ ಇತಿಹಾಸ ನಿರ್ಮಿಸಿ ವಸತಿ ಕ್ರಾಂತಿ ಮಾಡಿದ್ದೆವು. ಎರಡನೇ ಬಾರಿ ಮುಖ್ಯಮಂತ್ರಿ ಆದ ಬಳಿಕ 2024ರಲ್ಲಿ 36,789 ಮನೆಗಳನ್ನು ಮೊದಲನೇ ಹಂತದಲ್ಲಿ ವಿತರಿಸಿದ್ದ ನಮ್ಮ ಸರ್ಕಾರ ಎರಡನೇ ಹಂತದಲ್ಲಿ 45 ಸಾವಿರ ಮನೆಗಳನ್ನು ಹಂಚುತ್ತಿದ್ದೇವೆ ಎಂದರು. ನಾವು ಹೇಳಿದ್ದನ್ನೆಲ್ಲಾ ಮಾಡಿ ನುಡಿದಂತೆ ನಡೆದಿದ್ದೇವೆ. ಅವರು ಹೇಳಿದ್ದನ್ನು ಮಾಡದೇ ನಮ್ಮ ಬಗ್ಗೆ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ. ವಿದೇಶದಿಂದ ಕಪ್ಪು ಹಣ ತಂದು ಎಲ್ಲರ ಖಾತೆಗೆ 15 ಲಕ್ಷ ಹಾಕ್ತೀವಿ ಅಂದರು. ಹಾಕಿದ್ರಾ? ಮಹದಾಯಿ, ಕೃಷ್ಣ ಮೇಲ್ದಂಡೆ, ಭದ್ರಾ ಮೇಲ್ದಂಡೆ ಎಲ್ಲದರಲ್ಲೂ ಬಿಜೆಪಿ ಮತ್ತು ಕೇಂದ್ರ ಸರ್ಕಾರ ಮಾತು ತಪ್ಪಿದೆ. ರಾಜ್ಯದ ಜನತೆಗೆ ವಂಚಿಸಿದೆ ಎಂದು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರು ಇದಕ್ಕೆಲ್ಲಾ ಉತ್ತರಿಸಬೇಕು. ಒಂದು ಮನೆಗೆ 4 ರಿಂದ 5 ಲಕ್ಷ ರೂಪಾಯಿಯನ್ನು ಕೊಡೋದು ರಾಜ್ಯ ಸರ್ಕಾರ. ಕೇಂದ್ರ ಕೊಡೋದು ಒಂದು ಲಕ್ಷಕ್ಕಿಂತ ಕಡಿಮೆ. ಆದರೆ, ಹೆಸರು ಮಾತ್ರ ಪ್ರಧಾನ ಮಂತ್ರಿ ಆವಾಸ್ ಯೋಜನೆ. ಹಣ ನಮ್ಮದು, ರಾಜ್ಯ ಸರ್ಕಾರದ್ದು. ಹೆಸರು ಮಾತ್ರ ಕೇಂದ್ರದ್ದು ಎಂದು ಟೀಕಿಸಿದರು. ನಮ್ಮ ಸರ್ಕಾರ ಬಂದ ಬಳಿಕ 5,500 ಕೋಟಿ ರೂ. ಹಣವನ್ನು ಮನೆಗಳಿಗಾಗಿ ಖರ್ಚು ಮಾಡಿದ್ದೇವೆ. ಇಷ್ಟೆಲ್ಲಾ ಆದರೂ ಸರ್ಕಾರದ ಬೊಕ್ಕಸ ಖಾಲಿ ಎಂದು ಬಿಜೆಪಿ ಸುಳ್ಳು ಹಂಚುತ್ತಾ ತಿರುಗುತ್ತಿದೆ. ರೈತರ ಪಂಪ್ ಸೆಟ್ ಗಳಿಗೆ ಪ್ರತಿ ವರ್ಷ 2500 ಕೋಟಿ ಸಬ್ಸಿಡಿ ಕೊಡುತ್ತಿದ್ದೇವೆ. ಇದರ ಜೊತೆಗೆ ವಿಧವಾ ವೇತನ, ವೃದ್ದಾಪ್ಯ ವೇತನ ಸೇರಿ ಪ್ರತಿಯೊಂದಕ್ಕೂ ಹೇರಳವಾಗಿ ಹಣ ಬಿಡುಗಡೆ ಮಾಡುತ್ತಲೇ ಇದ್ದೇವೆ ಎಂದರು.

**ಇಂದಿರಾ ಗಾಂಧಿ ಕಾಲದಿಂದ ಬಡವರಿಗೆ ಮನೆ ಕೊಡುವುದು ಪ್ರಾರಂಭವಾಯಿತು :** ಇದೇ ವೇಳೆ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಮನೆ ಹಂಚಿಕೆ ಕಾರ್ಯಕ್ರಮ ಹುಬ್ಬಳ್ಳಿ ಇತಿಹಾಸದಲ್ಲಿ ಅತೀ ದೊಡ್ಡ ಕಾರ್ಯಕ್ರಮ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರು ಆಗಮಿಸಿದ್ದು ನೋಡಿದ್ರೆ ನೀವೆಲ್ಲ ಎಷ್ಟೊಂದು ಸರ್ಕಾರವನ್ನು ಪ್ರೀತಿಸುತ್ತೀರಿ ಎಂಬುದು ಎದ್ದು ಕಾಣುತ್ತದೆ. ಇಂತ ಕಾರ್ಯಕ್ರಮ ಸಾಧ್ಯವಾಗುವುದು ಕಾಂಗ್ರೆಸ್ ಸರ್ಕಾರದಲ್ಲಿ ಮಾತ್ರ.

ಇಂದಿರಾ ಗಾಂಧಿ ಕಾಲದಿಂದ ಬಡವರಿಗೆ ಮನೆ ಕೊಡುವುದು ಪ್ರಾರಂಭವಾಯಿತು. ಬಡವರ ಪರ ಕಾಳಜಿ ಇರುವವರು ಮಾತ್ರ ಇದನ್ನು ಮಾಡಲು ಸಾಧ್ಯ. ಐದು ಗ್ಯಾರಂಟಿ ಮಾಡಿದ್ದು ನಾವು. ಬಿಜೆಪಿ ,ಮೋದಿಯವರು ದೇಶಕ್ಕ ಏನು ಮಾಡಿದ್ದಾರೆ ಹೇಳಲಿ ಎಂದು ಸವಾಲು ಹಾಕಿದರು. ಬೆಳಗಾವಿಯಿಂದ ಕೋಲಾರ, ಬೀದರ್‌ನಿಂದ ಮೈಸೂರುವರೆಗೆ ಇರುವ ರಾಜ್ಯವನ್ನು ತೆಗೆದುಕೊಂಡು ಹೋಗಬೇಕಿದೆ. ಆಗಿನ ಕಾಲದಲ್ಲಿ ನಾವು ಮಾಡಿದ ಜನಸೇವೆಯಿಂದ ಜನ ಉಸಿರಾಡುತ್ತಿದ್ದಾರೆ. ನೀವು ಬೈಯುವುದು ಬಿಟ್ಟು ಏನೂ ಮಾಡಿಲ್ಲ. ಮನಮೋಹನ್ ಸಿಂಗ್, ಸೋನಿಯಾ ಗಾಂಧಿ ಪ್ರಾರಂಭಿಸಿದ ಮನರೇಗಾ ಯೋಜನೆಯನ್ನು ತೆಗೆದು ವಿಜಿ ರಾಮ್ ಜಿ ಯೋಜನೆ ತಂದಿದ್ದಾರೆ. ರಾಜ್ಯ ಸರ್ಕಾರದ ಮೇಲೆ ಭಾರ ಹಾಕಿ ನಾವು ಕೆಲಸ ಕೊಡುತ್ತಿದ್ದೇವೆ ಅಂತಿದ್ದಾರೆ. ನಾವು ಹೋರಾಟ ಮಾಡುವ ಮೂಲಕ ಮನರೇಗಾ ಯಥಾಸ್ಥಿತಿ ಮುಂದುವರೆಸುವುದಾಗಿ ಹೇಳಿದರು.

**ರಾಜ್ಯ ಸರ್ಕಾರದಿಂದ ಅದ್ದೂರಿ ಸಮಾರಂಭ**

**ಖರ್ಗೆ, ಸಿಎಂ ಸಿದ್ದರಾಮಯ್ಯ ಭಾಗಿ**



**ಕುಸಿದು ಬಿದ್ದ ಕಟೌಟ್‌ಗಳು**

**ಬಿಜೆಪಿ ಕಾರ್ಯಕರ್ತರಿಂದ ಭಾರೀ ಪ್ರತಿಭಟನೆ**

**ಕೇಂದ್ರ ಸಚಿವರನ್ನ ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ**

### ಫಲಾನುಭವಿಗಳ ಮನದಾಳ

ಫಲಾನುಭವಿಗಳಲ್ಲಿ ಓರ್ವರಾದ ಸರೋಜಾದೇವಿ ನಾಗೇದ್ರ ಪೂಜಾರಿ ಸರ್ಕಾರಕ್ಕೆ ಧನ್ಯವಾದ ಸಲ್ಲಿಸಿದರು. ''ನಾವು ಈ ಮನೆಗಾಗಿ ಬರೋಬ್ಬರಿ 13 ವರ್ಷಗಳ ಹಿಂದೆ ಅರ್ಜಿಯನ್ನು ಸಲ್ಲಿಸಿದ್ದೆವು. ಅಂದಿನಿಂದ ಇಂದಿನವರೆಗೆ ನಮ್ಮ ಸ್ವಂತ ಮನೆಯ ಕನಸು ಕೈಗೂಡಬಹುದು ಎಂಬ ನಿರೀಕ್ಷೆಯಲ್ಲಿದ್ದೆವು, ಯೋಜನೆಯ ನಿಯಮದಂತೆ ಅಂದೇ 78 ಸಾವಿರ ರೂಪಾಯಿಗಳನ್ನು ಕಂತಿನ ರೂಪದಲ್ಲಿ ಪಾವತಿಸಲಾಗಿತ್ತು. ಈಗ ಮನೆ ಕೈಸೇರುತ್ತಿರುವುದು ನೆಮ್ಮದಿ ತಂದಿದೆ ಎಂದು ಅವರು ತಿಳಿಸಿದರು. ಇಷ್ಟು ವರ್ಷಗಳ ನಂತರ ನಮ್ಮ ಹಕ್ಕು ನಮಗೆ ಸಿಕ್ಕಿದೆ'' ಸಂತಸ ವ್ಯಕ್ತಪಡಿಸಿದರು.ಮತ್ತೋರ್ವ ಫಲಾನುಭವಿ ಮೋದಿನಸಾಬ ಜಂಡಿರಸಾಬ ಕಾಗದಗರ ಖುಷಿ ವ್ಯಕ್ತಪಡಿಸುತ್ತಾ, ''ದೈಹಿಕ ಅಶಕ್ತತೆಯಿಂದಾಗಿ ನಮಗೆ ಬೇರೆಯವರಂತೆ ದುಡಿಯಲು ಆಗುವುದಿಲ್ಲ. ಸ್ವಂತ ಮನೆ ಎಂಬುದು ನಮಗೆ ಕನಸಾಗಿತ್ತು. ನಮ್ಮ ಕಷ್ಟವನ್ನು ಅರಿತ ಸರ್ಕಾರವು ನಮಗೆ ಮನೆ ಮಂಜೂರು ಮಾಡಿದೆ. ಈಗ ನಾವು ನೆಮ್ಮದಿಯಿಂದ ತಲೆ ಚಾಚಲು ಒಂದು ಆಸರೆ ಸಿಕ್ಕಿದೆ'' ಎಂದು ಹೇಳಿದರು.

### ಸ್ವಾತಂತ್ರ್ಯ ಹಾಗೂ ಸಂವಿಧಾನ ಕಾಪಾಡಿಕೊಳ್ಳಬೇಕಿದೆ

ಕೇಂದ್ರದಿಂದ ಬರಬೇಕಾದ ಅನುದಾನ ಬರುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಇರುವುದರಿಂದ ಮಲತಾಯಿ ಧೋರಣೆ ಮಾಡುತ್ತಿದ್ದಾರೆ. ಮೊಂಡ ಕೇಂದ್ರ ಸರ್ಕಾರಕ್ಕೆ ಪಾಠ ಕಲಿಸಲು ಬಡವರೆಲ್ಲ ಒಂದಾಗಬೇಕಿದೆ. ಸ್ವಾತಂತ್ರ್ಯ ಹಾಗೂ ಸಂವಿಧಾನ ಕಾಪಾಡಿಕೊಳ್ಳಬೇಕಿದೆ. ಜನರನ್ನು ಗುಲಾಮಗಿರಿ ಮಾಡಲು ಈ ಯೋಜನೆ ಜಾರಿ ಮಾಡುತ್ತಿದ್ದಾರೆ. ಬಿಜೆಪಿಯವರು ಸ್ವಾತಂತ್ರ್ಯ ಹೋರಾಟ ಮಾಡದೆ ಪುಕ್ಕಟೆ ಕುರ್ಚಿ ಮೇಲೆ ಕುಳಿತ್ತಿದ್ದೀರಿ. ಇಲ್ಲಿನವರು ಸತ್ತರೂ ಮೋದಿಯವರು ಜಗತ್ತು ಸುತ್ತುತ್ತಿದ್ದಾರೆ. ಸರ್ಕಾರಿ ಕಾರ್ಯಕ್ರಮದಲ್ಲಿ ಭಾಷಣ ಮಾಡದೇ ಮೋದಿಯವರು ರಾಜಕೀಯ ಭಾಷಣ ಮಾಡುತ್ತಾರೆ ಎಂದಿದ್ದಾರೆ. ರಾಜ್ಯ ಸರ್ಕಾರದ ಭಾಷಣ ಓದಬಾರದು ಎಂದು ಪ್ರಧಾನಿ ಕಚೇರಿಯಿಂದ ರಾಜ್ಯಪಾಲರಿಗೆ ಆದೇಶ ಬರುತ್ತಿದೆ. ಬಿಜೆಪಿ ಹೊರತುಪಡಿಸಿದ ರಾಜ್ಯಗಳಲ್ಲಿ ರಾಜ್ಯಪಾಲರನ್ನು ತಾವು ಹೇಳಿದಂತೆ ಕೇಳುವಂತೆ ಮಾಡಿದ್ದಾರೆ. ರಾಜ್ಯಪಾಲರನ್ನು ಕೇಂದ್ರ ಸರ್ಕಾರ ಕೈಗೊಂಬೆ ಮಾಡಿಕೊಂಡಿದೆ. ದೇಶ ಮೊದಲು ಅಂತ ಹೇಳುವುದಿಲ್ಲ. ಆರ್‌ಎಸ್‌ಎಸ್ ಮೊದಲು ಅಂತ ಹೇಳುತ್ತಿದ್ದಾರೆ. ಇಂತಹ ಸರ್ಕಾರಕ್ಕೆ ಬುದ್ದಿ ಕಲಿಸಬೇಕು ಎಂದು ಕರೆ ನೀಡಿದರು.

### ಕಿಮ್ಸ್‌ಗೆ ಪೊಲೀಸ್ ಆಯುಕ್ತರ ಭೇಟಿ

ಘಟನೆ ಸಂಭವಿಸುತ್ತಿದ್ದಂತೆ ಗಾಯಾಳುಗಳನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ವಿಷಯ ತಿಳಿಯುತ್ತಿದ್ದಂತೆಯೇ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರಾದ ಎನ್.ಶಶಿಕುಮಾರ್ ಅವರು ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಅವರೊಂದಿಗೆ ಜಿಲ್ಲಾ ಆರೋಗ್ಯ ಅಧಿಕಾರಿ ಸತೀಶ್ ಹೋನಕೇರಿ ಕೂಡ ಭೇಟಿ ನೀಡಿ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದರು. ಅವಘಡದಲ್ಲಿ ಮಂಜುನಾಥ್, ಶಾಂತಾ ಹಾಗೂ ಶಂಕರ್ ಎಂಬುವವರಿಗೆ ಗಾಯಗಳಾಗಿವೆ. ಗಾಯಾಳುಗಳ ಪೈಕಿ ಓರ್ವನನ್ನು ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದರೆ, ಉಳಿದ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



### ಕಟೌಟ್ ಬಿದ್ದು ಗಂಭೀರ ಗಾಯಗೊಂಡವರನ್ನು ಭೇಟಿ

ನಗರದ ಮಂಟೂರ ರಸ್ತೆ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಏರ್ಪಡಿಸಿದ್ದ ಮನೆ ಹಂಚಿಕೆ ಕಾರ್ಯಕ್ರಮಕ್ಕೆ ಬಂದವರ ಮೇಲೆ ಕಟೌಟ್ ಬಿದ್ದು ಗಂಭೀರ ಗಾಯಗೊಂಡವರನ್ನು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಕೆಎಂಸಿ-ಆರ್‌ಐ ಹಾಗೂ ಸುಚಿರಾಯು ಆಸ್ಪತ್ರೆಯಲ್ಲಿ ಗಾಯಗೊಂಡಿರುವ ಬ್ಯಾಹಟ್ಟಿ ಗ್ರಾಮದ ಶಂಕರ ಹಡಪದ ಹಾಗೂ ಗಂಗಾಧರ ನಗರದ ಶಾಂತಾ ಕ್ಯಾರಕಟ್ಟಿ ಅವರನ್ನು ಸುಚಿರಾಯು ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದ ಸಚಿವರು ಅಗತ್ಯ ಚಿಕಿತ್ಸೆ ನೀಡುವಂತೆ ಸೂಚಿಸಿದರು.

# ಹಾಸನದಲ್ಲಿ ಜೆಡಿಎಸ್ ಶಕ್ತಿ ಪ್ರದರ್ಶನ, ಕಾರ್ಯಕರ್ತರ ಅವಿರತ ಶ್ರಮಕ್ಕೆ ಗೌಡರ ಮೆಚ್ಚುಗೆ

## ಜೆಡಿಎಸ್‌ಗೆ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೃಹತ್ ಸಮಾವೇಶ, ಹರದನಹಳ್ಳಿಯಲ್ಲಿ ಕುಲ ದೇವರು ದೇವೇಶ್ವರನಿಗೆ ಪೂಜೆ

• ಉದಯವಾಹಿನಿ, ಬೆಂಗಳೂರು

ಜೆಡಿಎಸ್ ರಜತ ಮಹೋತ್ಸವದ ಅಂಗವಾಗಿ ಶನಿವಾರ ಜಿಲ್ಲೆಯಲ್ಲಿ ಬೃಹತ್ ಕಾರ್ಯಕರ್ತರ ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನ ನಡೆಸಲಾಯಿತು. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಸಮಾವೇಶ ನಡೆಸಿ ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಲಾಯಿತು. ಹಾಸನದ ಹೊರವಲಯದ ಹುಡ ಬಡಾವಣೆಯಲ್ಲಿ ಸಮಾವೇಶ ಆಯೋಜಿಸಲಾಗಿತ್ತು. ಸಮಾವೇಶಕ್ಕೂ ಮುನ್ನ ದೇವೇಗೌಡರು ತಮ ಕುಲ ದೇವರಾದ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿಯ ದೇವೀಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದರು. ಬಳಿಕ ಮಾವಿನಕೆರೆಯ ರಂಗನಾಥಸ್ವಾಮಿ ದೇವಾಲಯದಲ್ಲೂ ವಿಶೇಷ ಪೂಜೆಯನ್ನು ದೇವೇಗೌಡರು ಸಲ್ಲಿಸಿದರು.

ಸಮಾವೇಶದಲ್ಲಿ ಅಳವಡಿಸಿದ್ದ ರ್ಯಾಂಪ್ ಮೇಲೆ ಬ್ಯಾಟರಿ ಚಾಲಿತ ಗಾಲಿ ಕುರ್ಚಿಯಲ್ಲಿ ಕುಳಿತು ಗೌಡರು ನೆರೆದಿದ್ದ ಅಪಾರ ಸಂಖ್ಯೆಯ ಕಾರ್ಯಕರ್ತರತ್ತ ಕೈಬೀಸಿ ಹರ್ಷ ವ್ಯಕ್ತಪಡಿಸುತ್ತಾ ವೇದಿಕೆಗೆ ಆಗಮಿಸಿದರು.ದೇವೇಗೌಡರೊಂದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಕೂಡ ರ್ಯಾಂಪ್ ಮೇಲೆ ವೇದಿಕೆಯತ್ತ ಬಂದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಚ್.ಡಿ.ರೇವಣ್ಣ, ಶಾಸಕರಾದ ಸ್ವರೂಪ್ ಪ್ರಕಾಶ್, ಸೂರಜ್ ರೇವಣ್ಣ ಅವರು ಸಾಥ್ ನೀಡಿದರು. ದೇವೇಗೌಡರು ವೇದಿಕೆಗೆ ಆಗಮಿಸುತ್ತಿದ್ದಂತೆ ನೆರೆದಿದ್ದ ಕಾರ್ಯಕರ್ತರು ಹರ್ಷೋದ್ಗಾರ ವ್ಯಕ್ತಪಡಿಸಿ ಸಂಭ್ರಮಿಸಿದರು.

**ಕಾಂಗ್ರೆಸ್ ವಿರುದ್ಧ ವಾಗ್ದಾಳಿ**

ಹಾಸನ ಜಿಲ್ಲೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಈಗಾಗಲೇ ಎರಡು ಸಮಾವೇಶಗಳನ್ನು ನಡೆಸುವ ಮೂಲಕ ಜೆಡಿಎಸ್ ಭದ್ರಕೋಟೆಯನ್ನು ಭೇದಿಸಲು ಮುಂದಾಗಿತ್ತು. ಅಲ್ಲದೆ, ಪಕ್ಷಸಂಘಟನೆಗೆ ಒತ್ತು ಕೊಟ್ಟಿತ್ತು. ಇದರಿಂದ ಆಕ್ರೋಶಗೊಂಡ ಜೆಡಿಎಸ್ ವರಿಷ್ಠರು ಕಾಂಗ್ರೆಸ್ ಸಮಾವೇಶಕ್ಕಿಂತಲೂ ಮಿಗಿಲಾದ ಪಕ್ಷದ ಸಮಾವೇಶ ನಡೆಸಿ ಜೆಡಿಎಸ್ ನೆಲೆ ಹಾಸನದಲ್ಲಿ ಭದ್ರವಾಗಿದೆ ಎಂಬುದನ್ನು ಸಾಬೀತುಪಡಿಸಲು ಈ ಬೃಹತ್ ಸಮಾವೇಶ ನಡೆಸಿದರು.



ಸಮಾವೇಶದಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ಶಾಸಕರಾದ ಎ.ಮಂಜು, ಸಿ.ಎನ್.ಬಾಲಕೃಷ್ಣ, ಶಾರದಾ ಪೂರ್ಯನಾಯಕ್, ಬೋಜೇಗೌಡ, ಮಾಜಿ ಸಚಿವರಾದ ಎಚ್.ಕೆ.ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು ಸೇರಿದಂತೆ ಅಪಾರ ಸಂಖ್ಯೆಯ ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು.

### ಕಾರ್ಯಕ್ರಮದ ಯಶಸ್ಸಿಗೆ ಜಿಲ್ಲೆಯ ನಾಯಕರು ಮತ್ತು ಕಾರ್ಯಕರ್ತರು ಶ್ರಮಿಸಿದ್ದಾರೆ

ಜೆಡಿಎಸ್ ಪಕ್ಷ ಉಳಿಸಬೇಕೆಂಬ ಉದ್ದೇಶದಿಂದ ಜಿಲ್ಲೆಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತಿಳಿಸಿದರು. ಹೊಳೆನರಸೀಪುರದ ಹರದನಹಳ್ಳಿಯಲ್ಲಿ ಕುಲ ದೇವರು ದೇವೇಶ್ವರನಿಗೆ ಪೂಜೆ ಸಲ್ಲಿಸಿದ ನಂತರ ಮಾತನಾಡಿದ ಅವರು, ಮೊದಲ ಬಾರಿಗೆ ಹಾಸನದಲ್ಲಿ ಜೆಡಿಎಸ್‌ಗೆ 25 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬೃಹತ್ ಸಮಾವೇಶ ನಡೆಸಲಾಗುತ್ತಿದೆ ಎಂದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೇಂದ್ರ ಸಚಿವ ಕುಮಾರಸ್ವಾಮಿ ಸೇರಿದಂತೆ ಎಲ್ಲಾ ನಾಯಕರು, ಮುಖಂಡರು ಬಂದಿದ್ದೇವೆ. ಕಾರ್ಯಕ್ರಮದ ಯಶಸ್ಸಿಗೆ ಜಿಲ್ಲೆಯ ನಾಯಕರು ಮತ್ತು ಕಾರ್ಯಕರ್ತರು ಶ್ರಮಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲೆಯ ವಿವಿಧ ತಾಲ್ಲೂಕು ಹಾಗೂ ಕ್ಷೇತ್ರಗಳಿಂದ ಹಾಸನಕ್ಕೆ ಜೆಡಿಎಸ್ ಕಾರ್ಯಕರ್ತರ ದಂಡೇ ಹರಿದುಬಂದಿತ್ತು. ಜನರು ಸಮಾವೇಶಕ್ಕೆ ಬರಲು ಅನುಕೂಲವಾಗುವಂತೆ ಬಸ್ಸು ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಕಳೆದ ವಿಧಾನಸಭಾ ಹಾಗೂ ಲೋಕಸಭೆ ಚುನಾವಣೆ ನಂತರ ಜೆಡಿಎಸ್ ನಡೆಸಿದ ಬೃಹತ್ ಸಮಾವೇಶ ಇದಾಗಿತ್ತು. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವುದು ಹಾಗೂ ಪಕ್ಷ ಸಂಘಟನೆಗೆ ಒತ್ತು ನೀಡುವುದು ಸಮಾವೇಶದ ಪ್ರಮುಖ ಉದ್ದೇಶವಾಗಿತ್ತು.ಮುಖ್ಯ ವೇದಿಕೆ ಮುಂಭಾಗದಲ್ಲಿ ಸುಮಾರು ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಲಾಗಿತ್ತು. ಸಮಾವೇಶದ ಭದ್ರತೆಗೆ ಸುಮಾರು 1,400 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.ನಗರದಲ್ಲಿ ಸಮಾವೇಶಕ್ಕೆ ಆಗಮಿಸುವ ಪಕ್ಷದ ನಾಯಕರಿಗೆ ಸ್ವಾಗತ ಕೋರುವ ಫ್ಲೆಕ್ಸ್, ಬ್ಯಾನರ್, ಕಟೌಟ್‌ಗಳು ಕೂಡ ರಾರಾಜಿಸುತ್ತಿದ್ದವು.

**ಈ ದಿನದ ದರ** ಪೆಟ್ರೋಲ್: 103.62 ₹/L | ಡೀಸೆಲ್ : 91.67 ₹/L | ಬಂಗಾರ: ₹16,026/Gram(24ct) ₹14,690/Gram(22ct) | ಬೆಳ್ಳಿ: ₹335.00/Gram

## ದಾಸರ ಪದಗಳ ಗಾಯನ

• ಉದಯವಾಹಿನಿ, ಬೆಂಗಳೂರು



ಪದ್ಮನಾಭನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಧ್ವ ನವಮಿ ಪ್ರಯುಕ್ತ ಜನವರಿ 27, ಮಂಗಳವಾರ ಸಂಜೆ 6-30ಕ್ಕೆ ವಿದ್ವಾನ್ ಶ್ರೀ ಅನಂತಕುಲಕರ್ಣಿ ಮತ್ತು ಸಂಗಡಿಗರಿಂದ ದಾಸರ ಪದಗಳ ಗಾಯನ. ಸ್ಥಳ ; ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಆರ್.ಕೆ. ಲೇಔಟ್, ಪದ್ಮನಾಭನಗರ, ಬೆಂಗಳೂರು-560070

## ಸುಗ್ಗಿ ಸಂಭ್ರಮ ಕಾರ್ಯಕ್ರಮ




ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಲಯನ್ಸ್ ಇಂಟರ್‌ನ್ಯಾಷನಲ್ ಮತ್ತು ಸಿಂಚ ಚಾರಿಟೆಬಲ್ ಟ್ರಸ್ಟ್, ಬೆಂಗಳೂರಿನ ಶ್ರೀ ಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸುಗ್ಗಿ ಸಂಭ್ರಮ ಕಾರ್ಯಕ್ರಮವನ್ನು ವಿಧಾನಪರಿಷತ್‌ನ ಮಾಜಿ ಸದಸ್ಯರಾದ ಶ್ರೀ ಯು ಬಿ ವೆಂಕಟೇಶ್ ಅವರು ಉದ್ಘಾಟಿಸಿದರು. ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಶಂಕರ್ ಎಸ್ ಎನ್, ಹಿರಿಯ ಪತ್ರಕರ್ತ ಶ್ರೀ ಸುಧೀಂದ್ರ ರಾವ್, ಲಯನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಶ್ರೀ ಕೆ ಈಶ್ವರನ್, ಡಾ. ಶಶಿಧರ್ ಗಂಜಿಗಟ್ಟಿ, ಡಾ. ನಾಗೇಶ್ ರಾವ್, ಶ್ರೀ ವೀರಭದ್ರ ಬ್ಯಾಡಗಿ, ಶ್ರೀಮತಿ ಎನ್ ಮಾಲಿನಿ, ಶ್ರೀಮತಿ ಚಂಪಕಾವತಿ, ಶ್ರೀಮತಿ ಮಮತಾ ಸುಂದರರಾಜು ಮುಂತಾದ ಗಣ್ಯರು ಉಪಸ್ಥಿತರಿದ್ದರು ನೂತನ ವರ್ಷವನ್ನು ಸ್ವಾಗತಿಸುವ ಈ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಅಶಕ್ತ ಮಹಿಳೆಯರಿಗೆ ಸಹಾಯಧನವನ್ನು ವಿತರಿಸಲಾಯಿತು.

## 4 ಎಕರೆ ಸರ್ಕಾರಿ ಭೂಮಿ ಒತ್ತುವರಿ ತೆರವು

• ಉದಯವಾಹಿನಿ, ಬೆಂಗಳೂರು

ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ರೂ.13.71 ಕೋಟಿ ಮೌಲ್ಯದ 4.04 ಎಕರೆ ಸರ್ಕಾರಿ ಜಮೀನು ವಶಕ್ಕೆ ಪಡೆಯಲಾಗಿದೆ.ಜಿಲ್ಲೆಯಾದ್ಯಂತ ವಿವಿಧ ತಾಲ್ಲೂಕು ತಹಶೀಲ್ದಾರರು ತಮ್ಮ ವ್ಯಾಪ್ತಿಯಲ್ಲಿ ಒತ್ತುವರಿಯಾಗಿದ್ದ ಗುಂಡುತೋಪು, ರಾಜಕಾಲುವೆ. ಸ್ಮಶಾನ ಜಾಗಕ್ಕೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ತಿಳಿಸಿದ್ದಾರೆ. ದಾಸನಪುರ ಹೋಬಳಿಯ ಬೈಲುಕೋನೇನಹಳ್ಳಿ ಗ್ರಾಮದಲ್ಲಿ ರೂ.5 ಕೋಟಿ ಮೌಲ್ಯದ 1.04 ಎಕರೆ ಗುಂಡುತೋಪು, ವರ್ತೂರು ಹೋಬಳಿಯ ಹರಳೂರು ಗ್ರಾಮದಲ್ಲಿ ರೂ.4.40 ಕೋಟಿ ಮೌಲ್ಯದ 22 ಗುಂಟೆ ಗುಂಡುತೋಪು, ಬಿದರಹಳ್ಳಿ ಹೋಬಳಿ ದೊಡ್ಡಗುಬ್ಬಿ ಗ್ರಾಮದಲ್ಲಿ ರೂ.1 ಕೋಟಿ ಮೌಲ್ಯದ 2 ಗುಂಟೆ ಗುಂಡುತೋಪು, ಅತ್ತಿಬೆಲೆ ಹೋಬಳಿಯ ವೀರಸಂದ್ರ ಗ್ರಾಮದಲ್ಲಿ ರೂ.18 ಲಕ್ಷ ಮೌಲ್ಯದ 4 ಗುಂಟೆ ರಾಜ ಕಾಲುವೆ ಒತ್ತುವರಿ ತೆರವು ಮಾಡಲಾಗಿದೆ. ತಾವರಕೆರೆ ಹೋಬಳಿ ಮಾರೇನಹಳ್ಳಿ ಗ್ರಾಮದಲ್ಲಿ ರೂ. 66 ಲಕ್ಷ ಮೌಲ್ಯದ 22 ಗುಂಟೆ ಗುಂಡುತೋಪು, ನಾಗನಹಳ್ಳಿ ಗ್ರಾಮದಲ್ಲಿ ರೂ. 57 ಲಕ್ಷ ಮೌಲ್ಯದ 19 ಗುಂಟೆ ಗುಂಡುತೋಪು ರೂ.1.38 ಕೋಟಿ ಮೌಲ್ಯದ 1.06 ಗುಂಟೆ, ದಾಸನಪುರ ಹೋಬಳಿಯ ಸೊಂಡೇಕೊಪ್ಪ ಗ್ರಾಮದಲ್ಲಿ ರೂ.52 ಲಕ್ಷ ಮೌಲ್ಯದ 5 ಗುಂಟೆ ಜಾಗವನ್ನು ತೆರವು ಮಾಡಲಾಗಿದೆ.

## ಸಂಸದರ ಹೆಸರು ಹೇಳಿ ವಂಚನೆ: ರೂ.1.53 ಕೋಟಿ ವಂಚನೆ ಪ್ರಕರಣಕ್ಕೆ ತಿರುವು

• ಉದಯವಾಹಿನಿ, ಬೆಂಗಳೂರು

ಮದುವೆ ಆಗುವುದಾಗಿ ನಂಬಿಸಿ, ರೂ.1.53 ಕೋಟಿ ಪಡೆದು ಮಹಿಳಾ ಟೆಕಿಗೆ ವಂಚಿಸಿದ್ದ ಪ್ರಕರಣದ ಆರೋಪಿ ವಿಜಯ್‌ರಾಜ್ ಗೌಡ ಅವರು ಹಲವು ಪ್ರಕರಣಗಳಲ್ಲಿ ಭಾಗಿ ಆಗಿರುವುದು ಪೊಲೀಸ್ ತನಿಖೆಯಿಂದಗೊತ್ತಾಗಿದೆ.

ವೈಟ್‌ಫೀಲ್ಡ್ ನಿವಾಸಿ, 29 ವರ್ಷದ ಯುವತಿ ನೀಡಿದ ದೂರು ಆಧರಿಸಿ, ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಜ.19ರಂದು ವಿಜಯ್ ರಾಜ್ ಅವರನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದಾಗ ಇದೇ ರೀತಿಯ ಹಲವು ಪ್ರಕರಣಗಳಲ್ಲಿ ಆರೋಪಿ ಭಾಗಿಯಾಗಿರುವುದು ಪತ್ತೆಯಾಗಿದೆ. ವಿಜಯ್ ರಾಜ್ ವಿರುದ್ಧ ಕುಣಿಗಲ್, ಅತ್ತಿಬೆಲೆ, ಶಿವಮೊಗ್ಗ, ಕಾಡುಗೋಡಿ ಸೇರಿದಂತೆ ರಾಜ್ಯದ ನಾನಾ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಮಾಜಿ ಸಂಸದರೊಬ್ಬರ ಹೆಸರು ಹೇಳಿಕೊಂಡು ಎಂಟು ವರ್ಷಗಳಿಂದ ಹಲವು ಮಂದಿಗೆ ವಂಚಿಸಿರುವುದು ಪೊಲೀಸರ ವಿಚಾರಣೆಯಿಂದ ಪತ್ತೆಯಾಗಿದೆ. ಮದುವೆ ಆಗುವುದಾಗಿ ನಂಬಿಸಿ, ಲಕ್ಷಾಂತರ ರೂಪಾಯಿ ಮೋಸ ಮಾಡಿರುವುದಾಗಿ ಆರೋಪಿಸಿ, ಯುವತಿ ನೀಡಿದ ದೂರಿನ ಮೇರೆಗೆ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ವಿಜಯ್ ರಾಜ್ ವಿರುದ್ಧ ಝೀರೋ ಎಫ್‌ಐಆರ್ ದಾಖಲಾಗಿತ್ತು.

## ತೇಜಸ್ವಿಗೆ ಅರ್ಥಪೂರ್ಣ ಪುಷ್ಪ ಗೌರವ

• ಉದಯವಾಹಿನಿ, ಬೆಂಗಳೂರು

ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಉದ್ಯಾನದಲ್ಲಿ ಪೂರ್ಣಚಂದ್ರ ತೇಜಸ್ವಿ ಬದುಕು ಬರಹ ಆಧರಿತ ಫಲಪುಷ್ಪ ಪ್ರದರ್ಶನ ಪರಿಸರ ಜಾಗೃತಿ ಮೂಡಿಸುವ ಉತ್ತಮ ಮಾದರಿ ಎಂದು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ್ ಕೆಂಜಿಗೆ ಹೇಳಿದರು. ತೋಟಗಾರಿಕೆ ಇಲಾಖೆ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಜಂಟಿಯಾಗಿ ಆಯೋಜಿಸಿರುವ ತೇಜಸ್ವಿ ವಿಸ್ಮಯ ಫಲಪುಷ್ಪ ಪ್ರದರ್ಶನ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು. ನಿರೀಕ್ಷೆ ಮೀರಿ ತೇಜಸ್ವಿ ಕುರಿತಾದ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ. ಗ್ಯಾಲರಿ, ಕ್ಯಾರಿಕೇಚರ್, ಛಾಯಾಚಿತ್ರ, ಪುಸ್ತಕಗಳು ಗಮನ ಸೆಳೆಯುತ್ತಿವೆ. ಇದು ತೇಜಸ್ವಿ ಅವರಿಗೆ ಸಲ್ಲಿಸಿರುವ ಪುಷ್ಪ ಗೌರವ' ಎಂದು ಬಣ್ಣಿಸಿದರು. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪನಿರ್ದೇಶಕ ಬಾಲಕೃಷ್ಣ ಉಪಸ್ಥಿತರಿದ್ದರು.

# ಕಾನೂನು, ಸುವ್ಯವಸ್ಥೆಗೆ ಧಕ್ಕೆ ಮಾಡುವ ವ್ಯಕ್ತಿಗಳಿಗೆ ಆಡಳಿತ ವ್ಯವಸ್ಥೆ ಮಣಿಯಬಾರದು

### ಜಾತ್ರಾ, ಮಹೋತ್ಸವ ನಡೆಸಲು ಶಾಂತಿ ಸಭೆ ಮಾಡಲು ಪೊಲೀಸ್ ಇನ್ಸ್‌ಪೆಕ್ಟರ್, ತಹಶೀಲ್ದಾರ್‌ಗೆ ನಿರ್ದೇಶನ ನೀಡಿದೆ

• ಉದಯವಾಹಿನಿ, ಬೆಂಗಳೂರು

ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಮಾಡುವುದಕ್ಕಾಗಿ ಇರುವ ಕೆಲವು ವ್ಯಕ್ತಿಗಳ ನಡುವಳಿಕೆಗೆ ಆಡಳಿತ ವ್ಯವಸ್ಥೆ ಮಣಿಯುವಂತಾಗಬಾರದು ಎಂದು ಅಭಿಪ್ರಾಯ ಪಟ್ಟಿರುವ ಹೈಕೋರ್ಟ್ ಹಾಗೂ ಚಿತ್ರದುರ್ಗ ಜಿಲ್ಲೆಯ ಅಜ್ಜಯ್ಯನ ಹಟ್ಟಿ ಗ್ರಾಮದಲ್ಲಿ ಸಾಂಪ್ರದಾಯಿಕ ವೀರಮಾರಣ್ಣಸ್ವಾಮಿ ಜಾತ್ರಾ, ಮಹೋತ್ಸವ ಶಾಂತಿಯುತವಾಗಿ ನಡೆಸಲು ಸ್ಥಳೀಯ ಮುಖಂಡರೊಂದಿಗೆ ಸಭೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹೊಸದುರ್ಗ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ತಹಶೀಲ್ದಾರ್‌ಗೆ ನಿರ್ದೇಶನ ನೀಡಿದೆ.

ಅಜ್ಜಯ್ಯನ ಹಟ್ಟಿ ಗ್ರಾಮದ ವೀರಮಾರಣ್ಣಸ್ವಾಮಿ ದೇವರ ಕಲ್ಲು ಹುಣ್ಣಿಮೆ ಜಾತ್ರೆ ಮಹೋತ್ಸವಕ್ಕೆ ಅಗತ್ಯ ಭದ್ರತೆ ಒದಗಿಸುವಂತೆ ಕೋರಿ ವೀರಮಾರಣ್ಣಸ್ವಾಮಿ ದೇವರ ಜೀರ್ಣೋದ್ಧಾರ ಕಟ್ಟಡ ಸೇವಾ ಸಮಿತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ.ಶಾಮಪ್ರಸಾದ್ ಅವರಿದ್ದ ನ್ಯಾಯಪೀಠ ಈ ಸೂಚನೆ ನೀಡಿದೆ. ಜಾತ್ರೆಗೆ ಸಂಬಂಧಿಸಿದಂತೆ ಈ ಹಿಂದಿನ ವರ್ಷ ನಡೆದ ಘಟನೆಗಳ ಕುರಿತಂತೆ ಸ್ಥಳೀಯ ಪೊಲೀಸ್ ಅಧಿಕಾರಿಗಳು ಸಲ್ಲಿಸಿದ್ದ ವರದಿಯನ್ನು ಪರಿಶೀಲಿಸಿದ ನ್ಯಾಯಪೀಠ, ಕೆಲವು



ಉದಯವಾಹಿನಿ ಚಿತ್ರ

ವ್ಯಕ್ತಿಗಳ ನಡವಳಿಕೆಯಿಂದ ಆಡಳಿತ ವ್ಯವಸ್ಥೆಯು, ಜಾತ್ರೆ ನಡೆಸಲು ಅನುಮತಿ ನೀಡುವುದಕ್ಕೆ ಹಿಂಜರಿಯುತ್ತಿರುವಂತೆ ತೋರುತ್ತಿದೆ. ಅಧಿಕಾರಿಗಳು ಅಂತಹ ವ್ಯಕ್ತಿಗಳ ನಡವಳಿಕೆಗೆ ಮಣಿಯುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದೆ.

ಅಲ್ಲದೇ, ಸ್ಥಳೀಯ ತಹಶೀಲ್ದಾರ್ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಅರ್ಜಿದಾರರೊಂದಿಗೆ ಸಭೆ ನಡೆಸಿ ಯಾವುದೇ ಆಸ್ತಿ ಮತ್ತು ಜೀವಕ್ಕೆ ಹಾನಿಯಾಗದಂತೆ ಜಾತ್ರೆಯನ್ನು ಶಾಂತಿಯುತವಾಗಿ ನಡೆಸುವಂತೆ ನೋಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವ ಸಂಬಂಧ ಸಲಹೆ ನೀಡಬೇಕು. ಅಲ್ಲದೇ, ಅಹಿತಕರ ಘಟನೆಗಳು ತಡೆಯುವುದಕ್ಕೆ ಸಂಬಂಧಿಸಿದಂತೆ ಕಾನೂನಿನಲ್ಲಿ ಅವಕಾಶ ಇರುವ ಶಂಕಿತರ ಬಂಧನ ಸೇರಿ ಅಗತ್ಯ ಕ್ರಮಗಳನ್ನು ಸ್ಥಳೀಯ ಪೊಲೀಸರು ಕೈಗೊಳ್ಳಬಹುದು ಎಂದು ಪೀಠ ಹೇಳಿದೆ.

ಜತೆಗೆ, ಜಾತ್ರೆಯ ಸಮಯದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ಕೈಗೊಳ್ಳುವ ಸಲುವಾಗಿ ಹೆಚ್ಚುವರಿ ಸಿಬ್ಬಂದಿ ನಿಯೋಜನೆ ಸೇರಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಹಶೀಲ್ದಾರ್ ಮತ್ತು ಪೊಲೀಸ್ ಇನ್ಸ್‌ಪೆಕ್ಟರ್‌ಗೆ ನ್ಯಾಯಪೀಠ ಸಲಹೆ ನೀಡಿದೆ. ಅಲ್ಲದೆ, ಜಾತ್ರಾ ಮಹೋತ್ಸವ ಮುಂದುವರಿಯಬೇಕಾದಲ್ಲಿ ಎಲ್ಲಾ ಸಾಂಪ್ರದಾಯಿಕ ಕಾರ್ಯಗಳನ್ನು ಅರ್ಜಿದಾರರು ಮಾತ್ರ ನೆರವೇರಿಸಬೇಕು ಎಂಬುದಾಗಿ ಪಟ್ಟು ಹಿಡಿಯುವಂತಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಸಂಜೆ ನಡೆಯುವ ಮೆರವಣಿಗೆಯಿಂದ ಪರಿಸ್ಥಿತಿಯನ್ನು ನಿಯಂತ್ರಣ ಮಾಡುವುದಕ್ಕೆ ಕಷ್ಟಕರವಾಗುವಂತಿದ್ದರೆ, ಆ ಮೆರವಣಿಗೆಯನ್ನು ಮಾಡದಂತೆ ಸೂಚನೆ ನೀಡಬಹುದಾಗಿದೆ ಎಂದು ಪೀಠ ತನ್ನ ಆದೇಶದಲ್ಲಿ ಸಲಹೆ ನೀಡಿದೆ.ಇದೇ ವೇಳೆ ಜಾತ್ರಾ, ಮಹೋತ್ಸವವನ್ನು ಸೂಕ್ತ ರೀತಿಯಲ್ಲಿ ನಡೆಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲು ಅರ್ಜಿದಾರರು, ಪೊಲೀಸ್ ಸಿಬ್ಬಂದಿಗೆ ಸಹಕಾರ ನೀಡಬೇಕು ಎಂದು ತಿಳಿಸಿದ ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

**ವರದಿ ಸಲ್ಲಿಸಿದ್ದ ಪೊಲೀಸರು**

**ನ್ಯಾಯಾಲಯದ ಸೂಚನೆಯಂತೆ ವರದಿ ಸಲ್ಲಿಸಿದ್ದ ಹೊಸದುರ್ಗ ಪೊಲೀಸ್ ಇನ್ಸ್‌ಪೆಕ್ಟರ್, ಕಳೆದ ವರ್ಷ ಜಾತ್ರೆ ನಡೆದ ಸಂದರ್ಭದಲ್ಲಿ ಕೊಲೆ ಯತ್ನ ನಡೆದಿವೆ. ಕೆಲವರು ಗದ್ದಲ ಸೃಷ್ಟಿಸಲು ಸಂಚು ರೂಪಿಸುತ್ತಿದ್ದು, ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹದಗೆಡುವ ಸಾಧ್ಯತೆಗಳಿವೆ. ಅಲ್ಲದೇ, ಜಾತ್ರಾ ಮಹೋತ್ಸವ ನಡೆಸಲು2 ಗುಂಪುಗಳಿದ್ದು, ಎರಡೂ ಗುಂಪಿನವರು ದೇವರ ಸೇವೆಗಳನ್ನು ತಾವೇ ಮಾಡಬೇಕು ಎಂಬ ಒತ್ತಾಯಿಸುತ್ತಾರೆ.**

## ಬೆಳ್ಳಂದೂರು ಕೆರೆಯ ಬಫರ್ ಝೋನ್ ಒತ್ತುವರಿ ಯತ್ನ

• ಉದಯವಾಹಿನಿ, ಬೆಂಗಳೂರು

ನಗರೀಕರಣದಿಂದ ಬೆಂಗಳೂರಿನಲ್ಲಿ ದಿನದಿಂದ ದಿನಕ್ಕೆ ಕೆರೆಗಳ ಸಂಖ್ಯೆ ಕಡಿಮೆಯಾಗುತ್ತಲೇ ಇದೆ. ಈಗ ಕೋರಮಂಗಲದ ಸುತ್ತಮುತ್ತಲಿನ ಪ್ರದೇಶದ ಜನರನ್ನು ಕಾಡುತ್ತಿರುವ ಆತಂಕವೆಂದರೆ, ಬೆಳ್ಳಂದೂರು ಕೆರೆಯ ಬಫರ್ ಝೋನ್‌ವಲಯವನ್ನು ಒತ್ತುವರಿ ಮಾಡಿಕೊಳ್ಳಲಾಗುತ್ತಿದೆಯಾ ಎನ್ನುವುದು.

ಹೌದು, ಬೆಂಗಳೂರಿನಲ್ಲೇ ಅತಿದೊಡ್ಡ ಕೆರೆಗಳಲ್ಲಿ ಒಂದಾದ ಬೆಳ್ಳಂದೂರು ಕೆರೆಯ ಬಫರ್ ವಲಯದಲ್ಲಿ ನೂರಾರು ಟ್ರಕ್ ಲೋಡ್‌ಗಳಷ್ಟು, ಕಟ್ಟಡ ತ್ಯಾಜ್ಯ ತಂದು ಸುರಿಯಲಾಗುತ್ತಿದೆ. ಇದರಿಂದ ಸ್ಥಳೀಯ ನಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಜೊತೆಗೆ ಇದು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ(ಎನ್‌ಜಿಟಿ) ಸುಪ್ರೀ ಕೋರ್ಟ್‌ನ ಆದೇಶ ಉಲ್ಲಂಘನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊದಲಿಗೆ ಬಫರ್ ವಲಯಕ್ಕೆ ಟ್ರಕ್‌ನಲ್ಲಿ ತಂದು ಏನನ್ನೋ ಸುರಿಯುತ್ತಿದ್ದರು. ಮಣ್ಣು ಹಾಕಲಾಗುತ್ತಿದೆ ಎಂದು ನಿವಾಸಿಗಳು ಭಾವಿಸಿದ್ದರು. ಆದರೆ, ಕೆರೆಯ ಒಳಭಾಗಕ್ಕೇ ನೇರವಾಗಿ ಕಟ್ಟಡ ತ್ಯಾಜ್ಯ ಸುರಿಯುತ್ತಿರುವುದನ್ನು ಕಂಡು ಆತಂಕಕ್ಕೆ ಒಳಗಾಗಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು



ಉದಯವಾಹಿನಿ ಚಿತ್ರ

ಎಂದು ಸಿಎಂ ಸಿದ್ದರಾಮಯ್ಯನವರಿಗೂ ಪತ್ರ ಬರೆದಿದ್ದಾರೆ ಎನ್ನಲಾಗುತ್ತಿದೆ.

ಬೆಳ್ಳಂದೂರು ಕೆರೆ ಯಮಲೂರುನಿಂದ ಅಗರದವರೆಗೆ ಸುಮಾರು 950 ಎಕರೆ ವಿಸ್ತೀರ್ಣದ್ದು. ಸರ್ವೇ ನಂ. 40ರಲ್ಲಿ ಅಂದರೆ ಜಕ್ಕಸಂದ್ರ ಕೆರೆ ಎಂದೇ ಪ್ರಖ್ಯಾತಿಯಾಗುವ ಪ್ರದೇಶದಲ್ಲಿ ಈ ಅಕ್ರಮ ನಡೆಯುತ್ತಿದೆ. ಕಳೆದ ಕೆಲವು ದಿನದ ಹಿಂದೆ ಭಾರೀ ವಾಹನಗಳು ಆಗಮಿಸಿದ ಹಿನ್ನೆಲೆ, ಈ ಅಕ್ರಮದ ಬಗ್ಗೆ ಬೆಳಕಿಗೆ ಬಂತು ಎಂದು ಅವರು ಹೇಳಿಕೊಂಡಿದ್ದಾರೆ. ನೀರು ಹೋಗಲು ಜಾಗವೇ ಇರೋಲ್ಲ ಭಾರೀ ವಾಹನಗಳ ಓಡಾಟ ಕಂಡಾಗ ರಸ್ತೆ ಕಾಮಗಾರಿಯೋ ಚರಂಡಿ ಕಾಮಗಾರಿಯಿರಬಹುದೆಂದು ಭಾವಿಸಿದ್ದೆವು. ಆದರೆ, ದಿನ ಕಳೆದಂತೆ ಯಾವುದೇ ದುರಸ್ತಿ ಇಲ್ಲ ವಾಹನಗಳ ಓಡಾಟ ಮಾತ್ರ ಕಾಣುತ್ತಿತ್ತು. ಕೊನೆಗೆ ಇದು ಒತ್ತುವರಿಯೇ ಎಂದು ತಿಳಿಯಿತು.

ಕೆರೆ ಒತ್ತುವರಿಯಾದರೆ, ಅಗರ ಕೆರೆಯ ನೀರು ಹೊರಹೋಗಲು ದಾರಿಯೇ ಇರೋದಿಲ್ಲ ಎಂದು ಸ್ಥಳೀಯ ನಿವಾಸಿಯೊಬ್ಬರು ಆತಂಕ ವ್ಯಕ್ತಪಡಿಸಿದರು.

**ಒತ್ತುವರಿ ವಿರುದ್ಧ ಕೇಳೋರಿಲ್ಲ**

**ಬಿಲ್ಡರ್‌ಗಳು ದಿನದಿಂದ ದಿನಕ್ಕೆ ಕೆರೆಯ ಅಂಗಳವನ್ನು ಒತ್ತುವರಿ ಮಾಡಿಕೊಳ್ಳಲು ಸಂಚು ರೂಪಿಸಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಾವು ಜಿಬಿಎ ಅಧಿಕಾರಿಗಳಿಗೆ ದೂರು ಕೊಟ್ಟಿದ್ದೇವೆ. ಆದರೆ, ಅವರು ಕ್ಯಾರೆ ಎನ್ನುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ತಕ್ಷಣವೇ ಮಧ್ಯಪ್ರವೇಶಿಸಿ ಒತ್ತುವರಿ ತಡೆಯುವಂತೆ ಮನವಿ ಮಾಡಿಕೊಳ್ಳಲಾಗಿದೆ ಎಂದು ವಕೀಲರೊಬ್ಬರು ಖಾಸಗಿ ಮಾಧ್ಯಮಗಳಿಗೆ ಮಾಹಿತಿ ಕೊಟ್ಟಿದ್ದಾರೆ.**

## ಹೆರಿಗೆ ಆಸ್ಪತ್ರೆಗಳ ಮೇಲ್ದರ್ಜೆಗೆ ರೂ.310 ಕೋಟಿ

• ಉದಯವಾಹಿನಿ, ಬೆಂಗಳೂರು

ಜಿಬಿಎ ವ್ಯಾಪ್ತಿಯ ನಾಲ್ಕು ನಗರ ಪಾಲಿಕೆಗಳಲ್ಲಿರುವ 21 ಹೆರಿಗೆ ಹಾಗೂ ರೆಫರಲ್ ಆಸ್ಪತ್ರೆಗಳನ್ನು ಭಾರತೀಯ ಸಾರ್ವಜನಿಕ ಆರೋಗ್ಯ ಮಾನದಂಡಗಳಿಗೆ (ಐಪಿಎಚ್ ಎಸ್-2022) ಅನುಸಾರವಾಗಿ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ.ಹೆರಿಗೆ/ರೆಫರಲ್ ಆಸ್ಪತ್ರೆಗಳಲ್ಲಿ ವೈದ್ಯಕೀಯ ಉಪಕರಣ, ವೈದ್ಯಕೀಯ ಗ್ಯಾಸ್ ಕೊಳವೆ ಮಾರ್ಗ, ಅಗ್ನಿಶಾಮಕ ವ್ಯವಸ್ಥೆ, ವಿದ್ಯುತ್ ಇತರೆ ಅಗತ್ಯ ವ್ಯವಸ್ಥೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಇದಕ್ಕಾಗಿ ರೂ.310 ಕೋಟಿ ವೆಚ್ಚ ಮಾಡಲಾಗುತ್ತಿದೆ.

21 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳನ್ನು 18 ತಿಂಗಳಲ್ಲಿ ತಿಂಗಳಲ್ಲಿ ಮುಗಿಸಲು ನಿರ್ಧರಿಸಲಾಗಿದೆ. ಜಿಬಿಎ ಯೋಜನಾ ಅನುಷ್ಠಾನ ವಿಭಾಗದ ಕಾರ್ಯಕಾರಿ ಎಂಜಿನಿಯರ್-4 ಅವರು ಯೋಜನೆಯನ್ನು ನಿರ್ವಹಿಸಲಿದ್ದಾರೆ.

ಐಪಿಎಚ್‌ಎಸ್-2022ರ ಪ್ರಕಾರ ಯಾವ ರೀತಿ ಕಟ್ಟಡ ನಿರ್ಮಾಣ ಮಾಡಬೇಕೆಂಬ ನೀಲನಕ್ಷೆಯನ್ನೂ ಸಿದ್ಧಪಡಿಸಲಾಗಿದ್ದು, ಅದರಂತೆಯೇ ಕಾಮಗಾರಿ ನಡೆಯಲಿದೆ. ಇದಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

**ಏನೇನು ಷರತ್ತು:** ಹೆರಿಗೆಗೆ ಸಂಬಂಧಿಸಿದ ಎಲ್ಲಾ ರೀತಿಯ ಉಪಕರಣಗಳು ಆಸ್ಪತ್ರೆಗೆ ಸರಬರಾಜಾದ



ಉದಯವಾಹಿನಿ ಚಿತ್ರ

ಎಂಟು ವಾರದಲ್ಲಿ ಕಾರ್ಯಾಚರಣೆಯಾಗುವಂತೆ ಕ್ರಮ ಕೈಗೊಳ್ಳಬೇಕು. ಇದಕ್ಕೆಲ್ಲ ಐಎಸ್‌ಒ 9001 ಮತ್ತು ಐಎಸ್‌ಒ 13485 ಪ್ರಮಾಣ ಪತ್ರವಿರಬೇಕು.

ಆಸ್ಪತ್ರೆಗಳಿಗೆ ಒದಗಿಸುವ ಎಲ್ಲಾ ಉತ್ಪನ್ನಗಳು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ (ಸಿಡಿಎಸಿಒ) ಪ್ರಮಾಣ ಪತ್ರ ಹೊಂದಿರುವ ಉಪಕರಣಗಳನ್ನೇ ಬಳಸಬೇಕು. ಉಪಕರಣಗಳನ್ನು ಆಮದು ಮಾಡಿಕೊಂಡರೆ, ಯುರೋಪಿಯನ್ ಕಮಿಷನ್/ ಎಫ್‌ಡಿಎ (ಯುಎಸ್) / ಬಿಐಎಸ್/ ಪ್ರಮಾಣ ಪತ್ರವನ್ನು ಹೊಂದಿರಬೇಕು. ಸುರಕ್ಷತಾ ಪ್ರಮಾಣ ಪತ್ರವನ್ನೂ ಒಳಗೊಂಡಿರಬೇಕು. ಉಪಕರಣಗಳು ಕಾರ್ಯಾರಂಭಿಸಿದ ದಿನದಿಂದ ಎರಡು ವರ್ಷ ವಾರಂಟಿ ಅವಧಿಯೂ ಇರಬೇಕು ಎಂಬ ಷರತ್ತು ವಿಧಿಸಲಾಗಿದೆ.

## ಅಬಕಾರಿ ಹಗರಣದ ಹಣ ಅಸ್ಸಾಂ-ಕೇರಳ ಚುನಾವಣೆಗೆ ಬಳಕೆ: ಕಾಂಗ್ರೇಸ್ ವಿರುದ್ಧ ಬಿಜೆಪಿ ಗಂಭೀರ ಆರೋಪ

• ಉದಯವಾಹಿನಿ, ಬೆಂಗಳೂರು

ಕಾಂಗ್ರೇಸ್ ಸರ್ಕಾರ ಅಬಕಾರಿ ಇಲಾಖೆಯಿಂದ ಲೂಟಿ ಮಾಡಿದ ಹಣವನ್ನು ಅಸ್ಸಾಂ, ಕೇರಳ ಮತ್ತು ತಮಿಳುನಾಡು ರಾಜ್ಯಗಳಿಗ ವರ್ಗಾವಣೆ ಮಾಡುತ್ತಿದೆ ಎಂದು ಬಿಜೆಪಿ ಗಂಭೀರ ಆರೋಪಮಾಡಿದೆ. ವಿಧಾನಸಭೆಯಲ್ಲಿ ವಿರೋಧ ಪಕ್ಷದ ಬಿಜೆಪಿ ಸದಸ್ಯರು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ರಾಜೀನಾಮೆಗೆ ಒತ್ತಾಯಿಸಿದರು.

ಸದನದಲ್ಲಿ ಮಾತನಾಡಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು, ಅಬಕಾರಿ ಇಲಾಖೆಯ ಹಗರಣದ ಹಣ ಚುನಾವಣೆಗೆ ಹೋಗುತ್ತಿರುವುದು ನಿಜ. ಅದನ್ನು ನಾವು ಬಹಿರಂಗಪಡಿಸುತ್ತೇವೆ ಎಂದು ಹೇಳಿದರು.

ಇದೇ ವೇಳೆ ತಿಮ್ಮಾಪುರ ಮತ್ತು ಅವರ ಪುತ್ರ ಭಾಗಿಯಾಗಿದ್ದಾರೆ ಎನ್ನಲಾದ ಮದ್ಯ ಹಗರಣದ ಕುರಿತು ಚರ್ಚೆಗೆ ಸ್ಪೀಕರ್ ಯು.ಟಿ. ಖಾದರ್ ಅವಕಾಶ ನೀಡಬೇಕೆಂದು ಒತ್ತಾಯಿಸಿದರು. ಸಚಿವರ ವಿರುದ್ಧ ಲೋಕಾಯುಕ್ತದಲ್ಲಿ ಮತ್ತು ಸಾಕ್ಷಿಗಳೊಂದಿಗೆ ದೂರು ದಾಖಲಾಗಿದೆ.

ಅಧಿಕಾರಿಗಳೊಂದಿಗೆ ಮಾತನಾಡಿರುವ ಸಾಕ್ಷಿ (ಪೆನ್ ಡ್ರೈವ್) ನನ್ನ ಬಳಿ ಇದೆ ಎಂದು ತೋರಿಸಿದರು. ಇದೇ ರೀತಿಯ ಆರೋಪ ಕೇಳಿ ಬಂದಾಗದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ತನಿಖೆಗೂ ಮುಂಚಿತವಾಗಿ ರಾಜೀನಾಮೆ ನೀಡಿದ್ದರು ಎಂದು ಹೇಳಿದರು.

ಆದರೆ, ಸ್ಪೀಕರ್ ಅವರ ಹೇಳಿಕೆಗೆ ಸಮಾಧಾನಗೊಳ್ಳದ ವಿರೋಧ ಪಕ್ಷದ ಶಾಸಕರು ಸದನದ ಬಾವಿಗಿಳಿದು ಧರಣಿ ನಡೆಸಿದರು.

ವಿರೋಧ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದು, ಸದನದಲ್ಲಿ ತೀವ್ರ ಗದ್ದಲವುಂಟಾಯಿತು ಏತನ್ಮಧ್ಯೆ, ಅಧಿವೇಶನದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ತಮ್ಮ ಭಾಷಣವನ್ನು ಪೂರ್ಣವಾಗಿ ಓದದಿದ್ದಕ್ಕಾಗಿ ವಿರಾಜಪೇಟೆಯ ಕಾಂಗ್ರೆಸ್ ಶಾಸಕ ಎ.ಎಸ್. ಪೊನ್ನಣ್ಣ ಅವರು ಟೀಕಿಸಿದರು. ಬಳಿಕ ಸ್ಪೀಕರ್ ಸದನವನ್ನು ಮಂಗಳವಾರಕ್ಕೆ ಮುಂದೂಡಿದರು.



**ಮುಖ್ಯಮಂತ್ರಿ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ಸದನಕ್ಕೆ ಬರುವ ಮೊದಲು ಸಚಿವರ ರಾಜೀನಾಮೆಯನ್ನು ಕೋರಬೇಕು ಎಂದು ತಿಳಿಸಿದರು. ಬಳಿಕ ವಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಶಾಸಕರು ಈ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸಿದರು, ಆದರೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ನಂತರ ಅದನ್ನು ಅನುಮತಿಸಲಾಗುವುದು ಎಂದು ಖಾದರ್ ಹೇಳಿದರು. ಇದೇ ವೇಳೆ ಸಚಿವ ತಿಮ್ಮಾಪುರ ಕೂಡ ಚರ್ಚೆಗೆ ಸಿದ್ಧ ಎಂದು ಹೇಳಿದರು.**

**- ಕಾರ್ಕಳ ಶಾಸಕ ವಿ. ಸುನೀಲ್ ಕುಮಾರ್**

## ರಾಜ್ಯಪಾಲರ ಸ್ಥಾನಕ್ಕೆ ಕಾಂಗ್ರೇಸ್ ಅಗೌರವ: ನಿಖಿಲ್ ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ರಾಜ್ಯಪಾಲರ ಹುದ್ದೆಗೆ ಕಾಂಗ್ರೇಸ್ ಗೌರವ ನೀಡದೆ ನಡೆದುಕೊಳ್ಳುತ್ತಿದ್ದು, ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಎಲ್ಲಾ ನೀತಿ ಕಾರ್ಯಕ್ರಮಗಳಿಗೆ ವಿರೋಧಿಸಿ ರಾಜ್ಯ ಜನತೆಗೆ ನಷ್ಟವುಂಟು ಮಾಡುತ್ತಿದ್ದಾರೆಂದು ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಆರೋಪಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಮಂಡಲ ವಿಶೇಷ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ವೇಳೆ ಕಾಂಗ್ರೇಸ್ ಶಾಸಕರು ಘೋಷಣೆ ಕೂಗಿ ಅಡ್ಡಿಪಡಿಸಿದ್ದು ತಪ್ಪು. ರಾಜ್ಯಪಾಲರ ಹುದ್ದೆ ಗೌರವಕ್ಕೆ ಪಾತ್ರವಾದುದು. ರಾಜ್ಯಪಾಲರು ತಮಗೆ ಸೂಕ್ತವೆನಿಸುವ ಭಾಷಣವನ್ನು ಓದುವ ಹಕ್ಕು ಹೊಂದಿದ್ದಾರೆ. ಕಾಂಗ್ರೇಸ್ ಸರ್ಕಾರ ರಾಜ್ಯಪಾಲರ ಕಚೇರಿಯ ಗೌರವವನ್ನು ಕುಗ್ಗಿಸುವ ಪ್ರಯತ್ನ ಮಾಡುತ್ತಿದೆ ಎಂದು ಆರೋಪಿಸಿದರು.

ಇದೇ ವೇಳೆ ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬದ ಅಂಗವಾಗಿ ಜನವರಿ 24ರಂದು ಹಾಸನದಲ್ಲಿ ಭಾರೀ ಸಮಾವೇಶವನ್ನು ಆಯೋಜಿಸಲಾಗುವುದು



ಉದಯವಾಹಿನಿ ಚಿತ್ರ

ಎಂದು ನಿಖಿಲ್ ಕುಮಾರಸ್ವಾಮಿ ಘೋಷಿಸಿದರು. ರಾಮನಗರದಲ್ಲಿ ತಮ್ಮ 38ನೇ ಜನ್ಮದಿನದಂದು ಈ ಘೋಷಣೆ ಮಾಡಿದ ನಿಖಿಲ್, ಹಾಸನದಲ್ಲಿ ಜೆಡಿಎಸ್‌ನ ಬಲಿಷ್ಠತೆಯನ್ನು ಈ ಸಮಾವೇಶ ತೋರಿಸಲಿದೆ ಎಂದರು.

ಹಾಸನದಲ್ಲಿ ತನ್ನ ನೆಲೆಯನ್ನು ಬಲಪಡಿಸಲು ಕಾಂಗ್ರೇಸ್ ಸಮಾವೇಶಗಳನ್ನು ನಡೆಸುತ್ತಿದೆ. ಜೆಡಿಎಸ್‌ನ ಬೆಳ್ಳಿ ಹಬ್ಬದ ಸಮಾವೇಶವು ಜನರ ಬೆಂಬಲವನ್ನು ಮತ್ತೊಮ್ಮೆ ದೃಢಪಡಿಸಲಿದೆ. ಈ ಸಮಾವೇಶಕ್ಕೆ ಅಪಾರ ಸಂಖ್ಯೆಯ ಜನರು ಸೇರುವ ನಿರೀಕ್ಷೆಯಿದೆ. ಬೆಳ್ಳಿ ಹಬ್ಬದ ಅಂಗವಾಗಿ ರಾಜ್ಯದಾದ್ಯಂತ ಜೆಡಿಎಸ್ ವಿವಿಧ ಸಮಾವೇಶಗಳು ಹಾಗೂ ಸಭೆಗಳನ್ನು ಆಯೋಜಿಸಲಿದೆ ಎಂದು ತಿಳಿಸಿದರು. ಏತನ್ಮಧ್ಯೆ, ಇತ್ತೀಚೆಗೆ ಹಾಸನದಲ್ಲಿ ನಡೆದ ಕಾಂಗ್ರೇಸ್‌ನ ಎರಡು ಸಮಾವೇಶಗಳಿಗೆ ಪ್ರತಿಯಾಗಿ ಈ ರ್‍ಯಾಲಿ ನಡೆಯಲಿದೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ.

**ಬಳಿಕ ರಾಜ್ಯದ ಅಭಿವೃದ್ಧಿಯ ಕುರಿತು ಕಾಂಗ್ರೇಸ್ ಹೇಳಿಕೆಗಳನ್ನು ಪ್ರಶ್ನಿಸಿದ ಅವರು, ರಾಮನಗರ ಕ್ಷೇತ್ರದ ರಸ್ತೆ ಸ್ಥಿತಿಗೆ ಸಂಬಂಧಿಸಿದಂತೆ ನನ್ನ ತಾಯಿ ಹಾಗೂ ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಕಾಂಗ್ರೇಸ್ ನಾಯಕರು ಟೀಕೆ ಮಾಡಿದ್ದರು. ಈಗ ಕಾಂಗ್ರೇಸ್ ಆಡಳಿತದಲ್ಲಿ ರಾಮನಗರದ ರಸ್ತೆಗಳ ಸ್ಥಿತಿ ಸುಧಾರಣೆಯಾಗಿದೆಯೇ? ಎಂದು ಪ್ರಶ್ನಿಸಿದರು.**

## ಅರ್ಬನ್ ಬ್ಯಾಂಕ್‌ಗಳು ನಂಬಿಕೆ ಉಳಿಸಿಕೊಳ್ಳಲಿ

• ಉದಯವಾಹಿನಿ, ಬೆಂಗಳೂರು

ಮೂರು ಅರ್ಬನ್ ಬ್ಯಾಂಕ್‌ಗಳು ಆರ್ಥಿಕವಾಗಿ ತೊಂದರೆಗೆ ಸಿಲುಕಿದರೂ ನಂಬಿಕೆ ಮೇಲೆಯೇ ಇತರ ಸಹಕಾರ ಬ್ಯಾಂಕ್‌ಗಳ ವಹಿವಾಟು ನಡೆಯುತ್ತಿದೆ. ಅದನ್ನು ಉಳಿಸಿಕೊಳ್ಳಬೇಕು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಸಲಹೆ ನೀಡಿದರು.

ಶ್ರೀ ತ್ಯಾಗ ರಾಜ ಕೋ ಆಪರೇಟಿವ್ ಬ್ಯಾಂಕ್ ಆಯೋಜಿಸಿದ್ದ ತ್ಯಾಗರಾಜರ ಆರಾಧನಾ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದಲ್ಲಿ 1451 ಅರ್ಬನ್ ಬ್ಯಾಂಕ್‌ಗಳಿದ್ದು, ಇವುಗಳ ದುಡಿಯುವ ಬಂಡವಾಳದ ಪ್ರಮಾಣವೇ ರೂ.6.50 ಲಕ್ಷ ಕೋಟಿಯಷ್ಟಿದೆ.

ಇದರಲ್ಲಿ ಠೇವಣಿ ಪ್ರಮಾಣ ರೂ. 5.33 ಲಕ್ಷ ಕೋಟಿ, ಕರ್ನಾಟಕದ 249 ಅರ್ಬನ್ ಬ್ಯಾಂಕ್‌ಗಳಲ್ಲಿ 24 ಲಕ್ಷ ಸದಸ್ಯರಿದ್ದು, ದುಡಿಯುವ ಬಂಡವಾಳ ಪ್ರಮಾಣ ರೂ.58 ಸಾವಿರ ಕೋಟಿ. ಈ ಬ್ಯಾಂಕ್‌ಗಳು ರೂ.500 ಕೋಟಿ ನಿವ್ವಳ ಲಾಭಪಡೆಯುತ್ತಿವೆ. ಎನ್‌ಪಿಎ ಪ್ರಮಾಣ ಶೇ 3ಕ್ಕಿಂತ ಕಡಿಮೆ ಇರುವುದು ಗಮನಾರ್ಹ ಎಂದರು. ಸರ್ಕಾರದ ನೆರವು ಇಲ್ಲದೇ



ಉದಯವಾಹಿನಿ ಚಿತ್ರ

ಸಹಕಾರ ಬ್ಯಾಂಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ತ್ಯಾಗರಾಜ ಬ್ಯಾಂಕ್‌ನವರು ಉದ್ಯೋಗ ಸೃಷ್ಟಿ ಮಾಡುವವರಿಗೆ ಸಾಲ ನೀಡುವ ಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಇದು ಮುಂದಿನ ದಿನಗಳಲ್ಲಿ ಬ್ಯಾಂಕಿನ ಪ್ರಗತಿಗೂ ಸಹಕಾರಿಯಾಗಲಿದೆ ಎಂದು ಹೇಳಿದರು.

ವಿಧಾನ ಪರಿಷತ್‌ನ ಮಾಜಿ ಸದಸ್ಯ ಅಶ್ವತ್ಥನಾರಾಯಣ ಮಾತನಾಡಿ, ಮೂರು ದಶಕದ ಹಿಂದೆ ಬಿಎಚ್ ಇಎಲ್ ಸಹಿತ ಹಲವು ಸಂಸ್ಥೆಗಳ ನೌಕರರಿಗೆ ನಿವೇಶನ ಸಾಲವನ್ನು ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ನೀಡಿತು. ಇದರಿಂದ ಹಲವರು ಸೂರು ಮಾಡಿಕೊಂಡು ಅವರ ಆಸ್ತಿ ಮೌಲ್ಯ ಬೆಳೆದಿರುವುದು ಸಂತಸದ ಸಂಗತಿ ಎಂದು ಹೇಳಿದರು.

# ಮೆಜೆಸ್ಟಿಕ್‌ನಿಂದ ಏರ್‌ಪೋರ್ಟ್ ಉಪನಗರ ರೈಲು ಯೋಜನೆಗೆ ರೈಲ್ವೆ ಇಲಾಖೆ ಅಸ್ತು

### 8.5 ಕಿ.ಮೀ ಉದ್ದದ ಮಾರ್ಗದಲ್ಲಿ 5.5 ಕಿ.ಮೀ ನೆಲಮಟ್ಟದಲ್ಲಿ , ವಿಮಾನ ನಿಲ್ದಾಣದ ಒಳಗೆ 3.5 ಕಿ.ಮೀ ಸುರಂಗ ಮಾರ್ಗ ನಿರ್ಮಾಣ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ದಶಕಗಳ ಕನಸಾದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಉಪನಗರ ರೈಲು ಸಂಪರ್ಕ ಕಲ್ಪಿಸುವ ಯೋಜನೆಗೆ ಕೊನೆಗೂ ಹಸಿರು ನಿಶಾನೆ ಸಿಕ್ಕಿದೆ. ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕೆ-ರೈಡ್) ಮತ್ತು ಭಾರತೀಯ ರೈಲ್ವೆ ಈ ಯೋಜನೆಗೆ ಅಧಿಕೃತ ಅನುಮೋದನೆ ನೀಡಿದ್ದು, ಸುಮಾರು 4,100 ಕೋಟಿ ರೂ. ವೆಚ್ಚದ ಯೋಜನೆಯ ಅಂತಿಮ ವಿನ್ಯಾಸಕ್ಕೂ ಸಮ್ಮತಿ ಸೂಚಿಸಲಾಗಿದೆ. ಇದರಿಂದಾಗಿ ವಿಮಾನ ನಿಲ್ದಾಣಕ್ಕೆ ನಗರದ ಮಧ್ಯಭಾಗದಿಂದ ಪ್ರಯಾಣಿಸುವ ಲಕ್ಷಾಂತರ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಬೆಂಗಳೂರು ಉಪನಗರ ರೈಲು ಯೋಜನೆಯ ಮೊದಲನೇ ಕಾರಿಡಾರ್ ಆದ ಸಂಪಿಗೆ ಲೈನ್ ಅಡಿಯಲ್ಲಿ ಮೆಜೆಸ್ಟಿಕ್‌ನಿಂದ ದೇವನಹಳ್ಳಿಯವರೆಗೆ ಈ ವಿಮಾನ ನಿಲ್ದಾಣದ ಸಂಪರ್ಕ ಕೊಂಡಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ಟ್ರಂಪೆಟ್ ಜಂಕ್ಷನ್ ನಿಂದ ವಿಮಾನ ನಿಲ್ದಾಣದ ಟರ್ಮಿನಲ್‌ವರೆಗೆ ಒಟ್ಟು 8.5 ಕಿ.ಮೀ ಉದ್ದದ ಮಾರ್ಗವನ್ನು ಇದು

**4,100 ಕೋಟಿ ವೆಚ್ಚದ ಯೋಜನೆ**




ಉದಯವಾಹಿನಿ ಚಿತ್ರ

ಒಳಗೊಂಡಿದೆ. ಈ ಯೋಜನೆಯಲ್ಲಿ 5.5 ಕಿ.ಮೀ ಮಾರ್ಗವು ನೆಲಮಟ್ಟದಲ್ಲಿ ಹಾಗೂ ಉಳಿದ 3.5 ಕಿ.ಮೀ ಮಾರ್ಗವು ವಿಮಾನ ನಿಲ್ದಾಣದ ಸಂಕೀರ್ಣದೊಳಗೆ ಸಂಪೂರ್ಣ ಭೂಗತವಾಗಿ ನಿರ್ಮಾಣವಾಗಲಿದೆ. ಈ ಮಾರ್ಗದಲ್ಲಿ ಒಟ್ಟು ನಾಲ್ಕು ನಿಲ್ದಾಣಗಳಿದ್ದು, ಬಿಕೆ ಹಳ್ಳಿ ಮತ್ತು ಕೆಐಎಡಿಬಿ ಏರೋಸ್ಪೇಸ್ ಪಾರ್ಕ್ ನಿಲ್ದಾಣಗಳು ನೆಲಮಟ್ಟದಲ್ಲಿದ್ದರೆ, ಹಾಗೂ ಏರ್‌ಪೋರ್ಟ್ ಸಿಟಿ ಹಾಗೂ ಟರ್ಮಿನಲ್ 1 ಮತ್ತು 2 ರ ಮಧ್ಯೆ ಬರುವ ಏರ್‌ಪೋರ್ಟ್ ಟರ್ಮಿನಲ್ ನಿಲ್ದಾಣಗಳು ಭೂಗತವಾಗಿ ಕಾರ್ಯನಿರ್ವಹಿಸಲಿವೆ.

**2030ರ ವೇಳೆಗೆ ಪೂರ್ಣಗೊಳಿಸುವ ಗುರಿ**

**ಈ ಯೋಜನೆಗೆ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಅನುದಾನ ನೀಡಲು ನಿರಾಕರಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಮತ್ತು ಭಾರತೀಯ ರೈಲ್ವೆಯಿಂದ ಈಕ್ವಿಟಿ ಹಣಕಾಸು ಪಡೆಯಲು ಪ್ರಯತ್ನಗಳು ನಡೆಯುತ್ತಿವೆ. ಯೋಜನೆಯ ವರದಿಯನ್ನು ರೈಟ್ಸ್ ಸಂಸ್ಥೆ ಸಿದ್ಧಪಡಿಸಿದೆ. ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣ್ ಸಿಂಗ್ ಅವರ ಪ್ರಕಾರ, ರೈಲ್ವೆ ಇಲಾಖೆಯು ಈ ವಿಮಾನ ನಿಲ್ದಾಣ ಸಂಪರ್ಕದ ವಿನ್ಯಾಸಕ್ಕೆ ಅನುಮೋದನೆ ನೀಡಿದೆ. ಈ ಸಂಪೂರ್ಣ ಸಂಪಿಗೆ ಲೈನ್ ಮತ್ತು ವಿಮಾನ ನಿಲ್ದಾಣದ ಕೊಂಡಿಯನ್ನು ಮಾರ್ಚ್ 2030ರ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.**

**ಸಂಚಾರ ದಟ್ಟಣೆಗೆ ಮುಕ್ತಿ**

**ಪ್ರಸ್ತುತ ವಿಮಾನ ನಿಲ್ದಾಣಕ್ಕೆ ಹೋಗುವ ರಸ್ತೆಗಳಲ್ಲಿ ಪ್ರತಿದಿನ ಸುಮಾರು ಒಂದು ಲಕ್ಷ ವಾಹನಗಳು ಸಂಚರಿಸುತ್ತಿವೆ. ಈ ರೈಲು ಮಾರ್ಗವು ಕಾರ್ಯಾರಂಭ ಮಾಡಿದರೆ, ಹೆದ್ದಾರಿಯ ಮೇಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗಲಿದೆ. ಏರ್‌ಪೋರ್ಟ್ ಸಿಟಿ' ನಿಲ್ದಾಣವು ಹೆಣ್ಣೂರು-ಬಾಗಲೂರು-ಬೇಗೂರು ರಸ್ತೆಯ ಜಂಕ್ಷನ್ ಬಳಿ ಬರಲಿದ್ದು, ಇದು ವಿಮಾನ ನಿಲ್ದಾಣದ ಉದ್ಯೋಗಿಗಳಿಗೆ ಮತ್ತು ಸುತ್ತಮುತ್ತಲಿನ ಜನರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಿದೆ.**

# ಪತ್ರಕರ್ತ ಭವನ ನಿರ್ಮಾಣಕ್ಕೆ ಅಗತ್ಯ ನೆರವು: ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಭರವಸೆ

• ಉದಯವಾಹಿನಿ, ಗುಂಡ್ಲುಪೇಟೆ

ಪತ್ರಕರ್ತ ಭವನ ನಿರ್ಮಾಣಕ್ಕೆ ಅಗತ್ಯ ನೆರವು ನೀಡಲಾಗುವುದು ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಭರವಸೆ ನೀಡಿದರು. ಪಟ್ಟಣದ ಜ್ಞಾನಭವನದಲ್ಲಿ ಆಯೋಜಿಸಿದ್ದ ತಾಲ್ಲೂಕು ಪತ್ರಕರ್ತರ ಸಂಘದ ನೂತನ ಪಧಾಧಿಕಾರಿಗಳ ಪದಗ್ರಹಣ ಸಮಾರಂಭ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಾಲ್ಲೂಕು ಸೇರಿದಂತೆ ಜಿಲ್ಲಾ ಪತ್ರಕರ್ತರ ಬೇಡಿಕೆಗಳಿಗೆ ಸ್ಪಂದಿಸಿ ಕ್ಷೇಮಾಭಿವೃದ್ಧಿ ಮತ್ತು ದತ್ತಿ ನಿಧಿಗೆ ವೈಯಕ್ತಿಕವಾಗಿ ಒಂದು ಲಕ್ಷ ರೂ ಹಣವನ್ನ ನೀಡಲಾಗುವುದು ಹಾಗೆಯೇ ಗುಂಡ್ಲುಪೇಟೆ ಪಟ್ಟಣದಲ್ಲಿ ಭವನ ನಿರ್ಮಾಣಕ್ಕೆ ನೆರವು ನೀಡಲು ಬದ್ಧನಾಗಿದ್ದೇನೆ ಎಂದು ತಿಳಿಸಿದರು. ಮಾಜಿ ಶಾಸಕ ಬಿಜೆಪಿ ಚಾಮರಾಜನಗರ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಮಾತನಾಡಿ ಪತ್ರಕರ್ತರ ಚುನಾವಣೆಯಲ್ಲಿ ಪಧಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಹಾಗೂ ಪತ್ರಕರ್ತನಾಗಿ ಕರ್ತವ್ಯ ನಿರ್ವಹಿಸುವುದು ಸುಲಭದ ಮಾತಲ್ಲ ಯಾರ ಪರ ವಿರೋಧವಿಲ್ಲದೆ ವಸ್ತುನಿಷ್ಠವಾಗಿ ಬರೆಯುವುದು ಆದ್ಯ ಬದ್ಧತೆಯಾಗಿದೆ ಎಂದರು.


ಉದಯವಾಹಿನಿ ಚಿತ್ರ

ಸಂಘದ ಜಿಲಾಧ್ಯಕ್ಷ ಸಿದ್ದಲಿಂಗಸ್ವಾಮಿ ಮಾತನಾಡಿ ತಾಲ್ಲೂಕಿನಲ್ಲಿ ಪತ್ರಕರ್ತರ ಭವನ ನಿರ್ಮಾಣವಾಗಿ ತಮ್ಮಿಂದಲೇ ಉದ್ಘಾಟನೆಯಾಗಲಿ ಎಂದು ಮನವಿ ಮಾಡಿದರು.


ಇದೆ ವೇಳೆ ನೂತನ ಪಧಾಧಿಕಾರಿಗಳಿಗೆ ಜಿಲ್ಲಾ ಪ್ರದಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಪ್ರತಿಜ್ಞಾವಿಧಿ ಬೋಧಿಸಿದರು ನಂತರ ಸಂಘದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಈ ಸಂಧರ್ಭದಲ್ಲಿ ತಹಶೀಲ್ದಾರ್ ಎಂ.ತನ್ಮಯ್, ರಾಜ್ಯ ಸಮಿತಿ ಸದಸ್ಯ ಸಿ.ಮಹೇಂದ್ರ, ಪತ್ರಕರ್ತರ ಸಂಘ ತಾಲ್ಲೂಕು ಅಧ್ಯಕ್ಷ ಬಸವರಾಜು, ಪ್ರ.ಕಾರ್ಯದರ್ಶಿ ಚಂದ್ರು ಲಕ್ಕೂರು, ಜಿ.ಪ.ಮಾಜಿ ಉಪಾಧ್ಯಕ್ಷ ಕಬ್ಬಹಳ್ಳಿ ಮಹೇಶ್, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಎಪಿಎಂಸಿ ಅಧ್ಯಕ್ಷ ನಾಗರಾಜು, ಪುರಸಭಾ ಮಾಜಿ ಅಧ್ಯಕ್ಷರಾದ ಮಧುಸೂದನ್, ಅಣ್ಣಯ್ಯಸ್ವಾಮಿ, ಡಾ.ನವೀನ್ ಮೌರ್ಯ, ರಂಗಪ್ಪ ನಾಯಕ್, ರಾಜೇಂದ್ರ, ಮುತ್ತಣ್ಣ ನಾಗರಾಜು ಕಾಡು ಅಬ್ದುಲ್ ಮಾಲೀಕ್, ಮುಬಾರಕ್, ಮುನೀರ್ ಪಾಷಾ, ರಮೇಶ್ ನಾಯಕ್, ಸುರೇಶ್ ನಾಯಕ್, ಶ್ರೀನಿವಾಸ್ ನಾಯಕ್, ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ಗೋವಿ ನಾಯಕ್ ಸುಭಾಷ್ ಮಾಡ್ರಹಳ್ಳಿ, ಆರ್.ಡಿ.ಉಲ್ಲಾಸ್, ಮಿಂಚು ಮಹೇಶ್, ಪಾಪಣ್ಣ, ಸೇರಿದಂತೆ ಹಲವರು ಹಾಜರಿದ್ದರು.

# ರೈತರ ಭೂಮಿ ಸ್ವಾಧೀನ: ಜ.25ರ ಹೋರಾಟದಲ್ಲಿ ಎಚ್ಡಿಕೆ ಭಾಗಿ

## ಸುಮಾರು ವಿಸ್ತೀರ್ಣ ಸೇರಿ ಒಟ್ಟು 9,600 ಎಕರೆ ಭೂಮಿಯನ್ನು ರೈತರ ಅಭಿಪ್ರಾಯ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಬಿಡದಿ ಹೋಬಳಿಯ ಬೈರಮಂಗಲ, ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಲವಾರು ಗ್ರಾಮಗಳಲ್ಲಿನ ಸುಮಾರು ವಿಸ್ತೀರ್ಣ ಸೇರಿ ಒಟ್ಟು 9,600 ಎಕರೆ ಭೂಮಿಯನ್ನು ರೈತರ ಅಭಿಪ್ರಾಯ ಮತ್ತು ಒಪ್ಪಿಗೆ ಪಡೆಯದೇ ಏಕಾಏಕಿ ಭೂಮಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಕ ಸರ್ಕಾರ ಭೂ-ಸ್ವಾಧೀನಪಡಿಸಿಕೊಳ್ಳಲು ಹೊರಟಿರುವ ಕ್ರಮ ವಿರೋಧಿಸಿ ಜ.25 ರಂದು ಬೈರಮಂಗಲ ಗ್ರಾಮದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಎ. ಮಂಜುನಾಥ್ ತಿಳಿಸಿದರು.

ಎಚ್‌ಡಿಕೆ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

ಬಿಡದಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭಾಗದಲ್ಲಿ ಒಟ್ಟು ಸುಮಾರು 10 ಲಕ್ಷಕ್ಕೂ ಹೆಚ್ಚು ಮರ-ಗಿಡಗಳು ಇದ್ದು ಇವುಗಳ ಮಾರಣ ಹೋಮ ನಡೆಸಲು ಸರ್ಕಾರ ಮುಂದಾಗಿದೆ, ಈ ಭಾಗದಲ್ಲಿ ಬಹುಪಾಲು ರೈತರು ಹೈನುಗಾರಿಗೆ (ಹಸು ಸಾಕಾಣಿಕೆ) ಹಾಗೂ ರೇಷ್ಮೆ ತೋಟಗಾರಿಕೆ ಕೃಷಿ ಮಾಡಿಕೊಂಡು ಹೈನುಗಾರಿಕೆಯಲ್ಲಿ ತಿಂಗಳಿಗೆ ಸುಮಾರು 6 ಲಕ್ಷ ಲೀಟರ್ ಗಿಂತಲೂ ಹೆಚ್ಚಿನ ಹಾಲು ಉತ್ಪಾದನೆ ಮಾಡಿ ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ. ಸುಮಾರು ಶೇ. 50ರಷ್ಟು ಜನ ರೇಷ್ಮೆ ಬೆಳೆಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂದರು. ಬಹುಪಾಲು ಕೃಷಿ ಕಾರ್ಮಿಕರು, ಹಿಂದುಳಿದ ವರ್ಗದ ಕೃಷಿಕರು, ದಲಿತ ಸಮಾಜಕ್ಕೆ ಸೇರಿದ ಕೃಷಿಕರು ಬಹಳ ವರ್ಷಗಳಿಂದ ಸುಮಾರು ನೂರಾರು ಎಕರೆ ಸರ್ಕಾರಿ ಜಮೀನುಗಳನ್ನು ಉಳುಮೆ ಮಾಡಿಕೊಂಡು ಸರ್ಕಾರಕ್ಕೆ ಸೂಕ್ತ ಸಮಯದಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದು ಸರ್ಕಾರವು ಈವರೆವಿಗೂ ಈ ಭೂಮಿಗಳ ಸಂಬಂಧಪಟ್ಟ ಅರ್ಹ ರೈತರುಗಳಿಗೆ ಮಂಜೂರು ಮಾಡದೇ ಮೋಸಮಾಡಿ ಈ ಜಮೀನುಗಳನ್ನು ಈಗ ಲಪಟಾಯಿಸಲು ಹೊರಟಿದ್ದಾರೆ ಎಂದರು.

ಇದಲ್ಲದೆ ತೋಟಗಾರಿಕೆ ಬೆಳೆಗಳಾದ ತೆಂಗು, ಮಾವು, ಸಪೋಟ, ಆಡಿಕೆ, ಬಾಳೆ ಮತ್ತು ತರಕಾರಿ ಬೆಳೆಗಳನ್ನು ಬೆಳೆದು ಜೀವನದ ಬಂಡಿ ನಡೆಸುತ್ತಿದ್ದಾರೆ. ಇಂತಹ ವ್ಯವಸಾಯ. ಹೈನುಗಾರಿಕೆಗೆ ಯೋಗ್ಯವಾಗಿರುವ ಫಲವತ್ತಾದ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳುತ್ತಿರುವುದು ನೋವಿನ ಸಂಗತಿಯಾಗಿದೆ.

ಹಾಗಾಗಿ ಈ ಭಾಗಗಳ ರೈತರಿಗೆ ಈ ವೃತ್ತಿಗಳನ್ನು ಬಿಟ್ಟರೆ ಬೇರೆ ಯಾವುದೇ ಉದ್ಯೋಗ ತಿಳಿದಿರುವುದಿಲ್ಲ ಎಂದರು. ಆದುದರಿಂದ ಅಹೋರಾತ್ರಿ ಧರಣಿಯನ್ನು ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಬೆಂಬಲವನ್ನು ಸೂಚಿಸಲು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ರವರು ಹಾಗೂ ಇನ್ನೂ ಅನೇಕ ಗಣ್ಯರುಗಳು ಆಗಮಿಸುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಡದಿ ಪುರಸಭಾ ಅಧ್ಯಕ್ಷೆ ಭಾನುಪ್ರಿಯ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಪುರಸಭಾ ಸದಸ್ಯರಾದ ದೇವರಾಜು, ರಮೇಶ್, ಜೆಡಿಎಸ್ ಮುಖಂಡರಾದ ಶೇಷಪ್ಪ, ಸೋಮೇಗೌಡ, ಖಲೀಲ್, ಇಟ್ಟಮಡು ಗೋಪಾಲ್, ಚಂದ್ರಶೇಖರ್, ನರಸಿಂಹಯ್ಯ ಹಾಗೂ ಇತರರು ಇದ್ದರು.

### ಸ್ಮಾರ್ಟ್ ಸಿಟಿ ನಿರ್ಮಾಣಕ್ಕೆ ಭೂ ಸ್ವಾಧೀನ ಕ್ರಮ

**ಸರ್ಕಾರದ ಭೂ ಸ್ವಾಧೀನಪಡಿಸಿಕೊಂಡು ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿರುವುದರಿಂದ ಇದನ್ನು ವಿರೋಧಿಸಿ ರೈತರ ಭೂಮಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಬೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರುಗಳು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸ್ಮಾರ್ಟ್ ಸಿಟಿ ನಿರ್ಮಾಣಕ್ಕೆ ಭೂ ಸ್ವಾಧೀನ ಕ್ರಮ ವಿರೋಧಿಸಿ ಇಲ್ಲಿಗೆ 311 ದಿನಗಳು ಕಳೆದರೂ ಸರ್ಕಾರಿ ಅಧಿಕಾರಿಗಳಾಗಲಿ ಅಥವಾ ಸ್ಥಳೀಯ ಚುನಾಯಿತಾ ಪ್ರತಿನಿಧಿಗಳಾಗಲಿ ರೈತರ ಸಮಸ್ಯೆ ಕೇಳಲು ಬಂದಿಲ್ಲ ಎಂದರು.**

# ಯಲಚವಾಡಿ ಗ್ರಾಮದಲ್ಲಿ ರೈತರ ಬೆಳೆಯನ್ನು ಆನೆಗಳ ಹಿಂಡು ನಾಶ

• ಉದಯವಾಹಿನಿ, ಹಾರೋಹಳ್ಳಿ

ತಾಲ್ಲೂಕಿನ ಯಲಚವಾಡಿ ಗ್ರಾಮದಲ್ಲಿ ರೈತರ ಬೆಳೆಯನ್ನು ಆನೆಗಳ ಹಿಂಡು ನಾಶಪಡಿಸಿವೆ. ರಾತ್ರಿ ಸಮಯದಲ್ಲಿ ನಡೆದ ಈ ಘಟನೆಯಲ್ಲಿ ಬಾಳೆ, ತೆಂಗು ಮತ್ತು ಅಡಿಕೆ ಬೆಳೆ ಹಾಳಾಗಿದೆ. ಕಿರಣ್ (ಕೆಂಚೇಗೌಡ) ಪುಟ್ಟರಾಜು ಎಂಬ ರೈತರ ಒಟ್ಟು ಸುಮಾರು 2.17 ಎಕರೆ ಜಮೀನಿನಲ್ಲಿ ಬೆಳೆದಿದ್ದ ಬೆಳೆಯನ್ನು ಆನೆಗಳು ತುಳಿದು ಹಾಕಿದ್ದರಿಂದ ಸುಮಾರು ರೂ.10 ಲಕ್ಷ ನಷ್ಟ ಉಂಟಾಗಿದೆ. ಕಳೆದ ನಾಲ್ಕು ದಿನಗಳಿಂದ ರಾತ್ರಿ ಹೊತ್ತು ಈ ದಾಳಿ ನಡೆಯುತ್ತಿದೆ. ರೈತರು ತಮ್ಮ ಬೆಳೆ ರಕ್ಷಿಸಿಕೊಳ್ಳಲು ಪರದಾಡುತ್ತಿದ್ದಾರೆ. ಜಿಲ್ಲಾಡಳಿತ ತಕ್ಷಣವೇ ಗಮನಹರಿಸಿ ಕ್ರಮಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಯಲಚವಾಡಿ ಗ್ರಾಮಕ್ಕೆ ರಾತ್ರಿ ವೇಳೆಯಲ್ಲಿ ನುಗ್ಗಿರುವ ಆನೆಗಳ ಹಿಂಡು ರೈತರು ಬೆಳೆದಿದ್ದ ಬಾಳೆ,ತೆಂಗು, ಅಡಿಕೆ ಬೆಳೆಗಳನ್ನು ತುಳಿದು ನಾಶಪಡಿಸಿವೆ. ಹಾರೋಹಳ್ಳಿ ತಾಲ್ಲೂಕಿನ ಯಲಚವಾಡಿ ಗ್ರಾಮದ ಕೆಂಚೇಗೌಡ (ಕಿರಣ್) 1.17ಎಕರೆಯಲ್ಲಿ ಬೆಳೆದಿದ್ದ ಬಾಳೆ,ಅಡಿಕೆ,20 ತೆಂಗಿನ ಮರ, ಪುಟ್ಟರಾಜು ಎಂಬುವರಿಗೆ ಸೇರಿದ 1ಎಕರೆ ಜಮೀನಿನಲ್ಲಿ ಬೆಳೆದಿದ್ದ ಅಡಿಕೆ,ತೆಂಗು ಆನೆಗಳ ಹಿಂಡು ತುಳಿದು ಹಾಕಿದ್ದು ರೈತರಿಗೆ ಒಟ್ಟು 10 ಲಕ್ಷದಷ್ಟು ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಬನ್ನೇರುಘಟ್ಟ ವಲಯ ಅರಣ್ಯ ಪ್ರದೇಶದ ಹತ್ತಿರದಲ್ಲೇ ಯಲಚವಡಿ ಗ್ರಾಮವಿದ್ದು ಆನೆಗಳ ಹಿಂಡು ಪದೇಪದೇ ದಾಳಿ ನಡೆಸಿ ರೈತರ ಜೀವ ಹಿಂಡುತ್ತಿವೆ. ವರ್ಷದ ಕೂಳಿಗಾಗಿ ಬೆಳೆದಿದ್ದ ಬೆಳೆಗಳನ್ನು ಆನೆಗಳ ಹಿಂಡು ಕ್ಷಣಾರ್ಧದಲ್ಲೇ ತಿಂದು ತೇಗುತ್ತಿವೆ. ತಿನ್ನುವುದಲ್ಲವೇ ಎಕರೆಗಟ್ಟಲೆ ಬೆಳೆಗಳನ್ನು ತುಳಿದು ನಾಶಪಡಿಸುತ್ತಿದ್ದು ರೈತರು ಬೆಳೆಗಳನ್ನು ರಕ್ಷಿಸಿಕೊಳ್ಳಲು ಹರಸಾಹಸ ಪಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.


ಉದಯವಾಹಿನಿ ಚಿತ್ರ

# ರಾಮನ ಹೆಸರಿನಿಂದ ಕ್ರಾಂತಿಯಾಗದು: ಕೋಡಿಹಳ್ಳಿ ಚಂದ್ರಶೇಖರ್

• ಉದಯವಾಹಿನಿ, ಶಿಡ್ಲಘಟ್ಟ

ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯು ಮಣ್ಣಿನ ಆರೋಗ್ಯ, ರೈತರು ಭೂಮಿ ಕಳೆದುಹೋಗುತ್ತಿರುವ ಕುರಿತು ವಿಚಾರ ಸಂಕಿರಣವನ್ನು ಶುಕ್ರವಾರ ಹಮ್ಮಿಕೊಳ್ಳಲಾಯಿತು.ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, ರಾಜಕಾರಣವು ಕೇವಲ ಹಣದ ವ್ಯವಹಾರವಾಗಿದೆ. ಹೆಚ್ಚು ಖರ್ಚು ಮಾಡಬಲ್ಲವರು ಅಭ್ಯರ್ಥಿಯಾಗಲು ಯೋಗ್ಯ ಎಂಬುದಾಗಿ ರಾಜಕೀಯ ಪಕ್ಷಗಳು ತೀರ್ಮಾನಿಸಿವೆ.

ಗೆಲ್ಲಲು ಬಂಡವಾಳ ಹಾಕುವ ಸಾಮರ್ಥ್ಯವಿರುವ, ಜಾತಿ, ಧರ್ಮದ ಬಲ ಚುನಾವಣೆ ಸ್ಪರ್ಧೆಗೆ ಮಾನದಂಡವಾಗಿದೆ. ಭ್ರಷ್ಟ ರಾಜಕಾರಣದ ಪರ್ಯಾಯ ದಿಕ್ಕುನೆಡೆ ಚಿಂತಿಸಲು ಮಾರ್ಚ್ ಕೊನೆಯಲ್ಲಿ ಕಲಬುರಗಿಯಲ್ಲಿ ರೈತ ಸಂಘದಿಂದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗುವುದು' ಎಂದರು. ಗಾಂಧೀಜಿ ಹೆಸರನ್ನು ತೆಗೆದು ರಾಮನ ಹೆಸರು ಇಡುವುದರಿಂದ ಕ್ರಾಂತಿಯಾಗುತ್ತದೆ ಎಂಬ ಭ್ರಮೆಯಿದ್ದರೆ ಅದು ಅವರ ಮೂರ್ಖತನ ಎಂದು ಮನರೇಗಾ ಕಾಯ್ದೆಗೆ ತಿದ್ದುಪಡಿ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು. ಯೋಜನೆಯ ಮುಖ್ಯ ಉದ್ದೇಶ ದುಡಿಯುವ ವರ್ಗಕ್ಕೆ ನೆರವಾಗಬೇಕು. ಹೆಚ್ಚು ಆರ್ಥಿಕ ಸಹಾಯ ಸಿಗುವಂತಿರಬೇಕು. ಈ ಯೋಜನೆಯನ್ನು ವಿರೋಧಿಸುತ್ತಿರುವವರು ಯಾವುದೇ ಪರ್ಯಾಯ ಕಾರ್ಯಕ್ರಮ ರೂಪಿಸುತ್ತಿಲ್ಲ ಎಂದು ಕಾಂಗ್ರೆಸ್ ವಿರುದ್ಧವೂ ಪರೋಕ್ಷವಾಗಿ ತಿವಿದರು.


ಉದಯವಾಹಿನಿ ಚಿತ್ರ

ರೈತರ ಜಮೀನುಗಳನ್ನು ಸರ್ಕಾರ ವಶಕ್ಕೆ ಪಡೆದು ಕೈಗಾರಿಕೆಗಳಿಗೆ ನೀಡಲು ಹೊರಟಿರುವುದು 2013ರ ಭೂಸ್ವಾಧೀನ ಕಾಯ್ದೆ ವಿರುದ್ಧದ ನಡವಳಿಕೆಯಾಗಿದೆ. ಸಿದ್ದರಾಮಯ್ಯ ಅವರು ವಿಪಕ್ಷದಲ್ಲಿದ್ದಾಗ ಇದನ್ನು ವಿರೋಧಿಸಿದ್ದರು. ಈಗ ಇದನ್ನು ಮುಂದುವರಿಸಿದ್ದಾರೆ.

ರಾಜಕೀಯ ಉದ್ದೇಶದಿಂದ ಅವರು ಅನ್ನದಾತನನ್ನು ಕಡೆಗಣಿಸಿದ್ದಾರೆ. ಇದರಿಂದ ಕೃಷಿ ವಲಯಕ್ಕೆ ದೊಡ್ಡ ಪೆಟ್ಟು ಬಿದ್ದಿದೆ ಎಂದರು. ಕೋಲಾರ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನ ವಿಭಾಗದ ಸಹಪ್ರಾಧ್ಯಾಪಕ ಡಾ.ಎಸ್.ಅನಿಲ್ ಕುಮಾರ್ ಮಾತನಾಡಿ, ಭೂತಾಯಿಗೆ ಎಷ್ಟು ಆಹಾರ ಮತ್ತು ಯಾವ ರೀತಿಯ ಆಹಾರ ಕೊಡಬೇಕು ಎಂಬ ತಿಳಿವಳಿಕೆ ಇರಬೇಕು. ಅಸಮರ್ಪಕವಾಗಿ ಭೂಮಿಗೆ ರಾಸಾಯನಿಕ ಸುರಿದರೆ ಭೂಮಿಯಲ್ಲಿ ಉಂಟಾಗುವ ಅಸಮತೋಲನದಿಂದ ಮಣ್ಣಿನ ಆರೋಗ್ಯ ಕೆಡುತ್ತದೆ ಎಂದರು. ರೈತ ಸಂಘಟನೆಯಿಂದ ಕೃಷಿ ಪ್ರವಾಸೋದ್ಯಮ ಮಾಡಬಹುದು. ನಗರ ಪ್ರಾಂತ್ಯದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಗ್ರಾಮೀಣ ಪರಿಸರ, ಕೃಷಿ, ಪರಿಕರಗಳು, ವಿವಿಧ ಬೆಳೆಗಳನ್ನು ತೋರಿಸಿ ವಿವರಿಸಿ, ಗ್ರಾಮೀಣ ಖಾದ್ಯವನ್ನು ಉಣಬಡಿಸಿ, ಕೃಷಿಯ ಬಗ್ಗೆ ಮುಂದಿನ ಪೀಳಿಗೆಗೆ ಸಕಾರಾತ್ಮಕ ಅನುಭವವನ್ನು ನೀಡುವ ಮೂಲಕ, ಆರ್ಥಿಕತೆಯನ್ನೂ ಹೆಚ್ಚಿಸಿಕೊಳ್ಳಬಹುದು ಎಂದು ನುಡಿದರು.

**ನಮ್ಮ ತಾಲ್ಲೂಕು ಕಚೇರಿಯಲ್ಲಿ ರೈತರ ಕೆಲಸಕ್ಕೆ ಮೊದಲ ಆದ್ಯತೆ ನೀಡಿದ್ದೇವೆ. ತಾಲ್ಲೂಕು ಮಟ್ಟದ ಎಲ್ಲಾ ಇಲಾಖೆಗಳಿಂದಲೂ ಇದೇ ಸ್ಪಂದನೆಯಿದೆ. ರೈತರಿಗೆ ಯಾವುದೇ ರೀತಿಯ ಸಮಸ್ಯೆಗಳಿದ್ದರೂ ನನ್ನ ಗಮನಕ್ಕೆ ತನ್ನಿ' ಎಂದು ಹೇಳಿದರು.**

**-ತಹಶೀಲ್ದಾರ್ ಗಗನಸಿಂಧು**

# ಕಳಪೆ ಕಾಮಗಾರಿ: ದಿಟ್ಟೂರು ಹೋಗಲು ಪೌರ ಕಾರ್ಮಿಕರ ಹಿಂದೇಟು

• ಉದಯವಾಹಿನಿ, ತುಮಕೂರು

ಎರಡು ವರ್ಷಗಳ ಹಿಂದಷ್ಟೇ ಪೌರ ಕಾರ್ಮಿಕರಿಗೆ ನಿರ್ಮಿಸಿ ಕೊಟ್ಟಿದ್ದ ಮನೆಗಳು ಬಿರುಕು ಬಿಡುತ್ತಿವೆ. ನಿರಂತರವಾಗಿ ನೀರು ಸೋರಿಕೆಯಿಂದ ಗೋಡೆಗಳು ಪಾಚಿ ಕಟ್ಟುತ್ತಿವೆ. ಇನ್ನೂ ಹತ್ತಾರು ಮನೆಗಳು ಖಾಲಿ ಖಾಲಿಯಾಗಿವೆ. ಮಹಾನಗರ ಪಾಲಿಕೆಯ ಕಾಯಂ ಪೌರ ಕಾರ್ಮಿಕರಿಗೆ ವಸತಿ ಕಲ್ಪಿಸಲು, ನಗರ ಹೊರವಲಯದ ದಿಟ್ಟೂರಿನ ಬಳಿ 2 ಎಕರೆ ಪ್ರದೇಶದಲ್ಲಿ 52 ಮನೆ ನಿರ್ಮಿಸಲಾಗಿದೆ. ಇದಕ್ಕಾಗಿ ಪಾಲಿಕೆ ರೂ.3.89 ಕೋಟಿ ವ್ಯಯಿಸಿದೆ. 2016ರಲ್ಲಿ ಗೃಹ ಭಾಗ್ಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. ಸುಮಾರು 9 ವರ್ಷಗಳ ನಂತರ ಕಾಮಗಾರಿ ಪೂರ್ಣಗೊಂಡಿತ್ತು.

2023ರ ಸೆ. 23ರಂದು ಪೌರ ಕಾರ್ಮಿಕರ ದಿನಾಚರಣೆ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಜಿ.ಪರಮೇಶ್ವರ ಸಾಂಕೇತಿಕವಾಗಿ ಮನೆಗಳ ಬೀಗವನ್ನು ಕಾರ್ಮಿಕರಿಗೆ ನೀಡಿದ್ದರು. ಹಂಚಿಕೆಯಾದ ಎಲ್ಲಾ ಮನೆಗಳಲ್ಲಿ ಪೌರ ಕಾರ್ಮಿಕರು ವಾಸಿಸುತ್ತಿಲ್ಲ. ಮೂಲಭೂತ ಸೌಲಭ್ಯದ ಕೊರತೆ ಕಾರಣಕ್ಕೆ ಹಲವು ಮನೆಗಳಿಗೆ ಬೀಗ ಹಾಕಲಾಗಿದೆ.

ಸಮುಚ್ಚಯದ ಬಳಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಿಲ್ಲ. ಇಲ್ಲಿನ ಜನ ಕೊಳವೆ ಬಾವಿ ನೀರೇ ಕುಡಿಯುತ್ತಿದ್ದಾರೆ. ನೀರು ಕುಡಿಯಲು ಯೋಗ್ಯವೇ ಎಂಬುವುದನ್ನು ಪರಿಶೀಲಿಸುವ ಕಾರ್ಯವೂ ಆಗಿಲ್ಲ. ಇದು ಜನರ ಆರೋಗ್ಯ ಕೆಡಿಸುತ್ತಿದೆ. ನೀರಿನ ಘಟಕ ತೆರೆಯುವಂತೆ ಸ್ಥಳೀಯರು ಮನವಿ ಮಾಡಿದರೂ ಆಡಳಿತ ವರ್ಗದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ.


ಉದಯವಾಹಿನಿ ಚಿತ್ರ

**ಅನರ್ಹರಿಗೆ ಮನೆ ಹಂಚಿಕೆ:** ಮನೆ ಇಲ್ಲದ ಪೌರ ಕಾರ್ಮಿಕರಿಗೆ ವಸತಿ ನೀಡುವ ಉದ್ದೇಶದಿಂದ ಗೃಹ ನಿರ್ಮಾಣ ಕಾರ್ಯ ನಡೆಸಲಾಗಿದೆ. ಆದರೆ, ಈಗಾಗಲೇ ಮನೆ ಇದ್ದವರಿಗೂ ಸಮುಚ್ಚಯದಲ್ಲಿ ಮನೆ ಹಂಚಿಕೆ ಮಾಡಲಾಗಿದೆ. ಬಾಡಿಗೆ ಮನೆಯಲ್ಲಿ ಇರುವವರು ಇಲ್ಲಿಗೆ ಸ್ಥಳಾಂತರಗೊಂಡಿದ್ದಾರೆ. ಸ್ವಂತ ಮನೆ ಇದ್ದವರು ಇಲ್ಲಿನ ಬಂಡವಾಳ ಕಂಡು ಸ್ಥಳಾಂತರಕ್ಕೆ ಹೆದರುತ್ತಿದ್ದಾರೆ. ಹೀಗಾಗಿ ಹಲವು ಮನೆಗಳು ಖಾಲಿಯಾಗಿವೆ.

ಪೌರ ಕಾರ್ಮಿಕರು ಹೊತ್ತು ಮೂಡುವ ಮುನ್ನವೇ ಕೆಲಸಕ್ಕೆ ತೆರಳಬೇಕಾಗುತ್ತದೆ. ವಸತಿ ಸಮುಚ್ಚಯದಿಂದ ನಗರಕ್ಕೆ ಬರಲು ಬಸ್. ಆಟೋ ವ್ಯವಸ್ಥೆ ಇಲ್ಲ. ಸ್ವಂತ ವಾಹನ ಇದ್ದವರು ಮಾತ್ರ ನಗರದ ಕಡೆಗೆ ಬರುವಂತಾಗಿದೆ. ಅನಿವಾರ್ಯವಾಗಿ ಬರಲೇಬೇಕಾದವರು ಆಟೋಗಳಿಗೆ ದುಬಾರಿ ಹಣ ಪಾವತಿಸಬೇಕಾಗುತ್ತದೆ. ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ ಕಲ್ಪಿಸಬೇಕು ಎಂಬ ಬೇಡಿಕೆ ಈವರೆಗೂ ಈಡೇರಿಲ್ಲ.

ಸಮುಚ್ಚಯದಲ್ಲಿ ಸಂಧಿ ಮನೆಗಳು ಜಾಸ್ತಿ ಇದೆ. ಇದೇ ಕಾರಣಕ್ಕೆ ಪೌರ ಕಾರ್ಮಿಕರು ಇಲ್ಲಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಊರಿಂದ ಆಚೆ ಮನೆ ಕೊಟ್ಟಿದ್ದಾರೆ. ಅಗತ್ಯ ಸೌಲಭ್ಯ ಕಲ್ಪಿಸದಿದ್ದರೆ ಬದುಕು ಸಾಗಿಸುವುದು ಹೇಗೆ? ಅಡುಗೆ ಕೋಣೆಯ ಬಟನ್ ಒತ್ತಿದರೆ ಶೌಚಾಲಯದಲ್ಲಿ ಲೈಟ್ ಬೆಳಗುತ್ತದೆ. ವಿದ್ಯುತ್ ಸಂಪರ್ಕ ಸರಿಯಾಗಿ ಇಲ್ಲದೆ ಅನೇಕ ಮೋಟರ್‌ಗಳು ಸುಟ್ಟು ಹೋಗಿವೆ ಎಂದು ಮಂಜುಳಾ ಇಲ್ಲಿನ ವಾಸ್ತವದ ಸ್ಥಿತಿ ತೆರೆದಿಟ್ಟರು.

# ತಾಲ್ಲೂಕು ಸರ್ಕಾರಿ ನೌಕರರ ಸಂಘದ ಕ್ರೀಡಾಕೂಟ


• ಉದಯವಾಹಿನಿ, ಕುಣಿಗಲ್

ಪಟ್ಟಣದ ಜಿಕೆಬಿಎಂಎಸ್ ಮೈದಾನದಲ್ಲಿ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಕ್ರೀಡಾಕೂಟ ನಡೆಯಿತು.ಸದಾ ಕಡತ, ವರದಿ, ಸ್ಥಳ ಪರಿಶೀಲನೆ ಕಾರ್ಯ ಒತ್ತಡದಲ್ಲಿದ್ದ ನೌಕರರು ಕ್ರೀಡಾಕೂಟಕ್ಕೆಂದೆ ಸಿದ್ಧಪಡಿಸಿದ್ದ ಸಮವಸ್ತ್ರ ಧರಿಸಿ ತಮ್ಮ ನೆಚ್ಚಿನ ಆಟಗಳನ್ನು ಪಾಲ್ಗೊಂಡರು. ಕಾರ್ಯಕ್ರಮವನ್ನು ತಹಶೀಲ್ದಾರ್ ರಶ್ಮಿ ಉದ್ಘಾಟಿಸಿದರು. ಸಿಪಿಐ ಮಾದ್ಯಾ ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿ ಬೋರೆಗೌಡ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಮರಿಯಪ್ಪ, ನೌಕರರ ಸಂಘದ ಅಧ್ಯಕ್ಷ ಸಿ.ಸಿ.ಶಿವಣ್ಣ, ಕಾರ್ಯದರ್ಶಿ ಶಿವರಾಮಯ್ಯ, ಪಶುಪಾಲನ ಇಲಾಖೆ ಸಹಾಯಕ ನಿರ್ದೇಶಕ ನವೀನ್, ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷ ರವೀಂದ್ರ, ಗ್ರಾಮಾಡಳಿತಾಧಿಕಾರಿ ಸಂಘದ ಅಧ್ಯಕ್ಷ ವೆಂಕಟೇಶ್ ಪಾಲ್ಗೊಂಡಿದ್ದರು.

**ಫಲಿತಾಂಶ ವಿವರ:** ಕ್ರಿಕೆಟ್‌ನಲ್ಲಿ ಕಂದಾಯ ಇಲಾಖೆಯ ರಘು ತಂಡ ಪ್ರಥಮ ಮತ್ತು ಮಾಸ್ಟರ್ ಮೈಂಡ್ ತಂಡ ದ್ವಿತೀಯ, ಮಹಿಳೆಯರ ವಾಲಿಬಾಲ್‌ನಲ್ಲಿ ಶಿಕ್ಷಣ ಇಲಾಖೆಯ ಸುಧಾ ತಂಡ ಪ್ರಥಮ, ಕಂದಾಯ ಇಲಾಖೆಯ ಭವ್ಯ ತಂಡ ದ್ವಿತೀಯ ಸ್ಥಾನ ಪಡೆಯಿತು. ಪುರುಷರ ವಾಲಿಬಾಲ್ ಪ್ರಥಮ ದ್ವಿತೀಯ ಸ್ಥಾನ ಪಡೆದರು.

ಥೋಬಾಲ್ ಮಹಿಳೆಯರಲ್ಲಿ ಕೆ.ಲೀಲಾವತಿ ತಂಡ ಪ್ರಥಮ, ಬಿ.ಆರ್.ಸೌಮ್ಯ ತಂಡವು ದ್ವಿತೀಯ ಸ್ಥಾನ ಪಡೆದಿದೆ. ಚಿತ್ರಗೀತೆ ಸ್ಪರ್ಧೆಯಲ್ಲಿ ಎಸ್.ಕೆ.ಸಿದ್ದಪ್ಪ, ಮಮತ ಪ್ರಥಮ, ಮೋಹನಕುಮಾರ್ ಅಶ್ವಿನಿ ದ್ವಿತೀಯ. ಚೆಲುವೇಗೌಡ, ಮೇಘನಾ ತೃತೀಯ ಸ್ಥಾನ ಪಡೆದರು. ಜಾನಪದ ಗೀತೆಯಲ್ಲಿ ಎ.ಎನ್.ರವೀಶ್, ಅಶ್ವಿನಿ ಪ್ರಥಮ, ಕೆ.ರವಿಕುಮಾರ್, ಎಂ.ಎಲ್. ಶೀಲಾವತಿ ದ್ವಿತೀಯ, ಸಿ.ಆರ್.ಮನೋಜ್, ಪಿ.ಲಲಿತಾ ತೃತೀಯ ಸ್ಥಾನ ಪಡೆದಿದ್ದಾರೆ. ಏಕಪಾತ್ರಾಭಿನಯ ಜಿ.ಎಚ್. ಹನುಮೇಶ್, ಕೆ.ಎಚ್.ಅನಿತಲಕ್ಷ್ಮಿ ಪ್ರಥಮ, ಸಿ.ಆರ್. ಮನೋಜ್ ದ್ವಿತೀಯ, ಕೆ.ರವಿಕುಮಾರ್ ತೃತೀಯ ಸ್ಥಾನ ಪಡೆದರು.

100 ಮೀ ಓಟದಲ್ಲಿ ರಕ್ಷಿತ, ವೈ.ಎನ್.ವಸಂತಮ್ಮ. ಶಿವಗೊಂಡ ಬೆಳಗಲಿ, ಜಿ.ಕೆ.ಸುರೇಶ್, 200 ಮೀಟರ್ ಓಟದಲ್ಲಿ ಎನ್.ಸಿ.ಮಮತ, ವೈ.ಎನ್.ವಸಂತಮ್ಮ, ಮಂಜುನಾಥ ಬಾರ್ಕೆ, 400 ಮೀಟರ್ ಓಟದಲ್ಲಿ ರಮ್ಯ, ವೇದಾವತಿ, ನವೀನ ಪ್ರಥಮ ಬಹುಮಾನ ಪಡೆದಿದ್ದಾರೆ.


ಉದಯವಾಹಿನಿ ಚಿತ್ರ

# 4 ಸಾವಿರ ಬಿಪಿಎಲ್ ಕಾರ್ಡ್ ರದ್ದು; ಕೇಂದ್ರ ಸರ್ಕಾರದ ಮಾನದಂಡ ಆಧರಿಸಿ ಕ್ರಮ

## ಕೇಂದ್ರ ಸರಕಾರದ ಮಾನದಂಡ ಆಧರಿಸಿ ಮೈಸೂರು ಜಿಲ್ಲೆಯಲ್ಲಿಅನರ್ಹರು ಪಡೆದುಕೊಂಡಿದ್ದ ಬಿಪಿಎಲ್ ಕಾರ್ಡ್ ರದ್ದು

• ಉದಯವಾಹಿನಿ, ಮೈಸೂರು

ಜಿಲ್ಲೆಯಲ್ಲಿ ಅನರ್ಹರು ಪಡೆದುಕೊಂಡಿದ್ದ 4,282 ಬಿಪಿಎಲ್ ಕಾರ್ಡ್‌ಗಳನ್ನು ಕೇಂದ್ರ ಸರಕಾರದ ಮಾನದಂಡ ಆಧರಿಸಿ ರದ್ದುಪಡಿಸಲಾಗಿದೆ. ಕಳೆದ ಎರಡು ವರ್ಷಗಳಲ್ಲಿ18,932 ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಪಡಿಸಿ, ಎಪಿಎಲ್ ಚೀಟಿಯಾಗಿ ಪರಿವರ್ತಿಸಲಾಗಿದೆ. ಆಪರೇಷನ್ ಬಿಪಿಎಲ್ ಹೆಸರಿನಡಿ ಮೈಸೂರು ಜಿಲ್ಲಾದ್ಯಂತ ಪರಿಶೀಲನಾ ಕಾರ್ಯ ಪ್ರಗತಿಯ ಲ್ಲಿದೆ. ಎರಡು ವರ್ಷದಲ್ಲಿಅಂತ್ಯೋದಯ ಅನ್ನ ಯೋಜನೆ (ಎಎವೈ) 1,147 ಮತ್ತು ಆದ್ಯತಾ ಕುಟುಂಬ (ಪಿಎಚ್‌ಎಚ್) 17,785 ಸೇರಿದಂತೆ 18,932 ಕಾರ್ಡ್‌ಗಳು ರದ್ದಾಗಿವೆ.

**ಮೈಸೂರು ತಾಲೂಕಿನಲ್ಲೇ ಹೆಚ್ಚು**

2025-26ನೇ ಸಾಲಿನಲ್ಲಿ ನವೆಂಬರ್‌ವರೆಗೆ 63 ಎಎವೈ, 4219 ಪಿಎಚ್‌ಎಚ್ ಸೇರಿದಂತೆ 4,282 ಪಡಿತರ ಚೀಟಿಗಳು ಅಮಾನ್ಯಗೊಂಡಿವೆ. ಈ ಪೈಕಿ ಮೈಸೂರು ತಾಲ್ಲೂಕಿನಲ್ಲೇ ಅತಿ ಹೆಚ್ಚು 1119 ಅನರ್ಹ ಬಿಪಿಎಲ್ ಪಡಿತರ ಚೀಟಿಗಳು ಪತ್ತೆಯಾಗಿವೆ. ನಂತರದ ಸ್ಥಾನದಲ್ಲಿ ನಂಜನಗೂಡು (1030)ತಾಲ್ಲೂಕು ಇದೆ.



ಉದಯವಾಹಿನಿ ಚಿತ್ರ

ಉಭಯ ತಾಲ್ಲೂಕಿನಲ್ಲಿ ಅಕ್ರಮ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಸಾವಿರ ಗಡಿ ದಾಟಿದೆ. ಕೆ.ಆರ್.ನಗರ ತಾಲ್ಲೂಕಿನಲ್ಲಿ ಅತಿ ಕಡಿಮೆ ಅಂದರೆ 110 ಬಿಪಿಎಲ್ ಕಾರ್ಡ್, ಕಾಡನಂಚಿನ ಸಾಲಿ ಗ್ರಾಮ, ಎಚ್.ಡಿ.ಕೋಟೆಯಲ್ಲಿ 150 ಬಿಪಿಎಲ್ ಕಾರ್ಡ್‌ರದ್ದಾಗಿವೆ.

ಆಪರೇಷನ್ ಬಿಪಿಎಲ್ ಸರಕಾರಕ್ಕೆ ವರದಾನವಾದರೆ, ಪಡಿತರ ಗ್ರಾಹಕರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಹಲವರು ಪಡಿತರ ಪಡೆಯುವುದಕ್ಕಿಂತ ಆಸ್ಪತ್ರೆ ಸೌಲಭ್ಯ ಹಾಗೂ ವಿವಿಧ ಸರಕಾರಿ ಸವಲತ್ತು ಪಡೆಯಲು ಬಿಪಿಎಲ್ ಕಾರ್ಡ್ ಹೊಂದಿದ್ದರು. ಈಗ ಅವುಗಳೆಲ್ಲ ಕೈತಪ್ಪಿವೆ.

**ವಾಪಸ್ ಪಡೆಯಲು ಅವಕಾಶ:** ಅರ್ಹತೆ ಇದ್ದೂ ವಾರ್ಷಿಕ ಆದಾಯದ ಗೊಂದಲದಿಂದಾಗಿ ಕಾರ್ಡ್‌ಗಳು ರದ್ದಾಗಿದ್ದರೆ, ಸೂಕ್ತ ದಾಖಲೆಗಳೊಂದಿಗೆ ಆಹಾರ ಇಲಾಖೆ ಕಚೇರಿ ಅಥವಾ ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಮೈಸೂರು ಜಿಲ್ಲೆಯಲ್ಲೂ ಕಾರ್ಡ್ ರದ್ದಾದ ಸಾಕಷ್ಟು ಜನರು ಮತ್ತೆ ಬಿಪಿಎಲ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿದ್ದು, ಈ ಅರ್ಜಿಗಳನ್ನು ಪರಿಶೀಲಿಸಿ ಅರ್ಹರಿಗೆ ಬಿಪಿಎಲ್ ಕಾರ್ಡ್ ವಾಪಸ್ ನೀಡಲಾಗಿದೆ.

### ಕಾರ್ಡ್ ರದ್ದಾಗಲು ಕಾರಣ

**ವಾರ್ಷಿಕ 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವವರು, ಜಿಎಸ್‌ಟಿ ಪಾವತಿದಾರರು, ಸರಕಾರಿ ನೌಕರರು, ಹೊರ ರಾಜ್ಯಗಳಲ್ಲೂಪಡಿತರ ಚೀಟಿ ಹೊಂದಿರುವವರು, ರಾಜ್ಯದಲ್ಲೇ ಎರಡೆರಡು ಪಡಿತರ ಚೀಟಿ ಇರುವವರು, 6ರಿಂದ 12 ತಿಂಗಳ ಅವದಿಯಲ್ಲಿ ಒಮ್ಮೆಯೂ ಪಡಿತರ ಪಡೆಯದವರು, 7.5 ಎಕರೆಗಿಂತ ಹೆಚ್ಚಿನ ಕೃಷಿ ಭೂಮಿ ಹೊಂದಿದವರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ.**

## ಮಿನಿ ನ್ಯೂಸ್

### ಜೈವಿಕ ಉದ್ಯಾನಕ್ಕೆ ಬಸವಣ್ಣ ಹೆಸರು: ಸಚಿವ ಈಶ್ವರ ಖಂಡ್ರೆ

• ಉದಯವಾಹಿನಿ, ತುಮಕೂರು

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಿಂದ ಅಭಿವೃದ್ಧಿ ಪಡಿಸುತ್ತಿರುವ ಬೃಹತ್ ಉದ್ಯಾನಕ್ಕೆ ವಿಶ್ವಗುರು ಬಸವಣ್ಣ ಜೈವಿಕ ಉದ್ಯಾನ ಎಂದು ಹೆಸರಿಡಲು ನಿರ್ಧರಿಸಲಾಗಿದೆ ಎಂದು ಅರಣ್ಯ ಸಚಿವ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಈಶ್ವರ ಖಂಡ್ರೆ ಹೇಳಿದ್ದಾರೆ. ಮಹಾಸಭಾ ಅಧ್ಯಕ್ಷರಾದ ನಂತರ ಸಿದ್ಧಗಂಗಾ ಮಠಕ್ಕೆ ಭೇಟಿನೀಡಿ, ಸಿದ್ದಲಿಂಗ ಸ್ವಾಮೀಜಿ ಜತೆಗೆ ಮಾತುಕತೆ ನಡೆಸಿದ ಸಮಯದಲ್ಲಿ ಈ ವಿಷಯ ತಿಳಿಸಿದ್ದಾರೆ. ಸಮ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದ ಬಸವಣ್ಣ ಅವರನ್ನು ರಾಜ್ಯ ಸರ್ಕಾರ ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಲಾಲ್‌ಬಾಗ್, ಕಬ್ಬನ್ ಪಾರ್ಕ್ ಮಾದರಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬೃಹತ್ ಉದ್ಯಾನ ಅಭಿವೃದ್ಧಿ ಪಡಿಸಲಾಗುತ್ತಿದೆ. ಅದಕ್ಕೆ ಬಸವಣ್ಣ ಹೆಸರು ನಾಮಕರಣ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದರು. ಮೊದಲ ಹಂತದಲ್ಲಿ ಉದ್ಯಾನದ ಅಭಿವೃದ್ಧಿ ಕಾಮಗಾರಿಗೆ ರೂ.50 ಕೋಟಿ ನೀಡಲು ಸರ್ಕಾರ ಸಮ್ಮತಿಸಿದ್ದು, ಸಿಎಸ್‌ಆರ್ ನೆರವು ಪಡೆದು 2 ವರ್ಷದೊಳಗೆ ಉದ್ಯಾನ ಅಭಿವೃದ್ಧಿಪಡಿಸಿ ಉದ್ಘಾಟನೆ ಮಾಡಲಾಗುವುದು ಎಂದು ಹೇಳಿದ್ದಾರೆ.

### ಅಧಿಕಾರಿಗಳ ಕಾರ್ಯವೈಖರಿಗೆ ಉಪ ಲೋಕಾಯುಕ್ತ ಬಿ.ವೀರಪ್ಪ ಅಸಮಾಧಾನ

• ಉದಯವಾಹಿನಿ, ಕೆಜಿಎಫ್

ಸೂಕ್ತ ನಿರ್ದೇಶನ ನೀಡಿದರೂ, ಅಧಿಕಾರಿಗಳು ಸಮರ್ಪಕವಾಗಿ ಕೆಲಸ ಮಾಡದೆ ಇರುವುದನ್ನು ಗಮನಿಸಲಾಗಿದೆ. ಇದೇ ರೀತಿ ಮುಂದುವರೆದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಲೋಕಾಯುಕ್ತ ಬಿ.ವೀರಪ್ಪ ಹೇಳಿದರು.

ಬೆಮಲ್ ನಗರದ ಕಲಾಕ್ಷೇತ್ರದಲ್ಲಿ ನಡೆದ ದೂರುಗಳ ವಿಚಾರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಯವಿಟ್ಟು ಸಕಾಲದಲ್ಲಿ ಕೆಲಸ ಮಾಡಿ, ಸಾರ್ವಜನಿಕರಿಗೆ ಹಿಂಸೆ ಕೊಡಬೇಡಿ. ಈ ರೀತಿ ಪ್ರಕರಣಗಳು ಕಂಡು ಬಂದರೆ, ನನ್ನ ಪೆನ್ ಕೆಲಸ ಮಾಡಬೇಕಾಗುತ್ತದೆ. ಅದರ ಪರಿಣಾಮವನ್ನು ನೀವು ಎದುರಿಸಬೇಕಾಗುತ್ತದೆ ಎಂದು ಹೇಳಿದರು. ಘಟ್ಟಕಾಮಧೇನಹಳ್ಳಿಯ ಕೆರೆ ಒತ್ತುವರಿ ಬಗ್ಗೆ ಬಂದಿದ್ದ ದೂರಿನ ವಿಚಾರಣೆ ನಡೆಸಿದ ಉಪಲೋಕಾಯುಕ್ತರು ಸರ್ಕಾರಿ ಕೆರೆಯನ್ನು ಉಳಿಸುವ ಇಚ್ಛೆ ನಿಮಗೆ ಇಲ್ಲವೇ ಏಳು ದಿನ ಸಮಯ ಕೊಡುತ್ತೇನೆ. ಅಷ್ಟರೊಳಗೆ ಕೆರೆ ಒತ್ತುವರಿ ತೆರವು ಮಾಡದೆ ಇದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವೆಂಕಟೇಶಪ್ಪ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಎಚ್ಚರಿಕೆ ನೀಡಿದರು.

### ಬಸ್ ತಂಗುದಾಣ ನೆಲಸಮ ಅಧಿಕಾರಿಗಳ ವಿರುದ್ಧ ತನಿಖೆಗೆ ಒತ್ತಾಯ

• ಉದಯವಾಹಿನಿ, ಬಂಗಾರಪೇಟೆ

ತಾಲ್ಲೂಕಿನ ನಲ್ಲಗುಟ್ಟಲ್ಲಹಳ್ಳಿ ಗ್ರಾಮದ ಕಾಮಸಮುದ್ರ ಮುಖ್ಯ ರಸ್ತೆಯಲ್ಲಿ ದಶಕಗಳಿಂದ ಇದ್ದ ಬಸ್ ತಂಗುದಾಣವನ್ನು ವಾಣಿಜ್ಯ ಮಳಿಗೆಯೊಂದರ ಲಾಭಕ್ಕಾಗಿ ಅಧಿಕಾರಿಗಳ ಕುಮ್ಮಕ್ಕಿನಿಂದ ರಾತ್ರೋರಾತ್ರಿ ನೆಲಸಮ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಬಂಗಾರಪೇಟೆ - ಕಾಮಸಮುದ್ರ ಮುಖ್ಯ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಖಾಸಗಿ ವಾಣಿಜ್ಯ ಮಳಿಗೆಗೆ ದಾರಿ ಮಾಡಿಕೊಡಲು ಕೇತಗಾನಹಳ್ಳಿ ಪಂಚಾಯಿತಿ ಅಧಿಕಾರಿಗಳು ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಸಾಮೀಲಾಗಿ ಯಾವುದೇ ಸೂಚನೆ ನೀಡದೆ ಜನ ಸಂಚಾರವಿಲ್ಲದ ವೇಳೆ ಬೃಹತ್ ಯಂತ್ರದ ಮೂಲಕ ತಂಗುದಾಣ ಧ್ವಂಸಗೊಳಿಸಿದ್ದಾರೆ ಎಂದು ಗ್ರಾಮಸ್ಥರು ದೂರಿದ್ದಾರೆ. ತಂಗುದಾಣವು ಶಿಥಿಲಗೊಂಡಿದ್ದು ಹಾಗೂ ತೆರವು ಕಾರ್ಯಾಚರಣೆ ಮಾಡಲಾಗಿದೆ ಎಂದು ಪಂಚಾಯಿತಿ ಅಧಿಕಾರಿಗಳು ಸಬೂಬು ಹೇಳುತ್ತಾರೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

### ನಗರ ಪಾಲಿಕೆಯಲ್ಲಿ ಅಕ್ರಮ ಏರಿಕೆ ಸಂಸದ ಯದುವೀರ್ ಆರೋಪ

• ಉದಯವಾಹಿನಿ, ಮೈಸೂರು

ಮೈಸೂರು ಮಹಾನಗರಪಾಲಿಕೆ ಈಗ ಅವ್ಯವಸ್ಥೆಗಳ ಆಗರವಾಗಿದೆ. ಉತ್ತರದಾಯಿತ್ವ ಇಲ್ಲದಿರುವುದರಿಂದಾಗಿ ಅಕ್ರಮಗಳ ಸಂಖ್ಯೆ ಏರಿಕೆಯಾಗಿದೆ. ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರವೇ ಸಂಪೂರ್ಣ ಹೊಣೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದ್ದಾರೆ.ಈ ಬಗ್ಗೆ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಪಾಲಿಕೆಯಲ್ಲಿ ಸಾರ್ವಜನಿಕ ನಿಧಿಯನ್ನೇ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಮೂವರು ಮಹಿಳಾ ಸಿಬ್ಬಂದಿಯನ್ನು ಅಮಾನತು ಮಾಡಿರುವುದೇ ಇದಕ್ಕೆ ಸಾಕ್ಷಿ ಎಂದು ಹೇಳಿದ್ದಾರೆ.

ಚುನಾಯಿತ ಜನಪ್ರತಿನಿಧಿಗಳು ಇಲ್ಲದಿರುವುದು, ಸಮರ್ಥ ಮೇಲ್ವಿಚಾರಣೆ ಮಾಡದಿರುವುದು, ಸುಧಾರಣೆ ಕ್ರಮಗಳನ್ನು ಕೈಗೊಳ್ಳದಿರುವುದು, ಉತ್ತರದಾಯಿತ್ವ ಇರದಿರುವುದು ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿದೆ' ಎಂದು ದೂರಿದ್ದಾರೆ. ಕಾಂಗ್ರೆಸ್ ಸರ್ಕಾರವು ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದೇ ವಿಳಂಬ ಧೋರಣೆ ತೋರುತ್ತಿರುವುದು ಎಲ್ಲದ್ದಕ್ಕೂ ಕಾರಣವಾಗಿದೆ. ಸ್ಥಳೀಯ ಪ್ರಜಾಪ್ರಭುತ್ವ ಹಾದಿ ತಪ್ಪಿದ್ದರಿಂದ ಭ್ರಷ್ಟಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. ಒಟ್ಟಾರೆ ಎಲ್ಲಾ ಪ್ರಕರಣಗಳಿಗೂ ಕಾಂಗ್ರೆಸ್ ಸರ್ಕಾರವೇ ಸಂಪೂರ್ಣ ಜವಾಬ್ದಾರಿಯಾಗಿದೆ ಎಂದು ಆರೋಪಿಸಿದ್ದಾರೆ.

### ರಸ್ತೆ ವಿಸ್ತರಣೆಗೆ ಮರ ಕಡಿಯಬೇಡಿ ಪರಿಸರ ಕಾರ್ಯಕರ್ತರ ಆಗ್ರಹ

• ಉದಯವಾಹಿನಿ, ನಂಜನಗೂಡು

ಎಚ್.ಡಿ ಕೋಟೆ ರಸ್ತೆ ವಿಸ್ತರಣೆ ಮರ ಕಡಿಯದೇ ಮಾಡಲಾಗುತ್ತಿದೆ. ಇದೇ ಮಾದರಿಯನ್ನು ತಾಲ್ಲೂಕಿನ ಮುದ್ದನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 766ರಲ್ಲಿ ಅನುಸರಿಸಬೇಕು ಎಂದು ಪರಿಸರಕ್ಕಾಗಿ ನಾವು' ಸಂಘಟನೆಯ ಪರಶುರಾಮೇಗೌಡ ಹೇಳಿದರು. ತಾಲ್ಲೂಕಿನ ಮುದ್ದಹಳ್ಳಿಯಲ್ಲಿ ನಡೆದ ಸಾರ್ವಜನಿಕ ಅಹವಾಲು ಸಭೆಯಲ್ಲಿ ಅವರು ಮಾತನಾಡಿದರು.ಇರುವ ಮರಗಳನ್ನು ಉಳಿಸಿಕೊಂಡು, ಇನ್ನೂ ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಮರಗಳನ್ನು ಉಳಿಸಲು ಆದ್ಯತೆ ಕೊಡಿ, ಮುದ್ದನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 766ರಲ್ಲಿ ರಸ್ತೆ ವಿಸ್ತರಣೆಯನ್ನು 98 ಮರ ಕಡಿದು ಮಾಡುವ ಬದಲಿಗೆ ಯೋಜನೆಯನ್ನೇ ರದ್ದುಮಾಡಿ ಎಂದು ಆಗ್ರಹಿಸಿದರು.

ಅಂತರಾಳದಿಂದ...
EDITORIAL

# ನೊಯ್ಡಾ ದುರಂತ: ಯಾರು ಹೊಣೆ?

ಈ ದೇಶದಲ್ಲಿ ರಸ್ತೆಗಳಿರುವುದೇ ಅಪಘಾತ ಸಂಭವಿಸುವುದಕ್ಕಾಗಿ ಎಂದು ನಾವು ನಂಬಿಕೊಂಡು ಬಂದಿದ್ದೇವೆ. ಸರಕಾರದ ಅಂಕಿಅಂಶಗಳ ಪ್ರಕಾರ ಈ ದೇಶದಲ್ಲಿ ಪ್ರತಿದಿನ 485 ಜನರು ರಸ್ತೆ ಅಪಘಾತದಿಂದ ಮೃತಪಡುತ್ತಾರೆ. ದಿನಾ ಸಾಯುವವರಿಗೆ ಅಳುವವರು ಯಾರು? ಎಂಬಂತೆ, ಇದರ ಹಿಂದಿರುವ ವ್ಯವಸ್ಥೆಯ ವೈಫಲ್ಯಗಳು ಚರ್ಚೆಯಾಗುವುದು ಅಪರೂಪ ಹೀಗಿರುವ ಹೊತ್ತಿನಲ್ಲೇ ನೊಯ್ಡಾದಲ್ಲಿ ನಡೆದಿರುವ ಕಾರು ಅವಘಡವೊಂದು ದೇಶಾದ್ಯಂತ ಭಾರೀ ಚರ್ಚೆಗೊಳಗಾಗುತ್ತಿದೆ. ಘಟನೆ ನಡೆದಿರುವುದು ಉತ್ತರ ಪ್ರದೇಶದ ನೊಯ್ಡಾದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಯುವರಾಜ್ ಮೆಹ್ರಾ ಎಂಬವರು ಗುರುಗ್ರಾಮ್‌ನಲ್ಲಿರುವ ತನ್ನ ಕಚೇರಿಯಿಂದ ನೊಯ್ಡಾದಲ್ಲಿರುವ ತಮ್ಮ ನಿವಾಸಕ್ಕೆ ತೆರಳುವ ಸಂದರ್ಭದಲ್ಲಿ ಕಾರು ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದಲ್ಲಿರುವ ನೀರು ತುಂಬಿದ ಹೊಂಡಕ್ಕೆ ಬಿದ್ದಿದೆ. ಈ ಸಂದರ್ಭದಲ್ಲಿ ಯಾರಾದರೂ ನೆರವಿಗೆ ಬಂದಿದ್ದರೆ ಆ ಯುವಕ ಬದುಕುಳಿಯುವ ಸಾಧ್ಯತೆಗಳಿತ್ತು. ಕಾರು ನೀರಿನ ಆಳಕ್ಕಿಳಿಯುತ್ತಿದ್ದಂತೆಯೇ ಯುವಕ ಕಾರಿನ ಮೇಲೆ ಏರಿ ನಿಂತು ಸಹಾಯಕ್ಕಾಗಿ ಕೂಗಿದ್ದಾರೆ. ಮಧ್ಯೆ ತನ್ನ ತಂದೆಗೆ ಕರೆ ಮಾಡಿ ಸಹಾಯ ಮಾಡುವಂತೆ ಮನವಿ ಮಾಡಿದ್ದಾರೆ. ಮೆಹ್ರಾ ಅವರು ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ಸಹಾಯಕ್ಕಾಗಿ ಕೂಗುತ್ತಲೇ ಇದ್ದರು. ಈ ನಡುವೆ ಕಾರು ನಿಧಾನವಾಗಿ ನೀರಿನಲ್ಲಿ ಮುಳುಗಿತು. ಯುವಕನೂ ನೀರು ಪಾಲಾದ. ಅಪಘಾತ ಸಂಭವಿಸಿದ ಬಳಿಕ ಸುಮಾರು ಒಂದೂವರೆ ಗಂಟೆಗಳ ಕಾಲ ಯುವಕ ಸಹಾಯಕ್ಕಾಗಿ ಮೊರೆಯಿಟ್ಟಿದ್ದ. ಇಷ್ಟು ಸಮಯಾವಕಾಶವಿದ್ದರೂ ಆತನನ್ನು ರಕ್ಷಿಸಲು ನಮ್ಮ ವ್ಯವಸ್ಥೆ ಯಾಕೆ ವಿಫಲವಾಯಿತು ಎನ್ನುವುದು ಇದೀಗ ಚರ್ಚೆಯ ವಿಷಯವಾಗಿದೆ. ಕಾರು ಮುಳುಗುವವರೆಗೆ ಅಂದರೆ ಸುಮಾರು 90 ನಿಮಿಷಗಳ ಕಾಲ ಮೆಹ್ರಾ ಅವರು ಕಾರಿನ ಮೇಲೆಯೇ ಇದ್ದರು. ಸಹಾಯ ಯಾಚಿಸುತ್ತಿದ್ದರು. ಕಾರು ತಡೆ ಗೋಡೆಗೆ ಢಿಕ್ಕಿ ಹೊಡೆದು ಬಳಿಕ ನೀರಿನ ಹೊಂಡಕ್ಕೆ ಬಿದ್ದಿದೆ. ಇದನ್ನು ಅಪಘಾತ ಎಂದು ಕರೆಯಬಹುದು. ಆದರೆ ಆ ಬಳಿಕ ನಡೆದಿರುವುದು ಅಪಘಾತದ ಭಾಗವಾಗಿರಲಿಲ್ಲ. ಆತ ಮೃತಪಟ್ಟಿರುವುದು ಅವಘಡದಿಂದಲ್ಲ, ಬದಲಿಗೆ ವ್ಯವಸ್ಥೆಯ ಬೇಜವಾಬ್ದಾರಿಯಿಂದ. ಯಾವುದೋ ದಟ್ಟಾರಣ್ಯದ ಮಧ್ಯೆ ನಡೆದ ದುರಂತ ಇದಾಗಿರಲಿಲ್ಲ.

> ವಿಪರ್ಯಾಸವೆಂದರೆ ಅದಾಗಲೇ ಅಲ್ಲಿ ಜನರು ನೆರೆದಿದ್ದರು. ಆದರೆ ಯಾರೂ ನೆರವಿಗೆ ಧಾವಿಸಲಿಲ್ಲ. ಹಲವರು ಘಟನೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದರು. ಸುಮಾರು 2:30ರ ಹೊತ್ತಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ರಾಜ್ಯ ವಿಪತ್ತು ನಿರ್ವಹಣಾ ಪಡೆ, ಅಗ್ನಿಶಾಮಕ ದಳ ಹಾಗೂ ಪೊಲೀಸರು ಆಗಮಿಸಿದರಾದರೂ ತಕ್ಷಣ ಕಾರ್ಯಾಚರಣೆ ನಡೆಸಲು ಹಿಂಜರಿದರು. ಆರುಗಂಟೆಗಳ ಬಳಿಕ ಯುವಕನ ಮೃತದೇಹವನ್ನು ಮೇಲೆತ್ತುವಲ್ಲಿ ತಂಡವು ಯಶಸ್ವಿಯಾಯಿತು. ಅಪಘಾತಕ್ಕೆ ದಟ್ಟ ಮಂಜು ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.





ರಕ್ಷಣಾ ಕಾರ್ಯಾಚರಣೆಯು ತರಾತುರಿಯಲ್ಲಿ ನಡೆದಿದ್ದರೆ ಯುವಕನ ಪ್ರಾಣವನ್ನು ಉಳಿಸುವುದಕ್ಕೆ ಅವಕಾಶವಿತ್ತು ಅವಘಡ ನಡೆದ ಸ್ಥಳಕ್ಕೆ ಆಗಮಿಸಿದ ರಕ್ಷಣಾ ಸಿಬ್ಬಂದಿ ಸುಮಾರು ಒಂದೂವರೆ ಗಂಟೆಯ ಕಾಲ ಮೀನಾಮೇಷ ಎಣಿಸುತ್ತಿದ್ದರು ಎಂದು ಸ್ಥಳೀಯರು ಆರೋಪಿಸಿದ್ದಾರೆ.

ವಿಪರ್ಯಾಸವೆಂದರೆ, ಸೇರಿದ ಜನರು ಕೂಡ ಸಂತ್ರಸ್ತನ ನೆರವಿಗೆ ಮುಂದಾಗುವ ಬದಲು ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡುತ್ತಿದ್ದರು. ನೆರೆದ ಮಂದಿಯಲ್ಲಿ ಒಂದಿಷ್ಟು ಮಾನವೀಯತೆ ಜೀವಂತವಾಗಿದ್ದಿದ್ದರೆ ಯುವಕನೂ ಜೀವಂತವಾಗಿರುತ್ತಿದ್ದ. ದುರಂತ ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದ್ದಂತೆಯೇ ಮತ್ತಾರ ಕಾರು ಉರುಳಿ ಬಿದ್ದ ಆಳವಾದ ಹೊಂಡದ ಸ್ಥಳದ ಮಾಲಕತ್ವ ಹೊಂದಿದ್ದ ಎರಡು ಕಟ್ಟಡ ಸಂಸ್ಥೆಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ತನಿಖೆಗೆ ಮೂವರು ಸದಸ್ಯರನ್ನು ಒಳಗೊಂಡ ಸಿಟ್ ತಂಡವನ್ನು ನೇಮಕ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಮೂವರನ್ನು ಬಂಧಿಸಲಾಗಿದೆ.

ಆದರೆ, ಸಂತ್ರಸ್ತನನ್ನು ಬದುಕಿಸಲು ಸಮಯಾವಕಾಶವಿದ್ದರೂ ಅದರಲ್ಲಿ ವಿಫಲರಾಗಿರುವ ರಕ್ಷಣಾ ದಳಗಳ ವಿರುದ್ಧ ಇನ್ನೂ ದೂರು ದಾಖಲಾಗಿಲ್ಲ. ಎಸ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ತಲುಪಿದಾಗ ಕಾರು ಇನ್ನೂ ಪೂರ್ಣವಾಗಿ ಹೊಂಡದಲ್ಲಿ ಮುಳುಗಿರಲಿಲ್ಲ. ಅದರೆ ಹೇಗೆ ರಕ್ಷಿಸುವುದು ಎನ್ನುವಗೊಂದಲದಲ್ಲೇ ಸಿಬ್ಬಂದಿ ಕಾಲ ಕಳೆದಿದ್ದರು. ಈ ಹೊತ್ತಿಗೆ ಅಲ್ಲಿಗೆ ಬಂದಿದ್ದ ಒಬ್ಬಗಿಗ್ ಏಜೆಂಟ್ ಸೊಂಟಕ್ಕೆ ಹಗ್ಗ ಕಟ್ಟಿ ನೀರಿಗಿಳಿಯಬೇಕಾಯಿತು. ನೀರು ತುಂಬಾತಣ್ಣಗಿದೆ ಮಾತ್ರವಲ್ಲ ಹೊಂಡದೊಳಗೆ ಕಟ್ಟಡ ನಿರ್ಮಾಣಕ್ಕೆ ಬಳಸಿದ ಕಬ್ಬಿಣದ ರಾಡ್‌ಗಳಿವೆ ಎಂಬ ಕಾರಣದಿಂದ ಸಿಬ್ಬಂದಿ ನೀರಿಗಿಳಿಯಲು ಹಿಂಜರಿದಿದ್ದರು. ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ನಡೆದಿದ್ದರೆ ಸಂತ್ರಸ್ತ ಬದುಕಿ ಉಳಿಯುತ್ತಿದ್ದ ಎನ್ನುವುದು ಸ್ಥಳೀಯರ ಅಭಿಪ್ರಾಯ. ರಕ್ಷಣಾ ಕಾರ್ಯಕ್ಕೆ ಬೇಕಾಗಿರುವ ಯಾವುದೇ ಅತ್ಯಾಧುನಿಕ ಉಪಕರಣಗಳು ಸಿಬ್ಬಂದಿಯ ಬಳಿ ಇಲ್ಲದೇ ಇರುವುದು ಈ ಸಂದರ್ಭದಲ್ಲಿ ಬೆಳಕಿಗೆ ಬಂದಿದೆ. ಈಜು ಬರದೇ ಇರುವುದೂ ಅವರು ನೀರಿಗಿಳಿಯದೇ ಇರಲು ಇನ್ನೊಂದು ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸಂತ್ರಸ್ತ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವುದರಿಂದ ಈ ದುರಂತ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ಸಾಮಾನ್ಯ ಕೂಲಿಕಾರ್ಮಿಕನಾಗಿದ್ದರೆ ಆತನ ಕೂಗು ಆ ಹೊಂಡದೊಳಗೇ ಹೂತು ಹೋಗಿ ಬಿಡುತ್ತಿತ್ತು. ದುರಂತ ಸಂಭವಿಸಿದ ಬಳಿಕವಾದರೂ ಇಲ್ಲಿ ಹೊಂಡದ ಮಾಲಕರ ವಿರುದ್ಧ ದೂರು ದಾಖಲಾಗಿ ಅವರ ಬಂಧನವಾಯಿತು.

# ಪರ್ಫ್ಯೂಮ್ ಕುತ್ತಿಗೆಗೆ ಹಚ್ಚಿದ್ರೆ ಥೈರಾಯ್ಡ್ ಸಮಸ್ಯೆ ಕಾಡುತ್ತಂತೆ ಎಚ್ಚರ!



ಬಹಳಷ್ಟು ಮಂದಿ ಸುಗಂಧ ದ್ರವ್ಯವನ್ನು ಬಳಸುವಾಗ ಅದನ್ನು ಕುತ್ತಿಗೆಗೆ ಹಾಗೂ ಮಣಿಗಂಟಿನ ಜಾಗಕ್ಕೂ ಹಚ್ಚುತ್ತಾರೆ. ಇದರಿಂದ ಪರ್ಫ್ಯೂಮ್ ನೇರವಾಗಿ ನಮ್ಮ ಚರ್ಮದ ಮೇಲೆ ಪರಿಣಾಮ ಬೀರುತ್ತದೆ. ಇಂದಿನ ಹೆಚ್ಚಿನ ಸುಗಂಧ ದ್ರವ್ಯಗಳನ್ನು ಹೂವುಗಳಿಂದಲ್ಲ, ಬದಲಾಗಿ ರಾಸಾಯನಿಕ ಸೂತ್ರಗಳಿಂದ ತಯಾರಿಸಲಾಗುತ್ತದೆ. ಬಳಸಲಾಗುವ ಅನೇಕ ಸುಗಂಧ ದ್ರವ್ಯಗಳು ಮತ್ತು ಡಿಯೋಡರೆಂಟ್‌ಗಳು ಸುಗಂಧವನ್ನು ಒದಗಿಸುವುದಲ್ಲದೆ ದೇಹದ ಹಾರ್ಮೋನುಗಳ ವ್ಯವಸ್ಥೆಯಲ್ಲಿಯೂ ಹಸ್ತಕ್ಷೇಪ ಮಾಡುವ ರಾಸಾಯನಿಕಗಳನ್ನು ಹೊಂದಿರುತ್ತವೆ.

ವೈದ್ಯಕೀಯ ವಿಜ್ಞಾನವು ಈ ಅಂತಃಸ್ರಾವಕವನ್ನು



ಅಡ್ಡಿಪಡಿಸುವ ರಾಸಾಯನಿಕಗಳು ಎಂದು ಕರೆಯುತ್ತದೆ, ಅಂದರೆ ಹಾರ್ಮೋನುಗಳ ಸಮತೋಲನವನ್ನು ಅಡ್ಡಿಪಡಿಸುವ ರಾಸಾಯನಿಕಗಳು. ಬಟ್ಟೆಗೆ ಕಡಿಮೆ ಪ್ರಮಾಣದ ಸುಗಂಧ ದ್ರವ್ಯವನ್ನು ಬಳಸುವುದನ್ನು ತುಲನಾತ್ಮಕವಾಗಿ ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ.

**ಚರ್ಮಕ್ಕೆ ನೇರವಾಗಿ ಬಳಸಬಾರದು:** ಆರೋಗ್ಯ ತಜ್ಞರು ಸುಗಂಧ ದ್ರವ್ಯವನ್ನು ಬಳಸಲು ಶಿಫಾರಸು ಮಾಡುತ್ತಾರೆ, ಆದರೆ ಅದನ್ನು ನೇರವಾಗಿ ಚರ್ಮದ ಮೇಲೆ, ವಿಶೇಷವಾಗಿ ಕುತ್ತಿಗೆಯ ಬಳಿ ಬಳಸಬಾರದು ಎನ್ನುತ್ತಾರೆ. ವೈದ್ಯರು ಇದನ್ನು ವಿಶೇಷವಾಗಿ ಥೈರಾಯ್ಡ್ ರೋಗಿಗಳಿಗೆ ಕಾಳಜಿ ವಹಿಸಬೇಕು ಎಂದು ಪರಿಗಣಿಸುತ್ತಾರೆ. ಆದ್ದರಿಂದ, ಸುಗಂಧವನ್ನು ಬುದ್ಧಿವಂತಿಕೆಯಿಂದ ಬಳಸುವುದು ಮುಖ್ಯ. ಸುಗಂಧ-ಮುಕ್ತ ಸೌಂದರ್ಯವರ್ಧಕ ಉತ್ಪನ್ನಗಳು ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ. ನೀವು ಆರೋಗ್ಯಕರ ಆಯ್ಕೆಯನ್ನು ಮಾಡುವುದು ಉತ್ತಮ.

**ಥೈರಾಯ್ಡ್ ಸಂಬಂಧಿತ ಸಮಸ್ಯೆಗೆ ಕಾರಣವಾಗಬಲ್ಲದು:**

### ಸುರಕ್ಷಿತ ಪರ್ಯಾಯಗಳು

- ಚರ್ಮದ ಮೇಲೆ ಸುಗಂಧ ದ್ರವ್ಯವನ್ನು ಸಿಂಪಡಿಸುವ ಬದಲು ಬಟ್ಟೆಗಳ ಮೇಲೆ ಸಿಂಪಡಿಸಿ.
- ನೈಸರ್ಗಿಕ ಅಥವಾ ಸಾರಭೂತ ತೈಲ ಆಧಾರಿತ ಸುಗಂಧ ದ್ರವ್ಯಗಳನ್ನು ಬಳಸಿ.
- ಕುತ್ತಿಗೆ ಪ್ರದೇಶದ ಬಳಿ ಸುಗಂಧ ದ್ರವ್ಯವನ್ನು ಹಚ್ಚುವುದನ್ನು ತಪ್ಪಿಸಿ.

ಅನೇಕ ಸಾಂಪ್ರದಾಯಿಕ ಸುಗಂಧ ದ್ರವ್ಯಗಳು ಥಾಲೇಟ್‌ಗಳು ಮತ್ತು ಪ್ಯಾರಾಬೆನ್‌ಗಳಂತಹ ರಾಸಾಯನಿಕಗಳನ್ನು ಹೊಂದಿರುತ್ತವೆ. ನಿಮ್ಮ ಕುತ್ತಿಗೆಯ ಚರ್ಮವು ತೆಳ್ಳಗಿರುತ್ತದೆ ಮತ್ತು ಹೆಚ್ಚು ಹೀರಿಕೊಳ್ಳುತ್ತದೆ, ಮತ್ತು ಈ ರಾಸಾಯನಿಕಗಳು ಸುಲಭವಾಗಿ ಭೇದಿಸಬಲ್ಲವು, ಥೈರಾಯ್ಡ್ ಗ್ರಂಥಿಗೆ ಅಡ್ಡಿಪಡಿಸುವ ಮತ್ತು ಹಾರ್ಮೋನುಗಳ ಅಸಮತೋಲನಕ್ಕೆ ಕಾರಣವಾಗುತ್ತವೆ.

ಇಂದು ಥೈರಾಯ್ಡ್ ಸಂಬಂಧಿತ ಸಮಸ್ಯೆಗಳು ಹೆಚ್ಚುತ್ತಿರುವುದಕ್ಕೆ ಇದು ಒಂದು ಕಾರಣವಾಗಿರಬಹುದು.

**ಥೈರಾಯ್ಡ್ ರೋಗಿಗಳಲ್ಲಿ ಕಾಣಿಸಿಕೊಳ್ಳುವ ಲಕ್ಷಣಗಳು:** ವಿಶ್ವಾದ್ಯಂತ 200 ಮಿಲಿಯನ್‌ಗಿಂತಲೂ ಹೆಚ್ಚು ಜನರು ಮತ್ತು ಭಾರತದಲ್ಲಿ 42 ಮಿಲಿಯನ್‌ಗಿಂತಲೂ ಹೆಚ್ಚು ಜನರು ಥೈರಾಯ್ಡ್ ಕಾಯಿಲೆಯಿಂದ ಬಳಲುತ್ತಿದ್ದಾರೆ ಹಾಗೂ ಇದು 10ರಲ್ಲಿ 1 ಜನರ ಮೇಲೆ ಪರಿಣಾಮ ಬೀರುತ್ತದೆ. ಥೈರಾಯ್ಡ್ ಲಕ್ಷಣಗಳಲ್ಲಿ ಆಯಾಸ, ಆತಂಕ, ಕಿರಿಕಿರಿ, ಕೈ ನಡುಕ, ನಿದ್ರೆಯ ಕೊರತೆ, ಕೂದಲು ಉದುರುವಿಕೆ ಮತ್ತು ಸ್ನಾಯು ನೋವು ಸೇರಿವೆ.

**ಥೈರಾಯ್ಡ್ ನಿವಾರಣೆಗೆ ಮನೆಮದ್ದು:** ಥೈರಾಯ್ಡ್‌ಗಾಗಿ, ನೀವು ಸೂರ್ಯ ನಮಸ್ಕಾರ, ಪವನಮುಕ್ತಾಸನ, ಸರ್ವಾಂಗಾಸನ, ಹಲಾಸನ, ಉಷ್ಟ್ರಾಸನ, ಮತ್ಸ್ಯಾಸನ ಮತ್ತು ಭುಜಂಗಾಸನದಂತಹ ಯೋಗ ಆಸನಗಳನ್ನು ಅಭ್ಯಾಸ ಮಾಡಬೇಕು. ಸಾರಜನಕವು ಪ್ರಯೋಜನಕಾರಿಯಾಗಿದೆ, ತುಳಸಿ ಮತ್ತು ಅಲೋವೆರಾ ರಸವನ್ನು ಸೇವಿಸಿ, ಪ್ರತಿದಿನ 1 ಟೀಚಮಚ ತ್ರಿಫಲವನ್ನು ತೆಗೆದುಕೊಳ್ಳಿ, ರಾತ್ರಿಯಲ್ಲಿ ಬೆಚ್ಚಗಿನ ಹಾಲಿನೊಂದಿಗೆ ಅಶ್ವಗಂಧವನ್ನು ಕುಡಿಯಿರಿ ಮತ್ತು ನೀರಿನಲ್ಲಿ ಪುಡಿಮಾಡಿದ ಕೊತ್ತಂಬರಿ ಬೀಜಗಳನ್ನು ಸೇವಿಸಿ.

# 1 ತಿಂಗಳ ಕಾಲ ಇಟ್ಟು ಸವಿಯಬಹುದು ಈ ಈರುಳ್ಳಿ ಚಟ್ನಿ



### ಈರುಳ್ಳಿ ಚಟ್ನಿ ಮಾಡಲು ಬೇಕಾಗುವ ವಸ್ತುಗಳು

- ಈರುಳ್ಳಿ
- ಬೆಳ್ಳುಳ್ಳಿ
- ಸಾಸಿವೆ
- ಜೀರಿಗೆ
- ಮೆಂತ್ಯ
- ದನಿಯಾ ಕಾಳು
- ಕರಿಬೇವು
- ಖಾರದ ಪುಡಿ
- ಉಪ್ಪು
- ಎಣ್ಣೆ
- ಹುಣಸೆ ಹುಳಿ
- ಇಂಗು
- ಒಣ ಮೆಣಸು

ಬೆಳಗಿನ ತಿಂಡಿ ಹಾಗೆ ಊಟದ ಸಮಯಕ್ಕೆ ಸೈಡ್ ಡಿಷ್ ಆಗಿ ನೀವು ಹಲವು ರೀತಿ ಖಾದ್ಯಗಳ ಸವಿದಿರುತ್ತೀರಿ. ಅದ್ರಲ್ಲೂ ಊಟಕ್ಕೆ ರುಚಿ ತರುವಂತಹ ಚಟ್ನಿ, ಪಲ್ಯ, ಸೇರಿ ಹಲವು ರೀತಿ ಖಾದ್ಯಗಳ ಮಾಡಿರುತ್ತೀರಿ. ಹೀಗೆ ಊಟ ಹಾಗೆ ತಿಂಡಿಗೆ ಸಾಂಬಾರ್ ಜೊತೆಗೆ ಒಂದಿಷ್ಟು ಖಾದ್ಯ ಇದ್ದೇ ಇರಲಿದೆ. ಹಾಗೆ ಬೆಳಗ್ಗೆ ತಿಂಡಿಗೆ ಮಾಡುವ ಚಟ್ನಿ ಮಧ್ಯಾಹ್ನದ ಊಟಕ್ಕೂ ಸವಿಯಲು ಬಂದರೆ ಅದ್ಭುತವಾಗಿರಲಿದೆ. ಹೀಗಾಗಿ ಹಲವರು ಬೆಳಗ್ಗೆ ತಿಂಡಿಗೆ ಮಾಡುವ ಚಟ್ನಿಯುವ ಎಲ್ಲಾ ಖಾದ್ಯದೊಂದಿಗೆ ಹಾಗೆ ಊಟದೊಂದಿಗೂ ರುಚಿ ಬರುವಂತ ಆಯ್ಕೆಯನ್ನೇ ಮಾಡುತ್ತಾರೆ. ಅದ್ರಲ್ಲೂ ಒಂದು ಸಲ ಮಾಡಿದ ತಿಂಡಿ ಹಲವು ದಿನಗಳ ಕಾಲ ಸವಿಯಲು ಸಿಗುವಂತಿದ್ದರೆ ಸಮಯವೂ ಉಳಿಸಬಹುದು. ಹೀಗಾಗಿ ನಾವಿಂದು ಒಂದು ತಿಂಗಳ ಕಾಲ ಇಟ್ಟು ಸವಿಯಬಹುದಾದ ಹಾಗೆ ಎಲ್ಲರಿಗೂ ಇಷ್ಟವಾಗುವಂತಹ ರುಚಿ ರುಚಿಯ ಈರುಳ್ಳಿ ಚಟ್ನಿ ಮಾಡುವ ಕುರಿತಾಗಿ ತಿಳಿದುಕೊಳ್ಳೋಣ. ಈ ಈರುಳ್ಳಿ ಚಟ್ನಿಯೂ ತಿಂಡಿಯೊಂದಿಗೆ ಹಾಗೆ ಊಟದೊಂದಿಗೂ ಬಹಳ ರುಚಿ ನೀಡಲಿದೆ. ಈರುಳ್ಳಿ ಬಳಸಿ ಮಾಡುವ ಈ ಚಟ್ನಿ ಬಹಳ ರುಚಿ ನೀಡಲಿದೆ. ಯಾವುದೇ ತಿಂಡಿ ಇದ್ದರೂ ಈ ಚಟ್ನಿ ಅದ್ಭತ ರುಚಿ ತರಲಿದೆ. ಹಾಗೆ ಊಟದೊಂದಿಗೆ ಕೂಡ ಇದನ್ನು ಸವಿಯಬಹುದು. ಇದರ ವಿಶೇಷ ಎಂದರೆ ನೀವು ಬಹಳ ಕಾಲ ಇದನ್ನು ಇಟ್ಟು ಸವಿಯಬಹುದು, ಹಾಗಾದ್ರೆ ಈ ಈರುಳ್ಳಿ ಚಟ್ನಿ ಮಾಡುವುದು ಹೇಗೆ? ಈ ಚಟ್ನ ಮಾಡಲು ಯಾವೆಲ್ಲಾ ವಸ್ತುಗಳು ಬೇಕು? ಎಷ್ಟು ಸಮಯ ಹಿಡಿಯಲಿದೆ ಎಂಬೆಲ್ಲಾ ಮಾಹಿತಿ ಇಲ್ಲಿದೆ.

**ಈರುಳ್ಳಿ ಚಟ್ನಿ ಮಾಡುವ ವಿಧಾನವೇನು?:** ಮೊದಲು ಒಲೆ ಮೇಲೆ ಒಂದು ಬಾಣಲೆ ಇಟ್ಟು ಅದಕ್ಕೆ ದನಿಯಾ ಕಾಳು, ಜೀರಿಗೆ, ಸಾಸಿವೆ, ಮೆಂತ್ಯ ಹಾಕಿಕೊಂಡು ಸಣ್ಣ ಉರಿಯಲ್ಲಿ ಹುರಿದುಕೊಳ್ಳಬೇಕು. ಹುರಿದ ಬಳಿಕ ಇದನ್ನು ತೆಗೆದು ಒಂದು ಪಾತ್ರೆಯಲ್ಲಿ ಹಾಕಿಟ್ಟುಕೊಳ್ಳಿ. ಈಗ ಇದೇ ಬಾಣಲೆಗೆ ಎಣ್ಣೆ ಹಾಕಿಕೊಂಡು ಸ್ಲೈಸ್ ಮಾಡಿದ ಈರುಳ್ಳಿಗಳನ್ನು ಹಾಕಿಕೊಳ್ಳಿ. 6ರಿಂದ 7 ಈರುಳ್ಳಿಗಳನ್ನು ಬಳಸಿಕೊಳ್ಳಿ. 3 ನಿಮಿಷದ ಬಳಿಕ ಹುಣಸೆ ಹುಳಿ, ಉಪ್ಪು ಹಾಕಿಕೊಂಡು ಹುರಿದುಕೊಳ್ಳಬೇಕು. ಕೆಂಪು ಬಣ್ಣಕ್ಕೆ ಬರುವವರೆಗೂ ಹುರಿದುಕೊಳ್ಳಿ. ಅನಂತರ ಒಲೆ ಆಫ್ ಮಾಡಿಕೊಂಡು ತಣ್ಣಗಾಗಲು ಬಿಡಿ. ಈಗ ಒಂದು ಮಿಕ್ಸಿ ಜಾರ್ ತೆಗೆದುಕೊಂಡು ಅದಕ್ಕೆ ಮೊದಲು ಹುರಿದುಕೊಂಡಿದ್ದ ದನಿಯಾ, ಸಾಸಿವೆ ಜೀರಿಗೆ ಮೆಂತ್ಯಗಳ ಹಾಕಿ, ಖಾರದ ಪುಡಿ ಸಹ ಹಾಕಿ. ಈಗ ನುಣ್ಣಗೆ ಪುಡಿ ಮಾಡಿ ಒಂದು ಬೌಲ್‌ಗೆ ಹಾಕಿಕೊಳ್ಳಿ. ಈಗ ಅದೇ ಜಾರ್‌ಗೆ ಹುರಿದುಕೊಂಡ ಈರುಳ್ಳಿ, ಹುಣಸೆ ಹುಳಿ ಸ್ವಲ್ಪ ನೀರು ಹಾಕಿ ಗಟ್ಟಿಯಾಗಿಯೇ ರುಬ್ಬಿಕೊಳ್ಳಿ. ಈಗ ಒಲೆ ಮೇಲೆ ಬಾಣಲೆ ಇಟ್ಟು ಅದಕ್ಕೆ ಎಣ್ಣೆ ಹಾಕಿಕೊಂಡು ಸಿಪ್ಪೆ ಬಿಡಿಸಿದ ಬೆಳ್ಳುಳ್ಳಿ ಹುರಿದುಕೊಂಡು ಬಳಿಕ ಇದಕ್ಕೆ ಒಣ ಮೆಣಸು, ಕರಿಬೇವು, ಇಂಗು, ಹಾಕಿಕೊಂಡು ಮಿಕ್ಸ್ ಮಾಡಿಕೊಳ್ಳಿ. ಈಗ ರುಬ್ಬಿಕೊಂಡಿದ್ದ ಈರುಳ್ಳಿ ಪೇಸ್ಟ್ ಅನ್ನು ಸೇರಿಸಿಕೊಂಡು ಹುರಿದುಕೊಳ್ಳಿ. 2 ನಿಮಿಷ ಬಿಟ್ಟು ಮೊದಲು ರುಬ್ಬಿದ್ದ ಮಸಾಲೆ ಪುಡಿಗಳನ್ನು ಇದಕ್ಕೆ ಹಾಕಿಕೊಳ್ಳಬೇಕು.

ಚೆನ್ನಾಗಿ ಮಿಕ್ಸ್ ಮಾಡುತ್ತಾ ಇರಬೇಕು. ಇದು ಗಟ್ಟಿಯಾಗಿ ಇರಲಿ. ಆಗಾಗ ಮಿಕ್ಸ್ ಮಾಡುತ್ತಾ ಇರಿ. ಇದು ಎಣ್ಣೆ ಬಿಟ್ಟುಕೊಳ್ಳಲು ಆರಂಭಿಸಲಿದೆ. ಹಾಗೆ ಉಪ್ಪು ಸೇರಿಸಿಕೊಂಡು ಮಿಶ್ರಣ ಮಾಡಿ ಕುದಿಬರುತ್ತಾ, ಮಿಕ್ಸ್ ಮಾಡುತ್ತಾ ಇರಿ. ಇದು 15 ರಿಂದ 20 ನಿಮಿಷ ಫ್ರೈ ಮಾಡಿಕೊಳ್ಳಬೇಕು. ಇದು ಕೆಂಪು ಬಣ್ಣಕ್ಕೆ ತಿರುಗಲಿದೆ. ಇಷ್ಟಾದರೆ ಎಲ್ಲರಿಗೂ ಇಷ್ಟವಾಗುವ ಚಟ್ನಿ ಸಿದ್ದವಾಗುತ್ತೆ.

# ಈಸಿಯಾಗಿ ದೇಹದ ತೂಕ ಇಳಿಸಿಕೊಳ್ಳಬೇಕು

ಬಾದಾಮಿ ತೂಕ ಇಳಿಸಿಕೊಳ್ಳಲು, ದೇಹದ ಕೊಬ್ಬನ್ನು ಕರಗಿಸುವಲ್ಲಿ ತುಂಬಾನೇ ಪ್ರಯೋಜನಕಾರಿಯಾಗಿದೆ. ಪ್ರಮುಖವಾಗಿ ಈ ಪುಟ್ಟ ಬೀಜಗಳಲ್ಲಿ ಕಂಡುಬರುವ ಪ್ರೋಟೀನ್, ನಾರಿನಾಂಶ, ವಿಟಮಿನ್ ಇ ಮತ್ತು ಮೆಗ್ನೀಸಿಯಮ್ ಅಂಶ ಸಮೃದ್ಧವಾಗಿವೆ. ಬಾದಾಮಿಯನ್ನು ಸರಿಯಾದ ಪ್ರಮಾಣದಲ್ಲಿ ಮತ್ತು ಸರಿಯಾದ ಸಮಯದಲ್ಲಿ ತಿನ್ನುವುದರಿಂದ ಹಸಿವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಮತ್ತು ಅತಿಯಾಗಿ ತಿನ್ನುವುದನ್ನು ತಡೆಯುತ್ತದೆ.

ಆರೋಗ್ಯ ಚೆನ್ನಾಗಿರಬೇಕು, ದೇಹದ ತೂಕ ಸಮತೋಲನದಲ್ಲಿ ಇರಬೇಕು ಹಾಗೂ ವಯಸ್ಸಾಗುತ್ತಾ ಹೋದರೂ ಕೂಡ ದೇಹದ ಆರೋಗ್ಯ ಕಾಪಾಡಿ ಕೊಳ್ಳಬೇಕು ಎಂದರೆ ನಿಸರ್ಗದತ್ತ ವಾಗಿ ಸಿಗುವಂತಹ ಆಹಾರ ಪದಾರ್ಥಗಳು, ಹಸಿರೆಲೆ ತರಕಾರಿಗಳು, ಹಣ್ಣುಗಳು, ಬೀಜಗಳು, ಡ್ರೈ ಫ್ರೂಟ್ಸ್‌ಗಳು, ಇವೆಲ್ಲಾವನ್ನೂ ಕೂಡ ಸಮತೋಲನದ ಆಹಾರಪದ್ಧತಿಯಲ್ಲಿ ಸೇರಿಸಿ ಕೊಳ್ಳುವುದರಿಂದ, ಆಗ ಖಂಡಿತವಾಗಿಯೂ ಆರೋಗ್ಯ ಕಾಪಾಡಿಕೊಳ್ಳಬಹುದು. ಅದರಲ್ಲೂ ದೇಹದ ತೂಕ ಹೆಚ್ಚಿಸಿಕೊಂಡು, ಹೇಗಾದರೂ ಮಾಡಿ ಇಳಿಸಿಕೊಳ್ಳುವವರಿಗೆ ಕೆಲವೊಂದು ಬಗೆಯ ಡ್ರೈ ಫ್ರೂಟ್ಸ್ ತುಂಬಾನೇ ಉಪಯೋಗಕ್ಕೆ ಬರುತ್ತದೆ. ಇದರಲ್ಲಿ ಬಾದಾಮಿ ಕೂಡ ಒಂದು.

**ತೂಕ ಇಳಿಸಲು ಬಾದಾಮಿ ಬೀಜಗಳು ನೆರವಾಗುತ್ತದೆಯೇ:** ತೂಕ ಇಳಿಸಲು ಬಾದಾಮಿ ಬೀಜಗಳು ತುಂಬಾನೇ ಒಳ್ಳೆಯದು ಎನ್ನಲಾಗುತ್ತದೆ. ಬೆಲೆಯಲ್ಲಿ ದುಬಾರಿ ಎನ್ನುವ ಒಂದೇ ಕಾರಣ ಬಿಟ್ಟರೆ, ಆರೋಗ್ಯದ ವಿಚಾರದಲ್ಲಿ ಈ ಬೀಜಗಳು ಸದಾ ಮುಂದೆ ನಿಲ್ಲುತ್ತದೆ!

ಇದೇ ಕಾರಣಕ್ಕೆ ಇದನ್ನು ಸೂಪರ್ ಫುಡ್ ಎನ್ನಲಾಗುತ್ತದೆ. ಸರಿಯಾದ ಪ್ರಮಾಣದಲ್ಲಿ ಮತ್ತು ಸರಿಯಾದ ಸಮಯದಲ್ಲಿ ಬಾದಾಮಿ ತಿನ್ನುವುದು ತೂಕ ಇಳಿಸಿ ಕೊಳ್ಳಲು ಸಹಾಯ ಮಾಡುತ್ತದೆ. ಪ್ರಮುಖವಾಗಿ ಈ ಪುಟ್ಟ ಬೀಜಗಳಲ್ಲಿ ಆರೋಗ್ಯಕಾರಿ ಕೊಬ್ಬಿನಾಂಶ ಮತ್ತು ಪ್ರೋಟೀನ್ ಅಂಶ ಹೇರಳವಾಗಿ ಕಂಡುಬರುವುದರಿಂದ, ದೇಹದ ತೂಕ ಇಳಿಸಿಕೊಳ್ಳುವವರಿಗೆ ತುಂಬಾನೇ ನೆರವಿಗೆ ಬರುತ್ತದೆ. ಆದರೆ ಗಮನಿಸಬೇಕಾದ ಸಂಗತಿ ಏನೆಂದರೆ ಕೇವಲ ಬಾದಾಮಿ ತಿನ್ನುವುದರಿಂದ ತೂಕ ಇಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಮೊದಲಿಗೆ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಸಮತೋಲಿತ ಆಹಾರ ಪದ್ಧತಿಯಲ್ಲಿ ಬಾದಾಮಿಯನ್ನು ಸೇರಿಸುವುದರಿಂದ ತೂಕ ಇಳಿಸಿಕೊಳ್ಳಲು ಸಹಾಯವಾಗುತ್ತದೆ.

**ತೂಕ ಇಳಿಸಿಕೊಳ್ಳಲು ಬಾದಾಮಿ ಹೇಗೆ ಸಹಾಯ ಮಾಡುತ್ತದೆ:** ಬಾದಾಮಿಯಲ್ಲಿ ಪ್ರೋಟೀನ್, ಫೈಬರ್, ಆರೋಗ್ಯಕರ ಕೊಬ್ಬುಗಳು, ವಿಟಮಿನ್ ಇ ಮತ್ತು ಮೆಗ್ನೀಸಿಯಮ್ ಸಮೃದ್ಧವಾಗಿವೆ. ಅವುಗಳ ಫೈಬರ್ ಮತ್ತು ಪ್ರೋಟೀನ್ ನಿಮ್ಮನ್ನು ಹೆಚ್ಚು ಸಮಯದವರೆಗೆ ಹೊಟ್ಟೆ ತುಂಬಿರುವಂತೆ ಮಾಡಲು ಸಹಾಯ ಮಾಡುತ್ತದೆ ನಿಮಗೆ ಹೊಟ್ಟೆ ತುಂಬಿದ ಅನುಭವವನ್ನು ನೀಡುತ್ತದೆ ಮತ್ತು ಅತಿಯಾಗಿ ತಿನ್ನುವುದನ್ನು ತಡೆಯುತ್ತದೆ. ಪ್ರಮುಖವಾಗಿ ಈ ಪುಟ್ಟ ಬೀಜಗಳಲ್ಲಿ ಕ್ಯಾಲೋರಿ ಅಂಶ ತುಂಬಾನೇ ಕಡಿಮೆ ಪ್ರಮಾಣದಲ್ಲಿ ಕಂಡುಬರುವುದರಿಂದ ತೂಕ ಇಳಿಸಿಕೊಳ್ಳಲು ನೆರವಿಗೆ ಬರುತ್ತದೆ ದಿನಕ್ಕೆ ಎಷ್ಟು ಬಾದಾಮಿ ತಿನ್ನುವುದು ಪ್ರಯೋಜನಕಾರಿ ಆರೋಗ್ಯ ತಜ್ಞರ ಪ್ರಕಾರ ಹಾಗೂ ಒಬ್ಬ ಸಾಮಾನ್ಯ ವ್ಯಕ್ತಿಗೆ 28 ಗ್ರಾಂ ಬಾದಾಮಿ ಸಾಕು, ಆದರೆ ಪ್ರತಿದಿನ ಬಾದಾಮಿ ತಿನ್ನದವರು 8-10 ಬಾದಾಮಿ ಗಳೊಂದಿಗೆ ಪ್ರಾರಂಭಿಸಬೇಕು.

ದಿನಕ್ಕೆ ಎಷ್ಟು ಬಾದಾಮಿ ತಿನ್ನಬೇಕು?





# ರಾಮಾಯಣ

ಶ್ರೀರಾಮನ ದುಃಖಾತಿರೇಕ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಕಾಲೋಚಿತವಾದ ಸಮಯವನ್ನರಿಯದೆ ಮಕ್ಕಳಾಟಿಕೆಯಿಂದ ನನ್ನನ್ನು ಜರಿದು ನುಡಿಯುತ್ತಿದ್ದೀಯೆ. ನೀನು ಬುದ್ಧಿವಂತರಾಗಿ ಪೂಜ್ಯರಾದ ವೃದ್ಧರೊಡನೆ ಯಾವಾಗಲೂ ಸಂಭಾಷಣೆ ಮಾಡಿದವನಲ್ಲ. ಆದಕಾರಣ ನಿನ್ನ ಚಂಚಲಬುದ್ಧಿಯಿಂದ ನನ್ನನ್ನು ಜರಿದು ನುಡಿಯುತ್ತಿದ್ದೀಯೆ. ಸಮಸ್ತ ಭೂಮಂಡಲವೂ ಇಕ್ಷ್ವಾಕುವಂಶದ ರಾಜರ ವಶವಾಗಿರುವುದು. ಈ ಭೂಮಂಡಲದೊಳಗಿರುವ ಮನುಷ್ಯಮೃಗಪಕ್ಷಿಗಳ ನಿಗ್ರಹಾನುಗ್ರಹಗಳಿಗೆ ಕರ್ತನಾಗಿ ಭರತನು ರಾಜ್ಯಪರಿಪಾಲನವನ್ನು ಮಾಡಿಕೊಂಡಿದ್ದಾನೆ. ಆತನು ಧರ್ಮಾರ್ಥಕಾಮಗಳ ತತ್ತ್ವವಿಚಾರವನ್ನು ಬಲ್ಲವನು. ದುಷ್ಟನಿಗ್ರಹ ಶಿಷ್ಟಪರಿಪಾಲನಗಳನ್ನು ಮಾಡುವುದರಲ್ಲಿ ಮಹಾದಕ್ಷ, ನೀತಿ ನಯಾದಿ ಗುಣಗಳಲ್ಲಿ ನಿಪುಣ. ಆತನಲ್ಲಿ ಸತ್ಯ ದಯೆ ವಿಕ್ರಮಗಳು ಸಹಜವಾಗಿರುವುವು. ಆತನು ದೇಶಕಾಲಗಳನ್ನು ಬಲ್ಲವನು. ಆತನ ಅಪ್ಪಣೆಯಿಂದ ನಾವೂ ಇನ್ನು ಕೆಲವು ದೊರೆಗಳೂ ಈ ಭೂಮಂಡಲದಲ್ಲಿ ಧರ್ಮವನ್ನು ಪರಿಪಾಲಿಸುವುದಕ್ಕಾಗಿ ಸಂಚರಿಸಿಕೊಂಡಿರುವೆವು. ರಾಜರಾಜೋತ್ತಮನಾಗಿ ಧರ್ಮಮಾರ್ಗ ಪ್ರವರ್ತಕನಾದ ಭರತನು ಸಮಸ್ತ ಭೂಮಂಡಲವನ್ನೂ ಪರಿಪಾಲಿಸಿಕೊಂಡಿರುವುದರಿಂದ ಧರ್ಮವನ್ನು ಬಿಟ್ಟು ನಡೆಯುವವರನ್ನು ಆತನ ಆಜ್ಞೆಯಿಂದ ದಂಡಿಸುತ್ತಿದ್ದೇವೆ. ನೀನು ಧರ್ಮಮಾರ್ಗವನ್ನು ಬಿಟ್ಟು ಕಾಮುಕನಾಗಿ ರಾಜಧರ್ಮಗಳನ್ನು ಬಿಟ್ಟು ಲೋಕದಲ್ಲಿ ಮಾಡಭಾರದ ಕೃತ್ಯಗಳನ್ನು ಮಾಡುತ್ತಿದ್ದೀಯೆ. ಈ ಲೋಕದಲ್ಲಿ ಹಿರಿಯ ಅಣ್ಣನೂ ತಂದೆಯೂ ವಿದ್ಯೆಯನ್ನು ಕಲಿಸಿದವನೂ ಇವರು ಮೂವರು ತಂದೆಗಳು ಎಂಬ ಧರ್ಮಶಾಸ್ತ್ರವುಂಟು.

ಆದ್ದರಿಂದ ಮನುಷ್ಯನು ತಮ್ಮನನ್ನೂ ಮಗನನ್ನೂ ಗುಣವಂತನಾದ ಶಿಷ್ಯನನ್ನೂ ತನ್ನ ಮಕ್ಕಳಂತೆಯೇ ಕಾಣಬೇಕು. ವಾಲಿ, ಲೋಕದಲ್ಲಿ ಧರ್ಮವು ಸುಲಭಗ್ರಾಹ್ಯವಲ್ಲ. ಧರ್ಮವನ್ನೂ ಪುಣ್ಯಪಾಪ ಗಳನ್ನೂ ಹೃದಯಕಮಲದಲ್ಲಿರುವ ಪರಮಾತ್ಮನೇ ಬಲ್ಲನು. ಜಾತ್ಯಂಧರೊಡನೆ ಸೇರಿದ ಕುರುಡನು ಸರಿಯಾದ ದಾರಿಯನ್ನು ಕಾಣದಂತೆ ನೀನು ಚಪಲಬುದ್ಧಿಯುಳ್ಳವನಾಗಿ ಚಪಲರಾದ ಕಪಿಗಳೊಡನೆ ಕೂಡಿದ್ದರಿಂದ ಧರ್ಮರಹಸ್ಯವನ್ನು ಬಲ್ಲವನಲ್ಲ. ನೀನು ಚಪಲಬುದ್ಧಿಯಿಂದ ನನ್ನನ್ನು ಜರಿದು ನುಡಿಯುತ್ತಿದ್ದೀಯೆ. ನೀನು ನಿರಪರಾಧಿಯಾಗಿದ್ದಿದ್ದರೆ ನಾನು ನಿನ್ನನ್ನು ಕೊಲ್ಲುತ್ತಿರಲಿಲ್ಲ. ನೀನು ನಿನ್ನ ಒಡಹುಟ್ಟಿದ ತಮ್ಮನ ಸ್ತ್ರೀಯಲ್ಲಿ ಜಾರತ್ವವನ್ನು ಮಾಡುತ್ತಿದ್ದೆ. ಹೀಗೆ ಧರ್ಮಾಮಾರ್ಗವನ್ನು ಬಿಟ್ಟು ಅಧರ್ಮಮಾರ್ಗದಲ್ಲಿ ನಡೆದದ್ದರಿಂದ ನಿನ್ನನ್ನು ಸಂಹರಿಸಿದೆನು. ಧರ್ಮವಿರುದ್ಧವಾದ ಮಾರ್ಗದಲ್ಲಿ ನಡೆಯುವವರನ್ನು ದಂಡಿಸಬೇಕಲ್ಲದೆ ಸುಮ್ಮನಿರಬಾರದು. ಆದಕಾರಣ ಕ್ಷತ್ರಿಯ ಕುಲೋತ್ತಮನಾದ ನನಗೆ ನಿನ್ನನ್ನು ಕೊಂದದ್ದು ಪಾತಕವಲ್ಲ. ಧರ್ಮಶಾಸ್ತ್ರವನ್ನು ಬಲ್ಲವರು. ಮಗಳಲ್ಲಿಯೂ ಒಡಹುಟ್ಟಿದವಳಲ್ಲಿಯೂ ತಮ್ಮನ ಸ್ತ್ರೀಯಲ್ಲಿಯೂ ಸೊಸೆಯಲ್ಲಿಯೂ ಕಾಮಬುದ್ಧಿಯಿಂದ ಎರಡೆಣಿಸುವವನನ್ನು ಕೊಲ್ಲಬೇಕೆಂದು ಹೇಳುವರು. ಈಗ ಭರತನು ರಾಜ್ಯ ಪರಿಪಾಲನವನ್ನು ಮಾಡಿಕೊಂಡಿದ್ದಾನೆ.

ಮುಂದುವರಿಯುವುದು...

• ಉದಯವಾಹಿನಿ, ವಿಶೇಷ

# ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ



ವಿಶ್ವಾಸ್.ಡಿ.ಗೌಡ

ಭಾರತದಲ್ಲಿ ಪ್ರತಿವರ್ಷ ಜನವರಿ 24ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಈ ದಿನಾಚರಣೆಯ ಪ್ರಧಾನ ಉದ್ದೇಶವು ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಇರುವ ಸವಾಲುಗಳನ್ನು ಗುರುತಿಸುವುದು, ಅವರ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ಲಿಂಗ ಸಮಾನತೆಯನ್ನು ಬಲಪಡಿಸುವುದಾಗಿದೆ. ಹೆಣ್ಣು ಮಕ್ಕಳು ಕೇವಲ ಕುಟುಂಬದ ಸದಸ್ಯರಷ್ಟೇ ಅಲ್ಲ; ಅವರು ರಾಷ್ಟ್ರದ ಭವಿಷ್ಯವನ್ನು ರೂಪಿಸುವ ಶಕ್ತಿಯುತ ಕಂಬಗಳು ಎಂಬ ಸತ್ಯವನ್ನು ಈ ದಿನ ನಮಗೆ ನೆನಪಿಸುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ಎಂಬ ಉಕ್ತಿಯಂತೆ ಮಹಿಳೆಯರಿಗೆ ಉನ್ನತ ಸ್ಥಾನಮಾನ ನೀಡಲಾಗಿದೆ. ಆದರೂ ಕಾಲಕ್ರಮೇಣ ಸಮಾಜದಲ್ಲಿ ಕೆಲ ತಪ್ಪು ಸಂಪ್ರದಾಯಗಳು, ಅಜ್ಞಾನ ಮತ್ತು ಪಿತೃಸತ್ವ ಮನೋಭಾವಗಳು ಹೆಣ್ಣು ಮಕ್ಕಳ ಬದುಕಿನ ಮೇಲೆ ದುಷ್ಪರಿಣಾಮ ಬೀರಿವೆ. ಲಿಂಗಭೇದ, ಬಾಲ್ಯವಿವಾಹ, ಶಿಕ್ಷಣದ ಕೊರತೆ, ಆರೋಗ್ಯದ ನಿರ್ಲಕ್ಷ್ಯ, ಕೌಟುಂಬಿಕ ಹಾಗೂ ಸಾಮಾಜಿಕ ಹಿಂಸೆ ಇಂತಹ ಅನೇಕ ಸಮಸ್ಯೆಗಳು ಇಂದಿಗೂ ಕೆಲವು ಭಾಗಗಳಲ್ಲಿ ಕಾಣಸಿಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಿ ಕಾರ್ಯನಿರ್ವಹಿಸುತ್ತದೆ. ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಅತಿದೊಡ್ಡ ಸಮಸ್ಯೆಗಳಲ್ಲಿ ಶಿಕ್ಷಣದ ಕೊರತೆ ಪ್ರಮುಖವಾದುದು. ಶಿಕ್ಷಣವು ಹೆಣ್ಣು ಮಕ್ಕಳನ್ನು ಸ್ವಾವಲಂಬಿಗಳಾಗಿಸುತ್ತದೆ, ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಮತ್ತು ತಮ್ಮ ಹಕ್ಕುಗಳನ್ನು ಅರಿತುಕೊಳ್ಳುವ ಶಕ್ತಿಯನ್ನು ನೀಡುತ್ತದೆ. ಶಿಕ್ಷಣ ಪಡೆದ ಹೆಣ್ಣು ಮಕ್ಕಳು ಉತ್ತಮ ತಾಯಂದಿರಾಗುವುದರ ಜೊತೆಗೆ ಸಮಾಜದ ಜವಾಬ್ದಾರಿಯುತ ನಾಗರಿಕರಾಗುತ್ತಾರೆ. ಅವರು ಮುಂದಿನ ಪೀಳಿಗೆಗೆ ಉತ್ತಮ ಮೌಲ್ಯಗಳನ್ನು ಕಲಿಸುತ್ತಾರೆ. ಆದ್ದರಿಂದ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಹೂಡಿಕೆ ಮಾಡುವುದು ದೇಶದ ಭವಿಷ್ಯದಲ್ಲಿ ಹೂಡಿಕೆ ಮಾಡಿದಂತೆಯೇ.



ಆರೋಗ್ಯ ಮತ್ತು ಪೋಷಣೆ ಹೆಣ್ಣು ಮಕ್ಕಳ ಸಮಗ್ರ ಬೆಳವಣಿಗೆಗೆ ಅತ್ಯಂತ ಅವಶ್ಯಕವಾದ ಅಂಶಗಳಾಗಿವೆ. ಬಾಲ್ಯದಿಂದಲೇ ಸಮರ್ಪಕ ಪೌಷ್ಟಿಕ ಆಹಾರ, ವೈದ್ಯಕೀಯ ಆರೈಕೆ, ಲಸಿಕೆಗಳು ಮತ್ತು ಮಾನಸಿಕ ಬೆಂಬಲ ದೊರೆತಾಗ ಮಾತ್ರ ಅವರು ಆರೋಗ್ಯವಂತ ವ್ಯಕ್ತಿಗಳಾಗಿ ಬೆಳೆದು ನಿಲ್ಲುತ್ತಾರೆ. ಆದರೆ ಕೆಲವು ಕುಟುಂಬಗಳಲ್ಲಿ ಹೆಣ್ಣು ಮಕ್ಕಳ ಆರೋಗ್ಯವನ್ನು ಕಡೆಗಣಿಸುವ ಮನೋಭಾವ ಇನ್ನೂ ಜೀವಂತವಾಗಿದೆ.

**ಇದು ಕೇವಲ ವ್ಯಕ್ತಿಗತ ಸಮಸ್ಯೆಯಲ್ಲ;** ರಾಷ್ಟ್ರದ ಆರೋಗ್ಯದ ಮೇಲೆಯೇ ಪರಿಣಾಮ ಬೀರುವ ಗಂಭೀರ ವಿಷಯವಾಗಿದೆ. ಈ ದಿನಾಚರಣೆ ಮೂಲಕ ಆರೋಗ್ಯದ ಹಕ್ಕು ಎಲ್ಲರಿಗೂ ಸಮಾನವೆಂಬ ಸಂದೇಶವನ್ನು ಗಟ್ಟಿಯಾಗಿ ಸಾರಬೇಕು. ಹೆಣ್ಣು ಮಕ್ಕಳ ಸುರಕ್ಷತೆ ಮತ್ತು ಗೌರವ ಸಮಾಜದ ಪ್ರಮುಖ ಜವಾಬ್ದಾರಿಯಾಗಿದೆ. ಶಾಲೆ, ಮನೆ, ಸಾರ್ವಜನಿಕ ಸ್ಥಳಗಳು-ಎಲ್ಲೆಡೆ ಅವರು ಭಯವಿಲ್ಲದೆ ಬದುಕುವ ವಾತಾವರಣ ನಿರ್ಮಾಣವಾಗಬೇಕು. ಕಾನೂನುಗಳು ಮತ್ತು ನಿಯಮಗಳು ಅಗತ್ಯವಾದರೂ, ಮನಸ್ಸಿನ ಪರಿವರ್ತನೆಯೇ ಶಾಶ್ವತ ಪರಿಹಾರ. ಹೆಣ್ಣು ಮಕ್ಕಳನ್ನು ಗೌರವದಿಂದ ನೋಡುವ ಸಂಸ್ಕೃತಿ ಬೆಳೆದಾಗ ಮಾತ್ರ ನಿಜವಾದ ಸುರಕ್ಷತೆ ಸಾಧ್ಯ. ಕುಟುಂಬದಿಂದಲೇ ಗೌರವದ ಪಾಠ ಆರಂಭವಾಗಬೇಕು. ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಸರ್ಕಾರ, ಶಿಕ್ಷಣ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಘಟನೆಗಳು ವಿವಿಧ ಜಾಗೃತಿ ಕಾರ್ಯಕ್ರಮಗಳು, ಕಾರ್ಯಾಗಾರಗಳು, ರ್‍ಯಾಲಿಗಳು, ಸಂವಾದಗಳು ಇತ್ಯಾದಿಗಳನ್ನು ಆಯೋಜಿಸುತ್ತವೆ. ಇವುಗಳ ಮೂಲಕ ಹೆಣ್ಣು ಮಕ್ಕಳ ಹಕ್ಕುಗಳು, ಕಾನೂನು ರಕ್ಷಣೆಗಳು, ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಲಾಗುತ್ತದೆ. ಶಾಲೆಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಮಕ್ಕಳಲ್ಲಿ ಸಮಾನತೆಯ ಮನೋಭಾವ ಬೆಳೆಸಲಾಗುತ್ತದೆ. ಈ ರೀತಿಯ ಕಾರ್ಯಕ್ರಮಗಳು ಸಮಾಜದಲ್ಲಿ ಬದಲಾವಣೆಗೆ ಬೀಜ ಬಿತ್ತುತ್ತವೆ.

> ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಸಮಾಜದ ಜವಾಬ್ದಾರಿಯನ್ನು ನೆನಪಿಸುತ್ತದೆ. ಹೆಣ್ಣು ಮಕ್ಕಳನ್ನು ಕೇವಲ ರಕ್ಷಿಸಬೇಕಾದವರಂತೆ ಅಲ್ಲ, ಸಮಾನ ಹಕ್ಕುಳ್ಳ ವ್ಯಕ್ತಿಗಳಂತೆ ನೋಡಬೇಕಾಗಿದೆ. ಅವರ ಅಭಿಪ್ರಾಯಗಳಿಗೆ ಮೌಲ್ಯ ನೀಡುವುದು, ನಿರ್ಧಾರಗಳಲ್ಲಿ ಅವರನ್ನು ಸೇರಿಸಿಕೊಳ್ಳುವುದು ಮತ್ತು ಅವರ ಕನಸುಗಳಿಗೆ ಬೆಂಬಲ ನೀಡುವುದು ಅತ್ಯಂತ ಅಗತ್ಯ. ಸಮಾನತೆಯ ಮನೋಭಾವ ಸಮಾಜದಲ್ಲಿ ಬೇರೂರಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ.

ಈ ದಿನಾಚರಣೆ ಪೋಷಕರ ಪಾತ್ರವನ್ನು ವಿಶೇಷವಾಗಿ ಒತ್ತಿ ಹೇಳುತ್ತದೆ. ಹೆಣ್ಣು ಮಗುವನ್ನು ಜನಿಸಿದ ಕ್ಷಣದಿಂದಲೇ ಪ್ರೀತಿ, ಗೌರವ ಮತ್ತು ಸಮಾನ ಅವಕಾಶಗಳೊಂದಿಗೆ ಬೆಳೆಸುವುದು ಪೋಷಕರ ಕರ್ತವ್ಯ. ಮಗ ಮತ್ತು ಮಗಳು ಎಂಬ ಭೇದವಿಲ್ಲದೆ ಶಿಕ್ಷಣ, ಕನಸುಗಳು ಮತ್ತು ಅವಕಾಶಗಳನ್ನು ನೀಡಿದಾಗ ಕುಟುಂಬವೇ ಸಾಮಾಜಿಕ ಬದಲಾವಣೆಯ ಮೊದಲ ಹಂತವಾಗುತ್ತದೆ. ಕುಟುಂಬದೊಳಗಿನ ಸಮಾನತೆ ಸಮಾಜದ ಸಮಾನತೆಗೆ ದಾರಿ ಮಾಡಿಕೊಡುತ್ತದೆ. ಇಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಕಲೆ, ವೈದ್ಯಕೀಯ, ಆಡಳಿತ, ರಾಜಕೀಯ, ಸೇನೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ.

ಅವಕಾಶ ಸಿಕ್ಕಾಗ ಅವರು ಸಾಧನೆಯ ಶಿಖರವನ್ನು ತಲುಪುತ್ತಾರೆ ಎಂಬುದಕ್ಕೆ ಅನೇಕ ಉದಾಹರಣೆಗಳಿವೆ.

ಇವು ಇತರ ಹೆಣ್ಣು ಮಕ್ಕಳಿಗೆ ಪ್ರೇರಣೆಯಾಗಿ ಕಾರ್ಯನಿರ್ವಹಿಸುತ್ತವೆ. ನಾನೂ ಸಾಧಿಸಬಹುದು ಎಂಬ ಆತ್ಮವಿಶ್ವಾಸವನ್ನು ಬೆಳೆಸುವುದು ಈ ದಿನಾಚರಣೆಯ ಮಹತ್ವದ ಸಾಧನೆಯಾಗಿದೆ.

ಸಾರಾಂಶವಾಗಿ, ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಒಂದು ದಿನದ ಆಚರಣೆಯಲ್ಲ; ಇದು ನಿರಂತರ ಜಾಗೃತಿ ಮತ್ತು ಸಾಮಾಜಿಕ ಚಳವಳಿಯ ಸಂಕೇತ. ಹೆಣ್ಣು ಮಕ್ಕಳಿಗೆ ಸಮಾನ ಹಕ್ಕುಗಳು, ಗೌರವ, ಶಿಕ್ಷಣ, ಆರೋಗ್ಯ ಮತ್ತು ಸುರಕ್ಷತೆ ಒದಗಿಸಿದಾಗ ಮಾತ್ರ ಸಮೃದ್ಧ ಹಾಗೂ ಸಮಾನತೆಯ ಭಾರತ ನಿರ್ಮಾಣ ಸಾಧ್ಯ.

ಹೆಣ್ಣು ಮಗು ಉಳಿಸಿ, ಹೆಣ್ಣು ಮಗು ಬೆಳೆಸಿ'' ಎಂಬ ಸಂದೇಶವನ್ನು ಕೇವಲ ಘೋಷಣೆಯಾಗಿ ಅಲ್ಲ, ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹೆಣ್ಣು ಮಕ್ಕಳು ಬೆಳಗಿದಾಗಲೇ ಕುಟುಂಬ ಬೆಳಗುತ್ತದೆ, ಸಮಾಜ ಬೆಳಗುತ್ತದೆ, ಮತ್ತು ದೇಶವೂ ಬೆಳಗುತ್ತದೆ ಇದೇ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ನಿಜವಾದ ಅರ್ಥ.


6ಎಕರೆ ಜಮೀನಿನಲ್ಲಿ 120ಫಲಾನುಭವಿಗಳಿಗೆ ನಿವೇಶನ ಹಂಚಿಕೆ: ಹೆಚ್ಚುವರಿ 4ಎಕರೆ ಜಮೀನು ನೀಡುವ ಭರವಸೆ

# 8ಕೋಟಿ ರೂ. ಡಾಂಬರಿಕರಣ ರಸ್ತೆ ನಿರ್ಮಾಣ: ಸಚಿವ

• **ಉದಯವಾಹಿನಿ, ಚಿಂಚೋಳಿ**

ಐದು ಗ್ಯಾರಂಟಿ ಜೋತೆ ಅಭಿವೃದ್ಧಿ ಕಾಮಗಾರಿಗಳು ಮಾಡಲು 1.86ಕೋಟಿ ರೂ.ಭಕ್ತಂಪಳ್ಳಿ ಒಂದೇ ಗ್ರಾಮದಲ್ಲಿ ಕೆಲಸ ಮಾಡಿದ್ದೇನೆ ಎಂದು ವೈದ್ಯಕೀಯ ಶಿಕ್ಷಣ, ಕೌಶಾಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ ಪಾಟೀಲ ಹೇಳಿದರು. ತಾಲ್ಲೂಕಿನ ಭಕ್ತಂಪಳ್ಳಿ ಗ್ರಾಮದಲ್ಲಿ ರಾಜೀವಗಾಂಧಿ ವಸತಿ ನಿಗಮ ಆಶ್ರಯ ನಿವೇಶನಗಳ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ, ಅಡಿಗಲ್ಲು ನೇರವೇರಿಸಿ ಮಾತನಾಡಿದ ಅವರು, ಗಣಾಪುರ ಚಿತ್ರಸಾಲ 8ಕೋಟಿ ರೂ.ಡಾಂಬರಿಕರಣ ರಸ್ತೆ ಕಾಮಗಾರಿ ನಡೆಯುತ್ತಿದೆ, ಮುಂದೆ ಕುಂಚಾವರಂ ಕ್ರಾಸ್‌ವರೆಗೆ ಡಾಂಬರಿಕರಣ ರಸ್ತೆ ಮಾಡುತ್ತೇನೆ, 6ಕೋಟಿ ರೂ.ಮತ್ತು 9ಕೋಟಿ ರೂ.ಡಾಂಬರಿಕರಣ ರಸ್ತೆ ಹೊಡೆಬೀರನಳ್ಳಿ ಸುಲೇಪೇಟ ಚಿಂಚೋಳಿ ರಸ್ತೆ ಮಾಡಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಬಾಲಭವನ ಸೂಸೈಟಿ ರಾಜ್ಯ ಉಪಾಧ್ಯಕ್ಷ ಅನೀಲ ಜಮಾದಾರ, ಅಜೀತ ಪಾಟೀಲ, ಶರಣುಪಾಟೀಲ, ಮಲ್ಲಿಕಾರ್ಜುನ ಬುಶೇಟ್ಟಿ, ಬಾಬುಮಿಯ್ಯ ಮೋಮೀನ, ಲಕ್ಷ್ಮಣ ಆವುಂಟಿ, ಸುದರ್ಶನ್ ರೆಡ್ಡಿ, ಶ್ರೀನಿವಾಸ್ ಬಂಡಿ, ಗೋಪಾಲರೆಡ್ಡಿ, ಲಿಂಗಶೇಟ್ಟಿ ತಟ್ಟೆಪಳ್ಳಿ, ಸಂಗಾರೆಡ್ಡಿ, ರವಿಪ್ರಕಾಶ, ಮಹೇಬೂಬಸಾಬ, ರಾಘವೇಂದ್ರ ಗುತ್ತೇದಾರ, ಜಗನ್ನಾಥ ಇದಲಾಯಿ, ಸುಭಾನರೆಡ್ಡಿ, ಜಮೀರಪಾಷ, ಬೀರಪ್ಪ ಪೂಜಾರಿ, ಶರಣುಕುಮಾರ ದೇಸಾಯಿ, ಜಗದೇವಯ್ಯಸ್ವಾಮಿ, ವೆಂಕಟರೆಡ್ಡಿ, ಶಿವಶರಣರೆಡ್ಡಿ ಪಾಟೀಲ, ಗ್ರಾಪಂ ಅಧ್ಯಕ್ಷ ಪಾರ್ವತಿ, ಪ್ರಶಾಂತ ಇಳವೇನಕೇರಿ, ರಾಮು ಭಕ್ತಂಪಳ್ಳಿ, ಆಸೀಫ್ ಪಟೇಲ, ಅಶೋಕರೆಡ್ಡಿ, ಸಿದ್ರಾಮಪ್ಪ ನಿಷ್ಠಿ, ಮಲ್ಲಿಕಾರ್ಜುನ ತಳವಾರ, ಆನಂದರೆಡ್ಡಿ ಚಿತ್ರಸಾಲ, ನಬೀಸಾಬ ಲದಾಫ್, ಶಾಂತಮ್ಮ, ಬಸವರಾಜ, ಸಂತೋಷ ಗುತ್ತೇದಾರ, ನಾಗೇಶ, ಶಿವಕುಮಾರ ಸಜ್ಜನ, ಅರವಿಂದರೆಡ್ಡಿ ಅನೇಕರಿದ್ದರು.


**ಕಾಂಗ್ರೇಸ್ ಸರ್ಕಾರ ಬಿಡುವುದಿಲ್ಲ**


ಉದಯವಾಹಿನಿ ಚಿತ್ರ

**6ಎಕರೆ ಜಮೀನುನಲ್ಲಿ 120ನಿವೇಶನ ಆಗುತ್ತಿವೆ, ಹೆಚ್ಚಿನ 04 ಎಕರೆ ಜಮೀನು ತೆಗೆದುಕೊಂಡು ನಿವೇಶನ ಹಂಚಿಕೆ ಮಾಡುವ ಕೆಲಸ ಮಾಡುತ್ತೇವೆ, ತೆಲಂಗಾಣ ರಸ್ತೆಗೆ ಡಾಂಬರಿಕರಣ ರಸ್ತೆ, ಖಬರಸ್ತಾನ್, ದೇವಾಸ್ಥಾನಗಳ ಅಭಿವೃದ್ಧಿ ಮಾಡುತ್ತೇನೆ. ನರೇಗಾ ಯೋಜನೆಯಿಂದ ಗ್ರಾಪಂ. ಆಡಳಿತದ ಶಕ್ತಿ ಕಸಿದುಕೊಳ್ಳುಲು ಕೇಂದ್ರ ಬಿಜೆಪಿ ಸರ್ಕಾರ ಮಾಡುತ್ತಿದೆ ನರೇಗಾ ಕೆಲಸ ರದ್ದುಪಡಿಸಲು ಕಾಂಗ್ರೇಸ್ ಸರ್ಕಾರ ಬಿಡುವುದಿಲ್ಲ.**
**- ಡಾ.ಶರಣಪ್ರಕಾಶ ಪಾಟೀಲ**
**ವೈದ್ಯಕೀಯ ಶಿಕ್ಷಣ, ಕೌಶಾಲ್ಯಾಭಿವೃದ್ಧಿ ಸಚಿವ**


**ನೂರಾರು ಸಾವಿರ ಕೋಟಿ ರೂ.ಕೆಲಸ ಸೇಡಂ ಕ್ಷೇತ್ರದಲ್ಲಿ ಮಾಡಿದ್ದೇನೆ**

**ಐದು ಗ್ಯಾರಂಟಿಗಳಿಂದ 1,20,000ಸಾವಿರ ಕೋಟಿ ರೂ.ಜನರ ಮನೆಬಾಗಿಲಿಗೆ ಮುಟ್ಟಿಸಿದ್ದೇವೆ, ಕಾಂಗ್ರೇಸ್ ಸರ್ಕಾರ ದಿವಾಳಿಯಾಗಿಲ್ಲ,ಸಮೃದ್ದಿಯಾಗಿದೆ, ಕಾಂಗ್ರೇಸ್ ಅಧಿಕಾರಕ್ಕೆ ಬಂದಾಗ ಬಡವರ ಪರವಾಗಿ ಕಾನೂನು ಭೂಸುಧಾರಣೆ,ಅನ್ನಭಾಗ್ಯ,ಪೆನ್‌ಷನ,ಅನೇಕ ಯೋಜನೆ ತಂದು ಬಡವರ ಮನೆ ಬಾಗಿಲಿಗೆ ಮುಟ್ಟಿಸಿದ್ದೇವೆ. ಬಡವರ ಮನೆಯಲ್ಲಿ ಆದಾಯ ಹೆಚ್ಚಾದರೆ ಅವರಲ್ಲ ಪೌಷ್ಟಿಕ ಆಹಾರ ಸಿಗುತ್ತದೆ ಬಡವರ ಉದ್ದಾರವಾದರೆ ದೇಶ ಉದ್ದಾರವಾಗುತ್ತದೆ,2013ರಿಂದ 2018ರವರೆಗೆ ಕಾಂಗ್ರೇಸ್ ಸರ್ಕಾರ ಬಡವರ ಪರ ಕೆಲಸ ಮಾಡಿದ್ದೇವೆ ಈಗಲೂ ಕೂಡ ಮಾಡುತ್ತಿದ್ದೇವೆ,ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5ಸಾವಿರ ಕೋಟಿ ನೀಡುತ್ತಿದ್ದೇವೆ ಅದರಿಂದ ಅಭಿವೃದ್ಧಿ ಆಗುತ್ತಿದೆ,ಸೇಡಂನಲ್ಲಿ 688ಕೋಟಿ ರೂ.ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದ್ದಾರೆ, ಇದಕ್ಕೂ ಮುಂಚೆ ನೂರಾರು ಸಾವಿರ ಕೋಟಿ ರೂ.ಕೆಲಸ ಸೇಡಂ ಕ್ಷೇತ್ರದಲ್ಲಿ ಮಾಡಿದ್ದೇನೆ.**


ಉದಯವಾಹಿನಿ ಚಿತ್ರ

# ಬಡವರಿಗೆ ವರವಾದ ಗ್ಯಾರಂಟಿ: ಅಧ್ಯಕ್ಷ

• **ಉದಯವಾಹಿನಿ, ಬೀಳಗಿ**


ಉದಯವಾಹಿನಿ ಚಿತ್ರ

ಗ್ಯಾರಂಟಿ ಯೋಜನೆಗಳಿಂದ ತಾಯಂದಿರಿಗೆ ಆತ್ಮಬಲ ಬಂದಿದೆ. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶದ ಮಹಿಳೆಯರು ರಾಜ್ಯದಾದ್ಯಂತ ಪ್ರವಾಸ ಮಾಡುತ್ತಿದ್ದಾರೆ. ಸ್ವಾತಂತ್ರ್ಯ ಬಂದು 75 ವರ್ಷವಾದರೂ ಆಗದಷ್ಟು ಬದಲಾವಣೆ, ಗ್ಯಾರಂಟಿ ಯೋಜನೆ ಜಾರಿಗೆ ಬಂದ ಎರಡು ವರ್ಷದಲ್ಲಿ ಆಗಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಅಣವೀರಯ್ಯ ಪ್ಯಾಟಿಮಠ ಹೇಳಿದರು. ತಾಲ್ಲೂಕಿನ ಹೊನ್ನಿಹಾಳ, ಕಂದಗಲ್ಲ ಗ್ರಾಮದಲ್ಲಿ ಜಿಲ್ಲಾ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ ಏರ್ಪಡಿಸಿದ್ದ ಗ್ಯಾರಂಟಿ ಯೋಜನೆಗಳ ಸಾರ್ವಜನಿಕ ಕುಂದು ಕೊರತೆ ಸಭೆಯಲ್ಲಿ ಅವರು ಮಾತನಾಡಿದರು.

ಬಡಜನರ ಆರ್ಥಿಕ ಸದೃಢತೆಗೆ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ. ಈ ಯೋಜನೆಗಳಿಂದ ಕೌಟುಂಬಿಕ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಔಷಧಿ ನೆರವು ಸೇರಿದಂತೆ ಹಲವು ರೂಪದಲ್ಲಿ ಗೃಹಲಕ್ಷ್ಮಿ, ಯುವನಿಧಿ, ಶಕ್ತಿ ಯೋಜನೆಗಳು ನೆರವು ಆಗಿರುವ ಬಗ್ಗೆ ಫಲಾನುಭವಿಗಳಿಂದ ಮಾಹಿತಿ ಪಡೆದರು. ಈ ಯೋಜನೆಗಳು ಇನ್ನಷ್ಟು ಸಫಲವಾಗಲು ಸಾರ್ವಜನಿಕರ ಸಹಕಾರ ಬಹಳಷ್ಟು ಪ್ರಾಮುಖ್ಯತೆ ಪಡೆಯುತ್ತದೆ. ನಿಮ್ಮ ಸಮಸ್ಯೆಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಸದಾಕಾಲ ಸ್ಪಂದಿಸುವ ಕಾರ್ಯಮಾಡುತ್ತಾರೆ ಎಂದು ತಿಳಿಸಿದರು. ಗ್ಯಾರಂಟಿ ನಿರ್ದೇಶಕರಾದ ನೆಮಿರಾಜ ದೇಸಾಯಿ, ವೆಂಕನಗೌಡ ಪಾಟೀಲ, ರಸೂಲಸಾಬ ಮುಜಾವಾರ, ಚಂದ್ರಶೇಖರ ಪಂಡರಿ ಮಾತನಾಡಿ, ಗ್ಯಾರಂಟಿ ಯೋಜನೆಗಳು ಮಹಿಳೆಯರ ಬದುಕಿಗೆ ಸಾಕಷ್ಟು ಅನುಕೂಲವಾಗಿದ್ದು, ಈ ಯೋಜನೆಗಳು ಮುಂದುವರೆಯಲು ಸರ್ಕಾರದ ಯೋಜನೆಗಳನ್ನು ಪಡೆದ ತಾವೂಗಳು ನಿರಂತರವಾಗಿ ಉಪಕಾರ ಸ್ಮರಣೀಯ ಎಂದರು.

# ಮೊಬೈಲ್ ಬಳಕೆ ಮಾನವೀಯ ಸಂಬಂಧ ಕಡಿದು ಹಾಕಿದೆ

• **ಉದಯವಾಹಿನಿ, ಲಕ್ಷ್ಮೇಶ್ವರ**

ಅತಿಯಾದ ಮೊಬೈಲ್ ಬಳಕೆಯಿಂದಾಗಿ ಮಾನವೀಯ ಸಂಬಂಧಗಳು ಕಡಿದು ಹೋಗಿದ್ದು, ಅದೊಂದು ವ್ಯಸನವಾಗಿ ಮಾರ್ಪಟ್ಟಿದೆ ಎಂದು ನಿವೃತ್ತ ಹಂಗಾಮಿ ಕುಲಪತಿ ಓಂಕಾರ ಕಾಕಡೆ ಹೇಳಿದರು. ತಾಲ್ಲೂಕಿನ ಶಿಗ್ಲಿಯ ಜಿಎಸ್ಎಸ್ ಸಂಸ್ಥೆಯಲ್ಲಿ ಜರುಗಿದ ಶಾಲಾ ಉತ್ಸವ ಕಾರ್ಯಕ್ರಮದಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆ ವರವೋ ಶಾಪವೋ ವಿಷಯ ಕುರಿತು ಮಾತನಾಡಿದರು.

ಮೊಬೈಲ್ ಬಳಕೆ ಚಾಕೂ ಇದ್ದಂತೆ ಚಾಕೂವಿನಿಂದ ಹಣ್ಣನ್ನೂ ಕತ್ತರಿಸಬಹುದು. ಕೊಲೆಯನ್ನೂ ಮಾಡಬಹುದು. ಅದನ್ನು ಬಳಸುವವರ ವಿವೇಕದ ಮೇಲೆ ಅದರ ಪರಿಣಾಮ ಉಂಟಾಗುತ್ತದೆ. ಹಾಗೆಯೇ ಮೊಬೈಲ್ ಬಳಕೆ ಕೂಡ ಅದನ್ನು ಬಳಸುವವರ ಮೇಲೆ ಅದರ ಅನುಕೂಲ ಅನಾನು ಕೂಲತೆಗಳು ಇವೆ ಎಂದರು. ಗಂಟೆಗಟ್ಟಲೆ ರೀಲ್ಸ್ ನೋಡಲು, ಪಬ್ಜಿ ಆಡಲು, ಗೇಮ್ ಆಡಲು ಬಳಸುವುದರಿಂದ ಸಾಮಾಜಿಕ ಮಾಧ್ಯಮ ಶಾಪವಾಗುತ್ತದೆ.


ಉದಯವಾಹಿನಿ ಚಿತ್ರ

ಅಧ್ಯಯನವೊಂದರ ಪ್ರಕಾರ ಯುಕೆಜಿ, ಎಲ್‌ಕೆಜಿ ಮಕ್ಕಳು ದಿನಕ್ಕೆ ಒಂದೂವರೆ ಗಂಟೆ, ಪ್ರಾಥಮಿಕ ಶಾಲೆ ಮಕ್ಕಳು ಎರಡು, ಪ್ರೌಢಶಾಲಾ ಮಕ್ಕಳು ಮೂರು, ಕಾಲೇಜುಗಳಿಗೆ ಹೋಗುವ ಯುವ ಜನರು ದಿನಕ್ಕೆ ಐದಾರು ಗಂಟೆ ಮೊಬೈಲ್ ಬಳಸುತ್ತಾರೆ. ಇದೇ ಸಮಯವನ್ನು ವಿದ್ಯಾರ್ಥಿಗಳು ಓದಿಗಾಗಿ ಕಳೆದರೆ ಹೆಚ್ಚಿನ ಅಂಕ ಬರುತ್ತವೆ. ಇನ್ನು ತಾಯಂದಿರು ಮಕ್ಕಳ ಕೈಗೆ ಮೊಬೈಲ್

**ಶೇ 13ರಷ್ಟು ಮಕ್ಕಳು ಮಾನಸಿಕ ರೋಗಕ್ಕೆ ಬಲಿ**

**ರೀಲ್ಸ್ ನೋಡುವಾಗ ಅಶ್ಲೀಲ ಚಿತ್ರಗಳು ಬರುತ್ತವೆ. ಒಮ್ಮೆ ಮಗು ಇಂಥ ಚಿತ್ರ ನೋಡಿದರೆ ಪದೇ ಪದೇ ಅದನ್ನೇ ನೋಡಲು ತವಕಿಸುತ್ತದೆ. ಕಾರಣ ಬಹಳ ಎಚ್ಚರಿಕೆಯಿಂದ ಇರಬೇಕು. ನಾವು ಮೊಬೈಲ್ ದಾಸರಾಗಿದ್ದೇವೆ' ಎಂದು. ಶೇ.13ರಷ್ಟು ವಿದ್ಯಾರ್ಥಿಗಳು ಇದರಿಂದ ಹುಚ್ಚರಾಗಿದ್ದಾರೆ. ಮೊಬೈಲ್ ವಿಷ ಜಂತುವಾಗಿದ್ದು ಗೊತ್ತಿಲ್ಲದೆ ಅದು ನಮ್ಮನ್ನು ಆವರಿಸಿಕೊಳ್ಳುತ್ತದೆ. ಇದರಿಂದಾಗಿ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಸತತ ಮೊಬೈಲ್ ಬಳಸುವ ಶೇ.23ರಷ್ಟು ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ ತಲೆದೋರಿದೆ. ಇದು ಗಂಭೀರ ಸಮಸ್ಯೆ. ಕಾರಣ ಮೊಬೈಲ್ ನಿಯಂತ್ರಣ ಅಗತ್ಯ.**

# ಮದ್ಯ ಜೂಜಾಟ, ಮಟ್ಕಾ ನಿಷೇಧಕ್ಕೆ ನಿರ್ಧಾರ

• **ಉದಯವಾಹಿನಿ, ಕಾರಟಗಿ**

ಅನೇಕ ಸಂಸಾರಗಳ ಸಂಬಂಧದ ಕೊಂಡಿ ಕಳಚುವ, ಮಾರಕ ರೋಗಕ್ಕೆ ತುತ್ತಾಗಿಸುವ, ಸಾಲದ ಸುಳಿಯಲ್ಲಿ ಸಿಲುಕಿಸಿ ಜೀವನವನ್ನೇ ಹಾಳು ಮಾಡುವ ಮದ್ಯ, ಜೂಜಾಟ, ಮಟ್ಕಾ ನಿಷೇಧಕ್ಕೆ ತಾಲ್ಲೂಕಿನ ಉಳೇನೂರಲ್ಲಿ ಬೂದಗುಂಪಾ ಸಿದ್ದೇಶ್ವರ ಶ್ರೀಗಳ ನೇತೃತ್ವದಲ್ಲಿ ನಡೆದ ಗ್ರಾಮಸಭೆಯಲ್ಲಿ ಸಾರ್ವಜನಿಕರು ನಿರ್ಧಾರ ಕೈಗೊಂಡರು. ಗ್ರಾಮದಲ್ಲಿ ನಿರಂತರವಾಗಿ ನಡೆಯುತ್ತಿರುವ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಆಗಮಿಸಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಗ್ರಾಮದ ಮಹಿಳೆಯರು, ನಾಗರಿಕರು ಮನವಿ ಸಲ್ಲಿಸಿ ಆಗ್ರಹಿಸಿದರು.


ಶಿಕ್ಷಕ ಭೀಮಣ್ಣ ಮಾತನಾಡಿ, ಉಳೇನೂರು ಗ್ರಾಮವು ಕಲೆ ಮತ್ತು ಕ್ರೀಡೆಯಲ್ಲಿ ಮುಂದಿರುವ, ಬಹಳಷ್ಟು ಜನ ಯುವಕರನ್ನು ಒಳಗೊಂಡಿರುವ ಗ್ರಾಮವಾಗಿದೆ. ಆದರೆ, ಆ ಯುವಕರು ಸರಿಯಾದ ಮಾರ್ಗದರ್ಶನವಿಲ್ಲದೇ ದುಶ್ಚಟಗಳಿಗೆ ಬಲಿಯಾಗಿ, ವ್ಯಸನಿಗಳಾಗಿ, ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವುದು ದುರಂತವೇ ಸರಿ. ದುಶ್ಚಟಗಳಿಗೆ ಕಡಿವಾಣ ಹಾಕುವ ನಿರ್ಧಾರ ಕೈಗೊಂಡಿರುವುದು ಐತಿಹಾಸಿಕ ಕ್ಷಣವಾಗಿದೆ ಎಂದರು.


ಉದಯವಾಹಿನಿ ಚಿತ್ರ

ಅಬಕಾರಿ ನಿರೀಕ್ಷಕ ವಿಠಲ್ ಮಾತನಾಡಿ, ಇಲಾಖೆ ಮಾಡಬೇಕಾದ ಕೆಲಸವನ್ನು ಗ್ರಾಮದ ಯುವಕರು ಮಾಡಿರುವುದು ಶ್ಲಾಘನಾರ್ಹ. ಗಂಗಾವತಿ ವ್ಯಾಪ್ತಿಯಲ್ಲಿ ಈಗಾಗಲೇ 8 ಹಳ್ಳಿಗಳಲ್ಲಿ ಮದ್ಯ ನಿಷೇಧ ಮಾಡಿ ವ್ಯಸನಮುಕ್ತ ಗ್ರಾಮಗಳನ್ನಾಗಿ ಘೋಷಣೆ ಮಾಡಲಾಗಿದೆ. ಅದರಲ್ಲಿ ಉಳೇನೂರು ಗ್ರಾಮವೂ ಒಂದಾಗಿದೆ. ಗ್ರಾಮಸ್ಥರು ಗ್ರಾಮಸಭೆ ನಡೆಸಿ, ಅಧಿಕಾರಿಗಳನ್ನು ಕರೆಸಿರುವುದು ಆರೋಗ್ಯಕರ ಬೆಳವಣಿಗೆ. ಅಕ್ರಮ ಚಟುವಟಿಕೆಗಳು ನಡೆದರೆ ನೇರವಾಗಿ ನಮ್ಮನ್ನು ಸಂಪರ್ಕಿಸಿ, ನಿಮ್ಮೊಂದಿಗೆ ನಾವೂ ಕೈಜೋಡಿಸುತ್ತೇವೆ ಎಂದರು.

ಅನೇಕ ಮಹಿಳೆಯರು, ಸಂತ್ರಸ್ತೆಯರು, ನಮ್ಮೂರಿನಲ್ಲಿ ಮದ್ಯಪಾನ ನಿಷೇಧ ಆಗಲೇಬೇಕು. ನಮ್ಮ ಮಕ್ಕಳು, ಪತಿಯರು ಕುಡಿದು ಗಲಾಟೆ ಮಾಡಿ ಎಷ್ಟೋ ಸಂಸಾರಗಳು ಹಾಳಾಗಿವೆ. ಗ್ರಾಮಸಭೆ ಮಾಡಿ ಒಳ್ಳೆಯ ನಿರ್ಧಾರ ತೆಗೆದುಕೊಂಡಿರುವುದು ಅತೀವ ಸಂತಸವನ್ನುಂಟು ಮಾಡಿದೆ. ಉಳೇನೂರು ಗ್ರಾಮದಲ್ಲಿ ಮದ್ಯ, ಜೂಜಾಟ, ಮಟ್ಕಾ ಶಾಶ್ವತವಾಗಿ ನಿಷೇಧಿಸಬೇಕು ಎಂದು ಆಗ್ರಹಿಸಿ ಕಂದಾಯ, ಪೊಲೀಸ್, ಅಬಕಾರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

# ಗ್ರಾಮೀಣಾಭಿವೃದ್ಧಿಗೆ ಆದ್ಯತೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಳೇದಗುಡ್ಡ**

ಗ್ರಾಮಗಳು ದೇಶದ ಜೀವಾಳ, ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದಂತೆ ಎಂದು ತಾಲ್ಲೂಕು ಪಂಚಾಯಿತಿ ಇಒ ಮಲ್ಲಿಕಾರ್ಜುನ ಬಡಿಗೇರ ಹೇಳಿದರು. ತಾಲ್ಲೂಕಿನ ಹಳದೂರ ಗ್ರಾ.ಪಂ. ವ್ಯಾಪ್ತಿಯ ಅಲ್ಲೂರ ಎಸ್ ಪಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ಮಿಸಲಾದ ಸಂಜೀವಿನಿ ಕಟ್ಟಡ ಶುಕ್ರವಾರ ಉದ್ಘಾಟಿಸಿ ಮಾತನಾಡಿದರು. ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು. ಆ ನಿಟ್ಟಿನಲ್ಲಿ ಸಂಜೀವಿನಿ ಕಟ್ಟಡ ಅವಶ್ಯಕತೆ ಇತ್ತು. ಈಗ ಸರ್ಕಾರ ಪಂಚಾಯಿತಿ ಮೂಲಕ ಅನುಕೂಲ ಮಾಡಿ ಕೊಟ್ಟಿರುವುದರಿಂದ ಅದರ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ರಾಮಚಂದ್ರ ಮೈತ್ರಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಸರ್ಕಾರ ಹಲವು ಅಭಿವೃದ್ಧಿ ಕೆಲಸ ನೀಡಿದೆ ವಿಶೇಷವಾಗಿ ನರೇಗಾ ಯೋಜನೆ ಮಹತ್ವಪೂರ್ಣವಾಗಿವೆ. ಗ್ರಾಮೀಣ ಮಹಿಳೆಯರು ಸ್ವಯಂ ಉದ್ಯೋಗ ಮಾಡಿ ಸಮಾಜದಲ್ಲಿ ಸಮಾಜದಲ್ಲಿ ಮುಂದೆ ಬರಬೇಕು ಎಂದರು.

ಗುಳೇದಗುಡ್ಡ ಮರಡಿಮಠದ ಅಭಿನವ ಕಾಡಸಿದ್ದೇಶ್ವರ ಶ್ರೀಗಳು ಮಾತನಾಡಿ, ಗ್ರಾಮಗಳಲ್ಲಿನ ಜನರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಬೇಕು. ಜೊತೆಗೆ ಗ್ರಾಮಗಳು ಮೂಲ ಸೌಲಭ್ಯಗಳನ್ನು ಹೊಂದಬೇಕು. ಆ ದಿಸೆಯಲ್ಲಿ ಸರ್ಕಾರ ಉತ್ತಮವಾದ ಸೌಲಭ್ಯ ನೀಡುತ್ತಿದೆ ಎಂದರು. 17 ಲಕ್ಷ ವೆಚ್ಚದಲ್ಲಿ ಸ್ವಚ್ಛತಾ ಸಂಕೀರ್ಣ, ?6 ಲಕ್ಷ ವೆಚ್ಚದಲ್ಲಿ ಬಿಸಿಯೂಟ ಅಡುಗೆ ಕೋಣೆಯ ಹೊಸ ಕಟ್ಟಡಗಳನ್ನು ಉದ್ಘಾಟಿಸಲಾಯಿತು. ಸ್ವಸಹಾಯ ಸಂಘದ ಸದಸ್ಯರಿಗೆ ಸ್ವ ಉದ್ಯೋಗ ಕೈಗೊಳ್ಳಲು 5 ಸಂಘಗಳಿಗೆ ಸಾಲದ ಚೆಕ್ ವಿತರಿಸಲಾಯಿತು. ಮತದಾನ ಜಾಗೃತಿ ಮೂಡಿಸುವ ಮತದಾನ ಪ್ರತಿಜ್ಞೆ ವಿಧಿಯನ್ನು ತಾಲ್ಲೂಕು ಪಂಚಾಯಿತಿ ಇಒ ಮಲ್ಲಿಕಾರ್ಜುನ ಬಡಿಗೇರ ಬೋಧಿಸಿದರು.

# ಮಿಯ್ಯಾರಿನಲ್ಲಿ ಅಪಘಾತ: ನಾಲ್ವರ ಸಾವು

• **ಉದಯವಾಹಿನಿ, ಕಾರ್ಕಳ**

ತಾಲ್ಲೂಕಿನ ಮಿಯ್ಯಾರು ಕಂಬಳ ಕ್ರಾಸ್ ಪರಿಸರದ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್, ಕ್ರೂಸರ್ ಮುಖಾಮುಖಿ ಡಿಕ್ಕಿಯಾಗಿ ನಾಲ್ವರು ಮೃತಪಟ್ಟ ಘಟನೆ ನಡೆದಿದೆ. ಕಲಬುರಗಿ ಕಡೆಯ ತೂಫಾನ್ ವಾಹನ ಧರ್ಮಸ್ಥಳಕ್ಕೆ ತೆರಳುತ್ತಿದ್ದಾಗ ಧರ್ಮಸ್ಥಳದಿಂದ ಕಾರ್ಕಳಕ್ಕೆ ಬರುತ್ತಿದ್ದ ಖಾಸಗಿ ಬಸ್ ನಡುವೆ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ತೂಫಾನ್ ವಾಹನದ ಚಾಲಕ ಮಣ್ಣಪ್ಪ, ಪ್ರಯಾಣಿಕರಾದ ಚೇತು, ರೋಹಿತ್ ಮೃತಪಟ್ಟವರು. ತೂಫಾನ್ ವಾಹನದಲ್ಲಿ ಒಟ್ಟು 13 ಮಂದಿ ಹಾಗೂ ಒಂದು ಮಗು ಪ್ರಯಾಣಿಸುತ್ತಿದ್ದುದಾಗಿ ಪೊಲೀಸರು ತಿಳಿಸಿದ್ದಾರೆ. ತೀವ್ರವಾಗಿ ಗಾಯಗೊಂಡ ಒಬ್ಬರನ್ನು ಮಣಿಪಾಲದ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಗು ಸಣ್ಣಪುಟ್ಟ ಗಾಯಗಳೊಂದಿಗೆ ಕಾರ್ಕಳದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ. ಉಳಿದ ಗಾಯಾಳುಗಳು ಕಾರ್ಕಳದ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಈ ಪ್ರದೇಶದಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿದ್ದು, ಖಾಸಗಿ ಬಸ್ ಚಾಲಕನ ಅತಿವೇಗ ಹಾಗೂ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಸ್ಥಳೀಯರು ತಿಳಿಸಿದ್ದಾರೆ. ಕಾರ್ಕಳ ನಗರ ಠಾಣಾ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

# ಸೂರು ವಂಚಿತ ಬಡವರಿಗೆ ಸುಸಜ್ಜಿತ ಲೇಔಟ್

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಭಕ್ತಂಪಳ್ಳಿ ಗ್ರಾಮದಲ್ಲಿ ನಿವೇಶನ ಹಾಗೂ ಸೂರು ವಂಚಿತ ಬಡವರಿಗೆ ಸುಸಜ್ಜಿತ ಲೇಔಟ ನಿರ್ಮಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಮೂಲಸೌಕರ್ಯ ಕಲ್ಪಿಸುವ ಮೂಲಕ ನೂತನ ಬಡಾವಣೆ ನಿರ್ಮಿಸುತ್ತಿರುವುದು ತಾಲ್ಲೂಕಿನಲ್ಲಿಯೇ (ಗ್ರಾಮೀಣ ಭಾಗ) ಇದು ಮೊದಲ ಪ್ರಯತ್ನ.

2015 ರಲ್ಲಿ ಭಕ್ತಂಪಳ್ಳಿ ಗ್ರಾಮದ ಸ.ನಂ.28ರಲ್ಲಿ ಬಡವರಿಗೆ ನಿವೇಶನಗಳ ಹಕ್ಕುಪತ್ರಗಳನ್ನು ಸಚಿವ ಡಾ.ಶರಣಪ್ರಕಾಶ ಪಾಟೀಲ ವಿತರಿಸಿದ್ದರು. ರಾಜೀವಗಾಂಧಿ ವಸತಿ ನಿಗಮದಿಂದ ಭೂಮಿ ಸಮತಟ್ಟುಗೊಳಿಸಲು 3.60ಲಕ್ಷ ಮಂಜೂರು ಕೂಡ ಮಾಡಲಾಗಿತ್ತು. ಆದರೇ ಮಂಜೂರಾದ ಹಣ ಬಳಕೆಯಾಗದೆ ಹಕ್ಕುಪತ್ರ ವಿತರಣೆಗೆ ಮಾತ್ರ ಸೀಮಿತವಾಗಿತ್ತು.


ಉದಯವಾಹಿನಿ ಚಿತ್ರ

2023ರಲ್ಲಿ ಶರಣಪ್ರಕಾಶ ಪಾಟೀಲ ಮತ್ತೆ ಶಾಸಕರಾಗಿ ಆಯ್ಕೆಯಾದ ನಂತರ ಸ.ನಂ 28ರ ಜಮೀನಿನ ನಕಾಶೆ ಪಡೆದು ಸುಸಜ್ಜಿತ ಲೇಔಟ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಹೌಸಿಂಗ್ ಬೋರ್ಡ ನಿರ್ಮಿಸುವ ಲೇಔಟ್‌ಗಳ ಮಾದರಿಯಲ್ಲಿ ಭಕ್ತಂಪಳ್ಳಿಯಲ್ಲಿ ಸರ್ಕಾರವೇ ಲೇಔಟ್ ನಿರ್ಮಿಸಿ ಬಡವರಿಗೆ ನೆರವಾಗುತ್ತಿದೆ.

ಬಡಾವಣೆಯಲ್ಲಿ ಒಟ್ಟು 120 ನಿವೇಶನಗಳಿದ್ದು, ಮುಖ್ಯರಸ್ತೆ 30 ಅಡಿ ಅಗಲ, ಒಳ ರಸ್ತೆ 20 ಅಡಿ ಅಗಲ ಹೊಂದಿದೆ. 6 ಎಕರೆ 10 ಗುಂಟೆ ಸರ್ಕಾರಿ ಜಮೀನಿನಲ್ಲಿ ಲೇಔಟ್ ನಿರ್ಮಿಸಲಾಗಿದೆ. ಕೆಕೆಆರ್‌ಡಿಬಿಯಿಂದ ಪಂಚಾಯತ್‌ರಾಜ್ ತಾಂತ್ರಿಕ ಉಪ ವಿಭಾಗಕ್ಕೆ 20 ಲಕ್ಷ, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ 15 ಲಕ್ಷ ಮಂಜೂರು ಮಾಡಲಾಗಿದೆ ಎಂದು ಗರಗಪಳ್ಳಿ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಹೀರಾಸಿಂಗ್ ತಿಳಿಸಿದರು. ಗುತ್ತಿಗೆದಾರರು ಈಗಾಗಲೇ ಕಚ್ಚಾ ರಸ್ತೆ, ಎರಡು ಸಿಡಿ ನಿರ್ಮಿಸಿದ್ದಾರೆ. ನಿವೇಶನಗಳಿಗೆ ನಂಬರ್ ಹಾಕಲಾಗಿದೆ. ಸಿಮೆಂಟ್ ಕಾಂಕ್ರಿಟ್ ರಸ್ತೆ, ಚರಂಡಿ ನಿರ್ಮಾಣ ಕೆಲಸ ಆರಂಭಿಸಬೇಕಿದೆ. ಇನ್ನು ವಿದ್ಯುತ್ ಸೌಕರ್ಯಕ್ಕಾಗಿ ಕಂಬಗಳ ಸ್ಥಾಪನೆ ಮತ್ತು ಉದ್ಯಾನವನ ಅಭಿವೃದ್ಧಿ ಹಾಗೂ ಬಾಕಿ ಉಳಿದ ಚರಂಡಿ ನಿರ್ಮಾಣಕ್ಕೆ ಅಗತ್ಯ ಅನುದಾನ ಮಂಜೂರು ಮಾಡಿಸಲು ಸಚಿವರಿಗೆ ಮನವಿ ಸಲ್ಲಿಸುತ್ತೇವೆ ಎಂದು ಗ್ರಾಮದ ಮುಖಂಡ ಶಿವಶರಣರೆಡ್ಡಿ ಭಕ್ತಂಪಳ್ಳಿ ತಿಳಿಸಿದರು.

**ಲೇಔಟ್‌ನಲ್ಲಿ ಗ್ರಾಮ ಪಂಚಾಯಿತಿಗೆ, ಉದ್ಯಾನವನಕ್ಕೆ ಹಾಗೂ ನಾಗರಿಕ ಸೌಕರ್ಯಗಳಿಗಾಗಿ ಪ್ರತ್ಯೇಕ ಜಾಗ ಮೀಸಲಿರಿಸಲಾಗಿದೆ. ಅಲ್ಲದೇ ಇದೇ ಲೇಔಟ್ ಪಕ್ಕದಲ್ಲಿ ಸರ್ಕಾರಿ ಶಾಲೆಗೆ 2 ಎಕರೆ ಜಮೀನು, ಅಂಗನವಾಡಿ ಕೇಂದ್ರಕ್ಕೆ 10 ಗುಂಟೆ ಜಮೀನು ಪ್ರತ್ಯೇಕವಾಗಿ ಮಂಜೂರು ಮಾಡಿಸಲಾಗಿದೆ. ಸಚಿವರ ವಿಶೇಷ ಮುತುವರ್ಜಿಯಿಂದ ಸರ್ಕಾರವೇ ಸುಸಜ್ಜಿತ ಲೇಔಟ್ ನಿರ್ಮಿಸಿ ಬಡವರಿಗೆ ಉಚಿತವಾಗಿ ನಿವೇಶನ ನೀಡಿದ್ದು ಮಾದರಿ ಕೆಲಸ.**
**-ಜಗನ್ನಾಥ ಈದ್ಲಾಯಿ, ತಾಪಂ ಮಾಜಿ ಸದಸ್ಯ**

# ಪ್ರತಿಷ್ಠಿತ ಸಂಸ್ಥೆಗೆ ಉತ್ತರಾಧಿಕಾರಿ ಯಾರಾಗಲಿದ್ದಾರೆ ಎಂಬ ಕುತೂಹಲ

## ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷರ ಸ್ಥಾನ ಸದ್ಯ ಖಾಲಿ; ನಿರ್ಣಾಯಕ ಹುದ್ದೆ ಅಲಂಕರಿಸುವ ಸವಾಲು

• **ಉದಯವಾಹಿನಿ, ಬೆಳಗಾವಿ**

ನಾಲ್ಕು ದಶಕಕ್ಕೂ ಅಧಿಕ ಕಾಲ ' ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ 'ಯನ್ನು ಕಾರ್ಯಾಧ್ಯಕ್ಷರಾಗಿ ಮುನ್ನಡೆಸಿದ ಡಾ.ಪ್ರಭಾಕರ ಕೋರೆ ಆಡಳಿತ ಮಂಡಳಿಯಿಂದ ಹಿಂದೆ ಸರಿದಿದ್ದು, ಪ್ರತಿಷ್ಠಿತ ಸಂಸ್ಥೆಗೆ 'ಉತ್ತರಾಧಿಕಾರಿ' ಯಾರಾಗಲಿದ್ದಾರೆ ಎಂಬ ಕುತೂಹಲ ಎಲ್ಲೆಡೆ ಮನೆಮಾಡಿದೆ. ಮುಂದಿನ ಐದು ವರ್ಷಗಳ ಅವಧಿಗೆ ಶಾಸಕ ಮಹಾಂತೇಶ ಕೌಜಲಗಿ ಹಾಗೂ ಬಸವರಾಜ ತಟವಟಿ ಅವರು ಕ್ರಮವಾಗಿ ಅಧ್ಯಕ್ಷ-ಉಪಾಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ನೂತನ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರೂ ನಿರ್ಣಾಯಕ ಹುದ್ದೆಯಾದ ಕಾರ್ಯಾಧ್ಯಕ್ಷ ಸ್ಥಾನ ಇನ್ನೂ ಖಾಲಿ ಇದೆ. ಡಾ.ಕೋರೆ ಅವರು ತೊರೆಯುತ್ತಿರುವ ಕಾರ್ಯಾಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ಸಾಮರ್ಥ್ಯ ಯಾರಲ್ಲಿದೆ? ಎಂಬ ಚರ್ಚೆ ನಾನಾ ವಿಶ್ಲೇಷಣೆಗೆ ಕಾರಣವಾಗಿದೆ.

**ಮುಂದಿನ ಉತ್ತರಾಧಿಕಾರಿ ಆಯ್ಕೆ:** ಆಡಳಿತ ಮಂಡಳಿಯಲ್ಲಿ ಡಾ.ಪ್ರಭಾಕರ ಕೋರೆ ಅವರ ಪುತ್ರ ಅಮಿತ್ ಕೋರೆ ಹಾಗೂ ಪುತ್ರಿ ಪ್ರೀತಿ ದೊಡವಾಡ ಇದ್ದಾರೆ. ಡಾ.ಪ್ರಭಾಕರ ಕೋರೆ ಅವರಿಗಿಂತಲೂ ಮೊದಲು ಕಾರ್ಯಾಧ್ಯಕ್ಷರಾಗಿದ್ದ ಮಹದೇವಪ್ಪ ಮುನವಳ್ಳಿ ಅವರ ಪುತ್ರ ಜಯಣ್ಣ ಮುನವಳ್ಳಿ ಹಾಗೂ ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಮಹಾಂತೇಶ ಕವಟಗಿಮಠ ಅವರು ನಿರ್ದೇಶಕ ಸ್ಥಾನದಲ್ಲಿದ್ದಾರೆ. ಹೀಗಾಗಿ ಕಾರ್ಯಾಧ್ಯಕ್ಷ ಹುದ್ದೆಗೆ ಒಂದಕ್ಕಿಂತ ಹೆಚ್ಚು ಹೆಸರು ಮುನ್ನೆಲೆಗೆ ಬಂದಿವೆ. ಏನೇ ಇದ್ದರೂ ಕಾರ್ಯಾಧ್ಯಕ್ಷರ ಆಯ್ಕೆ ಅಂತಿಮ ತೀರ್ಮಾನವನ್ನು ಡಾ.ಪ್ರಭಾಕರ ಕೋರೆ ಅವರೇ ತಿಳಿಸಬೇಕು ಎಂಬ ಅಭಿಪ್ರಾಯ ಆಡಳಿತ ಮಂಡಳಿಯಲ್ಲಿ ಬಲವಾಗಿ ಕೇಳಿಬರುತ್ತಿದೆ. ಬದಲಾಗುತ್ತಿರುವ ಜ್ಞಾನ ಯುಗದಲ್ಲಿಕೆಎಲ್‌ಇ ಸಂಸ್ಥೆಯ ಶೈಕ್ಷಣಿಕ ಗುಣಮಟ್ಟ, ಜಾಗತಿಕ ಸ್ಪರ್ಧಾತ್ಮಕತೆ ಮತ್ತು ವಿಶ್ವಾಸಾರ್ಹತೆ ಉಳಿಸಿ, ಬೆಳೆಸುವ ಜವಾಬ್ದಾರಿ ಮುಂದಿನ ಕಾರ್ಯಾಧ್ಯಕ್ಷರ ಮೇಲಿರಲಿದೆ. ಡಾ. ಕೋರೆ ಅವರಿಗೆ ಆಡಳಿತ ಮಂಡಳಿಯಲ್ಲಿಅಧಿಕೃತ ಹುದ್ದೆ ಇಲ್ಲದೇ ಇದ್ದರೂ 'ಮಾರ್ಗದರ್ಶಕ ಶಕ್ತಿ' ಎಂದು ಪರಿಗಣಿಸಬೇಕಿದೆ.

ಪ್ರಸ್ತುತ ಕಾರ್ಯಾಧ್ಯಕ್ಷರ ಆಯ್ಕೆಯಾಗಲಿ, ಪ್ರಮುಖ ನೀತಿ, ನಿರ್ಧಾರಗಳಲ್ಲಿಅವರ ಅಭಿಪ್ರಾಯ ಪರಿಗಣಿಸದೇ ಅಂತಿಮ ತೀರ್ಮಾನಕ್ಕೆ ಬರಲಾಗದು. ಡಾ.ಪ್ರಭಾಕರ ಕೋರೆ ಅವರು ನಾಲ್ಕು ದಶಕಗಳ ಕಾಲ ಸಂಸ್ಥೆ ಕಟ್ಟಿ ಬೆಳೆಸಿದ ಪರಿ, ರಚನಾತ್ಮಕವಾಗಿ ರೂಪಿಸಿದ ಆಡಳಿತ ವ್ಯವಸ್ಥೆ ಮತ್ತು ಅವರ ಅನುಭವವನ್ನು ಮುಂದೆಯೂ ಸಂಸ್ಥೆಗೆ ಧಾರೆ ಎರೆಯಬೇಕು, ಎಂದು ಸಂಸ್ಥೆಯ ಹಿರಿಯ ನಿರ್ದೇಶಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.


ಉದಯವಾಹಿನಿ ಚಿತ್ರ

**ಎಲ್ಲೆಡೆ ಪ್ರಶಂಸೆ**

**'ಆಟವನ್ನು ಚೆನ್ನಾಗಿ ಆಡುತ್ತಿರುವಾಗಲೇ ಬಿಟ್ಟುಕೊಟ್ಟು ನಿರ್ಗಮಿಸು' ಎಂಬ ಮಾತು ಡಾ. ಪ್ರಭಾಕರ ಕೋರೆ ಅವರ ನಡೆಗೆ ಸರಿಹೊಂದುವಂತಿದೆ. 1984 ರಲ್ಲಿ ಸಂಸ್ಥೆಯ ಆಡಳಿತ ಮಂಡಳಿಗೆ ಸೇರಿದ ಅವರು, 1985ರಲ್ಲಿಕಾರ್ಯಾಧ್ಯಕ್ಷ ಹುದ್ದೆ ಅಲಂಕರಿಸಿದ್ದರು. ಆಗ ಕೆಎಲ್‌ಇ ಸಂಸ್ಥೆ ಕೇವಲ 38 ಅಂಗಸಂಸ್ಥೆಗಳನ್ನು ಮಾತ್ರ ಹೊಂದಿತ್ತು. ಡಾ.ಪ್ರಭಾಕರ ಕೋರೆ ಅವರು ನಾಲ್ಕು ದಶಕಗಳಲ್ಲಿಅಂಗ ಸಂಸ್ಥೆಗಳ ಸಂಖ್ಯೆಯನ್ನು 316ಕ್ಕೆ ಏರಿಸಿ, ಕೆಎಲ್‌ಇ ಸಂಸ್ಥೆಗೆ ಜಾಗತಿಕ ಮನ್ನಣೆ ತಂದುಕೊಟ್ಟಿದ್ದಾರೆ. ತಮ್ಮ ನಾಯಕತ್ವ ಪ್ರಬಲವಾಗಿ ಇರುವಾಗಲೇ ಹೊಸಬರಿಗೆ ಅವಕಾಶ ಕಲ್ಪಿಸಿ, ಆಡಳಿತ ಮಂಡಳಿಯಿಂದ ಹಿಂದೆ ಸರಿಯುತ್ತಿರುವ ನಡೆಗೆ ಎಲ್ಲೆಡೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.**

**ಮುಂದಿನ ನಾಯಕತ್ವಕ್ಕೆ ಹೆಚ್ಚಿನ ಸವಾಲು**

**'ಸಪ್ತ ಋಷಿ'ಗಳು ಕಟ್ಟಿದ ಕೆಎಲ್‌ಇ ಸಂಸ್ಥೆ ಡಾ.ಪ್ರಭಾಕರ ಕೋರೆ ದೂರದೃಷ್ಟಿಯ ನಾಯಕತ್ವದ ಕಾರಣದಿಂದ ವೈದ್ಯಕೀಯ, ಇಂಜಿನಿಯರಿಂಗ್, ಸಂಶೋಧನೆ ಕ್ಷೇತ್ರಗಳಲ್ಲಿ ಅಗಾಧವಾದುದನ್ನು ಸಾಧಿಸಿ ಜಾಗತಿಕ ಮಟ್ಟದಲ್ಲಿ ಬೆಳೆದಿದೆ. ಮುಂದಿನ ಕಾರ್ಯಾಧ್ಯಕ್ಷರು ಈವರೆಗಿನ ಆಡಳಿತ ವೈಖರಿ ಕಾಯ್ದುಕೊಳ್ಳುವ ಜತೆಗೆ ಇನ್ನೂ ಮುಂದಿನ ಹಂತಕ್ಕೆ ಕೊಂಡೊಯ್ಯುವ ಹೊಣೆಗಾರಿಗೆ ನಿಭಾಯಿಸಬೇಕಿದೆ. ಕೃತಕ ಬುದ್ಧಿಮತ್ತೆ (ಎಐ), ಆಧುನಿಕ ಶೈಕ್ಷಣಿಕ ಪದ್ಧತಿ, ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಶಿಕ್ಷಣದಲ್ಲಿಸಂಶೋಧನಾ ಆಧಾರಿತ ಬೆಳವಣಿಗೆ, ಜಾಗತಿಕ ವಿಶ್ವವಿದ್ಯಾಲಯಗಳೊಂದಿಗೆ ಸಮನ್ವಯ ಮುಂದುವರಿಸುವ ಹಾಗೂ ವಿಸ್ತರಿಸುವ ಸವಾಲು ಕೂಡ ಇದೆ.**

## ಮಿನಿ ನ್ಯೂಸ್

### ರಾಜ್ಯಪಾಲರ ನಡೆ ಸಂವಿಧಾನ ಬಾಹಿರ: ಸಲೀಂ ಅಹ್ಮದ್

• **ಉದಯವಾಹಿನಿ, ಹುಬ್ಬಳ್ಳಿ**

ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ವರ್ತಿಸುತ್ತಿದ್ದು, ಜಂಟಿ ಅಧಿವೇಶನದಲ್ಲಿ ಅವರು ನಡೆದುಕೊಂಡ ರೀತಿ ಸಂವಿಧಾನ ಬಾಹಿರವಾಗಿದೆ ಎಂದು ಸರ್ಕಾರದ ಮುಖ್ಯ ಸಚೇತಕ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಆಕ್ರೋಶ ವ್ಯಕ್ತಪಡಿಸಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಸಭೆ, ವಿಧಾನಪರಿಷತ್‌ನ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಸರ್ಕಾರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಭಾಷಣ ಮಾಡುವುದು ಸಂಪ್ರದಾಯ. ಆದರೆ, ರಾಜ್ಯಪಾಲ ಥಾವರಚಂದ್ ಗೆಲ್ಹೋಟ್ ಅವರು ಅದೊಂದನ್ನು ಬಿಟ್ಟು ಉಳಿದ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು. ರಾಜ್ಯಪಾಲರ ನಡೆಯಿಂದ ರಾಜ್ಯದ ಜನರಿಗೆ ಅನ್ಯಾಯವಾಗಿದೆ. ಇಲ್ಲಿ ಭಾವನೆಗಳಿಗೆ ಅವಕಾಶವಿಲ್ಲ, ಕರ್ತವ್ಯ ಮಾತ್ರ ನಿಭಾಯಿಸಬೇಕು. ಈಗಾಗಲೇ ನಮ್ಮ ಸರ್ಕಾರ ಅವರ ನಡೆ ಖಂಡಿಸಿದ್ದು, ಸಿಎಂ ಸಿದ್ದರಾಮಯ್ಯ ಅವರು ಕಾನೂನು ತಜ್ಞರ ಜೊತೆ ಚರ್ಚೆ ನಡೆಸಿದ್ದಾರೆ. ಇಂತಹ ಘಟನೆ ರಾಜ್ಯದಲ್ಲಿ ಹಿಂದೆಂದೂ ನಡೆದಿಲ್ಲ ಎಂದರು.

### ಸಾವಯವ ಕೃಷಿಯಿಂದ ರೈತ ಸ್ವಾವಲಂಬಿ

• **ಉದಯವಾಹಿನಿ, ರೋಣ**

ನಾಡಿನ ರೈತರು ರಸಗೊಬ್ಬರಗಳಿಗಾಗಿ ಸರ್ಕಾರ, ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಅವಲಂಬಿತರಾಗುವ ಜೊತೆಗೆ ಸಾಲದ ಸುಳಿಗೆ ಸಿಲುಕಿ ಕೊಳ್ಳದೆ ಸಾವಯವ ಪದ್ಧತಿ ಅಳವಡಿಸಿಕೊಳ್ಳಿ ಎಂದು ಪ್ರಗತಿಪರ ರೈತ ಸುರೇಶಗೌಡ ಪಾಟೀಲ ಹೇಳಿದರು. ತಾಲ್ಲೂಕಿನ ಬಸಲಾಪುರ ಗ್ರಾಮದ ಜಮೀನಿನಲ್ಲಿ ತಾಲ್ಲೂಕು ಪಂಚಾಯಿತಿ ರೋಣ, ಕೃಷಿ ಇಲಾಖೆ ಸಹಯೋಗದಲ್ಲಿ 2025-26ನೇ ಸಾಲಿನ ಆತ್ಮ ಯೋಜನೆ ಹಾಗೂ ರಾಷ್ಟ್ರೀಯ ಆಹಾರ ಮತ್ತು ಪೌಷ್ಟಿಕ ಭದ್ರತಾ ಯೋಜನೆ ಅಡಿ -15 ಹಾಗೂ 111-1 ಕಡಲೆ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು ಕೃಷಿಯಲ್ಲಿ ಆದಾಯದ ಏರುಪೇರು ಅಪೌಷ್ಟಿಕತೆ ಜಗತ್ತಿನಾದ್ಯಂತ ಪಸರಿಸುತ್ತಿದ್ದು ಸದೃಢ ಆರೋಗ್ಯ ಹಾಗೂ ಸುಸ್ಥಿರ ಆರ್ಥಿಕತೆಗಾಗಿ ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ. ಬಿತ್ತಿದ ದಿನದಿಂದಲೇ ಕೃಷಿ ಚಟುವಟಿಕೆ ಪ್ರಾರಂಭಿಸಿ ಪ್ರತಿ ಹಂತದಲ್ಲಿಯೂ ರೈತರು ಎಚ್ಚರಿಕೆ ತೆಗೆದುಕೊಳ್ಳಬೇಕು. ಕುಲಾಂತರಿ ತಳಿಗಳನ್ನು ಬೆಳೆಯದೆ ಜವಾರಿ ತಳಿಗಳ ಕಡೆ ರೈತರು ಮನಸ್ಸು ಮಾಡಬೇಕಿದೆ. ಸತ್ವಯುತ ಬೆಳೆಗಳಿಗಾಗಿ ಗೊಮೂತ್ರ ಬಳಸಬಹುದು ಎಂದು ಸಲಹೆ ನೀಡಿದರು.

ಕೃಷಿ ಇಲಾಖೆ ಗದಗ ಜಿಲ್ಲಾ ಜಂಟಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ಕೃಷಿಕರು ಹಳೇ ಪದ್ಧತಿಯ ವ್ಯವಸಾಯ ಕೈ ಬಿಡದೆ ಮುಂದುವರೆಸಿ ರಾಸಾಯನಿಕ ಗೊಬ್ಬರ ಬಳಸಿ ಬೆಳೆ ಬೆಳೆಯುವುದು ಕ್ಯಾನ್ಸರ್ ಬೇಕಾದಂತೆ ಹಾಗೂ ಮಾರಾಟ ಮಾಡುವುದು ಕ್ಯಾನ್ಸರ್ ರೋಗ ಮಾಡಿದಂತೆ ಸಾವಯವ ಕೃಷಿ ಉತ್ತಮ ಆರೋಗ್ಯಕ್ಕೆ ಇಂದಿನ ಅಗತ್ಯವಾಗಿದ್ದು, ನಮ್ಮ ನಾಡಿನ ಪ್ರತಿ ಕೃಷಿಕರ ಹಬ್ಬದ ಹಿಂದೆಯೂ ಒಂದೊಂದು ವೈಜ್ಞಾನಿಕ ಕಾರಣವಿದೆ ಎಂದರು.


### ಒಂದು ವಾರದಿಂದ ವಿಶೇಷ ಕಾರ್ಯಾಚರಣೆ ಅರಣ್ಯ ಇಲಾಖೆಗೆ ಚಿರತೆ ಸೆರೆ

• **ಉದಯವಾಹಿನಿ, ಹುಬ್ಬಳ್ಳಿ**

ಒಂದು ತಿಂಗಳಿನಿಂದ ಕಾಡಿನಿಂದ ನಗರದ ಪ್ರದೇಶಕ್ಕೆ ಬಂದು ಓಡಾಡುತ್ತಿರುವ ಚಿರತೆ ಸಾರ್ವಜನಿಕರಿಗಷ್ಟೇ ಅಲ್ಲದೆ, ಅರಣ್ಯ ಇಲಾಖೆ ಸಿಬ್ಬಂದಿಯ ನಿದ್ದೆಯನ್ನೂ ಕೆಡಿಸಿದೆ. ಕಳೆದ ಒಂದು ವಾರದಿಂದ ವಿಶೇಷ ಕಾರ್ಯಾಚರಣೆ ಪಡೆ ಅದರ ಸೆರೆಗೆ ಹರಸಾಹಸ ಪಡುತ್ತಿದೆ. ಗಾಮನಗಟ್ಟಿ ರಸ್ತೆ ಹಾಗೂ ವಿಮಾನ ನಿಲ್ದಾಣದ ಆವರಣದ ಒಳಗಿನ ಕುರುಚಲು ಪ್ರದೇಶದಲ್ಲಿ ಬೀಡುಬಿಟ್ಟಿದ್ದ ಚಿರತೆ, ಇದೀಗ ನವನಗರದ ಸುತಗಟ್ಟಿ ಪ್ರದೇಶದಲ್ಲಿ ಕಾಣಿಸಿಕೊಂಡಿದೆ. ಆ ಪ್ರದೇಶದ ಬಳಿ ಚಿರತೆ ಓಡಾಡುತ್ತಿದ್ದ ದೃಶ್ಯವನ್ನು ಸ್ಥಳೀಯ ನಿವಾಸಿಯೊಬ್ಬರು ಮೊಬೈಲ್ ಫೋನ್‌ನಲ್ಲಿ ಸೆರೆ ಹಿಡಿದು, ಅರಣ್ಯ ಇಲಾಖೆಗೆ ರವಾನಿಸಿದ್ದಾರೆ. ಸುತಗಟ್ಟಿ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದ್ದು, ಹಗಲಿನ ವೇಳೆಯೂ ಮನೆಯಿಂದ ಹೊರಗೆ ಬರಲು ಭಯಪಡುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಅರಣ್ಯ ಇಲಾಖೆ, ಚಿರತೆ ಕಾಣಿಸಿಕೊಂಡ ಸ್ಥಳದಲ್ಲಿ ಬೋನು ಇಟ್ಟು ಸೆರೆಗೆ ಯೋಜನೆ ರೂಪಿಸಿದ್ದಾರೆ. ಅರವಳಿಕೆ ತಜ್ಞರ ತಂಡವೂ ಕಾರ್ಯಾಚರಣೆಯ ಸನ್ನದ್ಧ ಸ್ಥಿತಿಯಲ್ಲಿದೆ.

ವಿಮಾನ ನಿಲ್ದಾಣದ ಆವರಣದಲ್ಲಿ ಥರ್ಮಲ್ ಡ್ರೋನ್‌ಲ್ಲಿ ಎರಡು ಮೂರು ಬಾರಿ ಸೆರೆಯಾಗಿದ್ದ ಚಿರತೆ, ಡ್ರೋನ್ ಲೈಟ್, ಅದರ ಸದ್ದಿಗೆ ಬೆದರಿ ಎರಡು ದಿನಗಳಿಂದ ಕಾಣಿಸಿಕೊಳ್ಳುತ್ತಿಲ್ಲ. ಬಹುಶಃ ತನ್ನ ಸ್ಥಾನ ಬದಲಿಸಿ, ಸುತಗಟ್ಟಿ ಕಡೆಗೆ ಹೋಗಿರಬಹುದು. ಅದರ ಹೆಜ್ಜೆ ಗುರುತು ಪತ್ತೆ ಹಚ್ಚಿ, ವಿಮಾನ ನಿಲ್ದಾಣದಲ್ಲಿದ್ದ ಚಿರತೆ ಹೆಜ್ಜೆ ಗುರುತಿಗೆ ಹೋಲಿಕೆ ಮಾಡುವ ಕಾರ್ಯ ನಡೆಯುತ್ತಿದೆ ಎಂದು ಸಿಬ್ಬಂದಿಯೊಬ್ಬರು ತಿಳಿಸಿದರು. ಸುತಗಟ್ಟಿಯಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಧಾರವಾಡದ ಅರಣ್ಯ ಇಲಾಖೆ ತಂಡದ ಜೊತೆ ಬೆಂಗಳೂರು, ಮೈಸೂರು ತಂಡವೂ ಕಾರ್ಯಾಚರಣೆ ನಡೆಸುತ್ತಿದೆ. ಸಾರ್ವಜನಿಕರು ಗೊಂದಲಕ್ಕೆ ಒಳಗಾಗದೆ, ಜಾಗೃತೆಯಿಂದ ಇರಬೇಕು. ಒಂಟಿಯಾಗಿ ಓಡಾಡದೆ ಗುಂಪಿನಲ್ಲಿ ಸಂಚರಿಸಬೇಕು. ಸ್ಪೀಕರ್‌ನಲ್ಲಿ ಹಾಡು ಹಾಕಿಕೊಂಡು, ಕೈಯ್ಯಲ್ಲಿ ಬಡಿಗೆ ಹಿಡಿದು ಸಂಚರಿಸಬೇಕು ಎಂದು ಹುಬ್ಬಳ್ಳಿ ವಲಯ ಅರಣ್ಯಾಧಿಕಾರಿ ಆರ್.ಎಸ್.ಉಪ್ಪಾರ ತಿಳಿಸಿದರು.

# ರದ್ದಾಗುತ್ತಾ ಭಾರತದ ಮೇಲಿನ 25% ಸುಂಕ ಮಹತ್ವದ ಸುಳಿವು



**ದಾವೋಸ್:** ರಷ್ಯಾ ಕಚ್ಚಾ ತೈಲ ಖರೀದಿಗೆ ಸಂಬಂಧಿಸಿದಂತೆ ಭಾರತದ ಮೇಲೆ ವಿಧಿಸಲಾಗಿರುವ ಶೇ. 25ರಷ್ಟು ಹೆಚ್ಚುವರಿ ಸುಂಕವನ್ನು ಹಿಂಪಡೆಯುವ ಸಾಧ್ಯತೆಯಿದೆ ಎಂದು ಅಮೆರಿಕದ ಟ್ರೆಷರಿ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಸುಳಿವು ನೀಡಿದ್ದಾರೆ. ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯಲ್ಲಿ ಮಾತನಾಡಿದ ಅವರು, ಅಮೆರಿಕ ವಿಧಿಸಿದ ಸುಂಕದ ಪರಿಣಾಮ ಭಾರತೀಯ ತೈಲ ಸಂಸ್ಕರಣಾಗಾರಗಳು ರಷ್ಯಾದ ತೈಲ ಖರೀದಿಯನ್ನು ಭಾರಿ ಪ್ರಮಾಣದಲ್ಲಿ ತಗ್ಗಿಸಿವೆ. ತೈಲ ಖರೀದಿ ಕುಸಿದಿರುವುದು ನಮಗೆ ಸಿಕ್ಕ ದೊಡ್ಡ ಯಶಸ್ಸು, ಎಂದು ಬಣ್ಣಿಸಿದ್ದಾರೆ. ನಾವು ಭಾರತದ ಮೇಲೆ ಶೇ. 25ರಷ್ಟು ಸುಂಕ ವಿಧಿಸಿದೆವು, ಪರಿಣಾಮ ಖರೀದಿ ಕುಸಿಯಿತು. ಸದ್ಯಕ್ಕೆ ಸುಂಕಗಳು ಜಾರಿಯಲ್ಲಿದ್ದರೂ, ಭಾರತ ತನ್ನ ಇಂಧನ ಮೂಲಗಳನ್ನು ಬದಲಾಯಿಸಿಕೊಂಡರೆ, ರಾಜತಾಂತ್ರಿಕ ಮಾರ್ಗಗಳ ಮೂಲಕ ಈ ಸುಂಕಗಳನ್ನು ತೆಗೆದು ಹಾಕಲು ಅವಕಾಶವಿದೆ, ಎಂದು ಬೆಸೆಂಟ್ ಪೊಲಿಟಿಕೋಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

**ಯುರೋಪ್ ವಿರುದ್ಧ ಕಿಡಿ:** ಇದೇ ವೇಳೆ ಯುರೋಪ್ ರಾಷ್ಟ್ರಗಳ ದ್ವಂದ್ವ ನೀತಿಯ ವಿರುದ್ಧ ಬೆಸೆಂಟ್ ಹರಿಹಾಯ್ದರು. ರಷ್ಯಾದ ಕಚ್ಚಾ ತೈಲವನ್ನು ಭಾರತ ಸಂಸ್ಕರಿಸಿದ ನಂತರ, ಆ ಸಂಸ್ಕರಿಸಿದ ಉತ್ಪನ್ನಗಳನ್ನು ಯುರೋಪ್ ರಾಷ್ಟ್ರಗಳೇ ಖರೀದಿಸುತ್ತಿವೆ ಇದು ವಿಪರ್ಯಾಸ, ಮೂರ್ಖತನದ ಪರಮಾವಧಿ, ಎಂದು ಟೀಕಿಸಿದರು. ಈ ಮೂಲಕ ಯುರೋಪ್ ರಾಷ್ಟ್ರಗಳು ತಮಗೆ ತಾವೇ ಯುದ್ಧ ಸಾರಿಕೊಂಡಂತಿದೆ ಮತ್ತು ಪರೋಕ್ಷವಾಗಿ ರಷ್ಯಾಗೆ ಆರ್ಥಿಕ ಸಹಾಯ ಮಾಡುತ್ತಿವೆ ಎಂದು ಅವರು ಆರೋಪಿಸಿದರು.

**500% ಸುಂಕದ ಭೀತಿ:** ರಷ್ಯಾ ತೈಲ ಖರೀದಿಸುವ ದೇಶಗಳ ಮೇಲೆ ಶೇ. 500ರಷ್ಟು ಸುಂಕ ವಿಧಿಸುವ ಮಸೂದೆಯೊಂದು ಅಮೆರಿಕದ ಕಾಂಗ್ರೆಸ್‌ನಲ್ಲಿ ಚರ್ಚೆಯಲ್ಲಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇದಕ್ಕೆ ಹಸಿರು ನಿಶಾನೆ ತೋರಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಭಾರತದ ವಿದೇಶಾಂಗ ಸಚಿವಾಲಯ, ನಾವು ಈ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇವೆ. ಆದರೆ, 140 ಕೋಟಿ ಜನಸಂಖ್ಯೆಗೆ ಕೈಗೆಟಕುವ ದರದಲ್ಲಿ ಇಂಧನ ಒದಗಿಸುವುದು ನಮ್ಮ ಆದ್ಯತೆ, ಎಂದು ಹೇಳುವ ಮೂಲಕ ತನ್ನ ಇಂಡಿಯಾ ಫಸ್ಟ್ ನೀತಿಗೆ ಬದ್ಧವಾಗಿರುವುದಾಗಿ ಸ್ಪಷ್ಟಪಡಿಸಿದೆ. ಮತ್ತೊಂದೆಡೆ, ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದ ಅಂತಿಮ ಹಂತದಲ್ಲಿದೆ. ಇದನ್ನು ಯುರೋಪಿಯನ್‌ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್‌ಡೆರ್ ಲೇಯನ್ ಅವರು ಎಲ್ಲಾ ಒಪ್ಪಂದಗಳ ತಾಯಿ ಎಂದು ಬಣ್ಣಿಸಿದ್ದಾರೆ. ಈ ಒಪ್ಪಂದಕ್ಕಾಗಿ ಯುರೋಪ್ ಭಾರತದ ಮೇಲೆ ಕಠಿಣ ಸುಂಕ ವಿಧಿಸಲು ಹಿಂದೇಟು ಹಾಕುತ್ತಿದೆ ಎಂದು ಬೆಸೆಂಟ್ ಅಭಿಪ್ರಾಯಪಟ್ಟಿದ್ದಾರೆ. ಒಪ್ಪಂದವನ್ನು ಅಂತಿಮಗೊಳಿಸಲು ವಾನ್ ಡೆರ್ ಲೇಯನ್ ಮುಂದಿನ ವಾರಾಂತ್ಯದಲ್ಲಿ ಹೊಸದಿಲ್ಲಿಗೆ ಬರಲಿದ್ದಾರೆ.

## ಪತ್ನಿ ಲೋಪದಿಂದ ಪತಿ ಸಂಪಾದನೆ ಕಡಿಮೆಯಾದರೆ ಜೀವನಾಂಶ ನೀಡಲು ಬರಲ್ಲ

**ಪ್ರಯಾಗ್‌ರಾಜ್:** ಪತ್ನಿಯೊಬ್ಬಳ ಕೃತ್ಯಗಳು, ಲೋಪಗಳು ಗಂಡನ ಸಂಪಾದನೆಯಲ್ಲಿ ಅಸಮರ್ಥತೆಗೆ ಕಾರಣವಾದರೆ, ಅವಳು ಅವನಿಂದ ಜೀವನಾಂಶವನ್ನು ಪಡೆಯಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ. ಹೋಮಿಯೋಪತಿ ವೈದ್ಯರಾಗಿರುವ ಪತಿಯಿಂದ ಜೀವನಾಂಶವನ್ನು ಕೋರಿ ಅವರ ಪತ್ನಿ ಸಲ್ಲಿಸಿದ್ದ ಪರಿಷ್ಕರಣಾ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಅವರ ಕ್ಲಿನಿಕ್‌ನಲ್ಲಿ ನಡೆದ ಜಗಳದಲ್ಲಿ ಅವರ ಸೋದರ ಮಾವ ಮತ್ತು ಮಾವ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ.ಪತ್ನಿಯ ಜೀವನಾಂಶ ಅರ್ಜಿಯನ್ನು ತಿರಸ್ಕರಿಸಿದ ಖುಷಿನಗರದ ಕೌಟುಂಬಿಕ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದ ನ್ಯಾಯಮೂರ್ತಿ ಲಕ್ಷ್ಮಿ ಕಾಂತ್ ಶುಕ್ಲಾ, ಅಂತಹ ಸನ್ನಿವೇಶದಲ್ಲಿ ಜೀವನಾಂಶ ನೀಡುವುದು ಗಂಭೀರ ಅನ್ಯಾಯಕ್ಕೆ ಕಾರಣವಾಗುತ್ತದೆ ಎಂದು ತಿಳಿಸಿದ್ದಾರೆ.

ವೇದ್ ಪ್ರಕಾಶ್ ಸಿಂಗ್ ಅವರ ಕ್ಲಿನಿಕ್‌ನಲ್ಲಿ ನಡೆದ ಜಗಳದಲ್ಲಿ ಅವರ ಪತ್ನಿಯ ಸಹೋದರ ಮತ್ತು ತಂದೆ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ, ಇದರಿಂದಾಗಿ ಅವರು ಗಳಿಸಲು ಅಥವಾ ಅವಳಿಗೆ ಜೀವನಾಂಶವನ್ನು ಒದಗಿಸಲು ಅಸಮರ್ಥರಾಗಿದ್ದಾರೆ ಅವರ ಬೆನ್ನುಹುರಿಯಲ್ಲಿ ಪೆಲೆಟ್ ಉಳಿದಿದ್ದು, ಅದನ್ನು ತೆಗೆದುಹಾಕಲು ಶಸ್ತ್ರಚಿಕಿತ್ಸೆ ಮಾಡುವುದರಿಂದ ಪಾರ್ಶ್ವವಾಯುವಿಗೆ ಹೆಚ್ಚಿನ ಅಪಾಯವಿದೆ, ಅವರು ಆರಾಮವಾಗಿ ಕುಳಿತುಕೊಳ್ಳಲು ಅಥವಾ ಉದ್ಯೋಗವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂದು ಹೈಕೋರ್ಟ್ ಗಮನಿಸಿದೆ. ಭಾರತೀಯ ಸಮಾಜವು ಸಾಮಾನ್ಯವಾಗಿ ಪತಿ ಕೆಲಸ ಮಾಡಿ ತನ್ನ ಕುಟುಂಬವನ್ನು ನಿರ್ವಹಿಸಬೇಕೆಂದು ನಿರೀಕ್ಷಿಸುತ್ತದೆ, ಆದರೆ ಈ ಪ್ರಕರಣವು ವಿಶಿಷ್ಟ ಸಂದರ್ಭಗಳನ್ನು ಪ್ರಸ್ತುತಪಡಿಸುತ್ತದೆ ಎಂದು ನ್ಯಾಯಮೂರ್ತಿ ಶುಕ್ಲಾ ಅವರ ನ್ಯಾಯಾಲಯವು ಗಮನಿಸಿತು.ತನ್ನ ಹೆಂಡತಿಯನ್ನು ನಿರ್ವಹಿಸುವುದು ಗಂಡನ ಧಾರ್ಮಿಕ ಬಾಧ್ಯತೆಯಾಗಿದ್ದರೂ, ಯಾವುದೇ ನ್ಯಾಯಾಲಯವು ಹೆಂಡತಿಯ ಮೇಲೆ ಅಂತಹ ಸ್ಪಷ್ಟ ಕಾನೂನು ಕರ್ತವ್ಯವನ್ನು ವಿಧಿಸಿಲ್ಲ ಎಂಬುದು ಚೆನ್ನಾಗಿ ಇತ್ಯರ್ಥವಾಗಿದೆ. ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಲ್ಲಿ, ಪತ್ನಿ, ಆಕೆಯ ಕುಟುಂಬ ಸದಸ್ಯರ ನಡವಳಿಕೆಯು ಎದುರು ಪಕ್ಷವನ್ನು ಜೀವನೋಪಾಯವನ್ನು ಗಳಿಸಲು ಅಸಮರ್ಥರನ್ನಾಗಿ ಮಾಡಿದೆ ಎಂದು ಪ್ರಾಥಮಿಕವಾಗಿ ಕಂಡು ಬರುತ್ತದೆ ಎಂದು ನ್ಯಾಯಾಲಯ ಹೇಳಿದೆ.



# ಭಾಷಣ ಓದಲು ರಾಜ್ಯಪಾಲರ ನಿರಾಕರಣೆ

### ರಾಜ್ಯಪಾಲರ ಭಾಷಣದ ಸಂಪ್ರದಾಯಕ್ಕೆ ತಿಲಾಂಜಲಿ ನೀಡಲು ಮುಂದಾದ ಸ್ಟಾಲಿನ್




**ಚೆನ್ನೈ:** ಕರ್ನಾಟಕದಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆಯ ಕುರಿತು ಕರೆಯಲಾದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡಲು ನಿರಾಕರಣೆ ಬೆನ್ನಲ್ಲೇ, ಇದೀಗ ತಮಿಳುನಾಡಿನಲ್ಲೂ ರಾಜ್ಯ ಸರ್ಕಾರ, ರಾಜ್ಯಪಾಲರ ನಡುವೆ ಸಂಘರ್ಷ ಏರ್ಪಟ್ಟಿದೆ. ತಮಿಳುನಾಡು ಸರ್ಕಾರ ಮತ್ತು ರಾಜ್ಯಪಾಲ ಆರ್.ಎನ್. ರವಿ ನಡುವಿನ ಶೀತಲ ಸಮರ ಶನಿವಾರ ವಿಧಾನಸಭೆಯಲ್ಲಿ ಮತ್ತೊಮ್ಮೆ ಸ್ಫೋಟಗೊಂಡಿದೆ.

- ಕರ್ನಾಟಕದ ವಿಬಿ ಜಿ ರಾಮ್ ಜಿ ಕಾಯ್ದೆ ವಿಚಾರ ಮತ್ತು ಕೇರಳದ ವಿದ್ಯಮಾನಗಳನ್ನು ಉಲ್ಲೇಖಿಸಿ ಗೌರ್ನರ್ ವಿರುದ್ಧ ಸ್ಟಾಲಿನ್ ವಾಗ್ದಾಳಿ

ವರ್ಷದ ಮೊದಲ ಅಧಿವೇಶನದಲ್ಲಿ ಸರ್ಕಾರದ ಸಿದ್ಧಪಡಿಸಿದ ಭಾಷಣವನ್ನು ಓದಲು ನಿರಾಕರಿಸಿ ಹೊರನಡೆದ ರಾಜ್ಯಪಾಲರ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ರಾಜ್ಯಪಾಲರ ಭಾಷಣದ ಸಂಪ್ರದಾಯವನ್ನೇ ರದ್ದುಗೊಳಿಸಲು ಸಂವಿಧಾನ ತಿದ್ದುಪಡಿ ತರುವ ಬಗ್ಗೆ ಸಮಾನ ಮನಸ್ಕ ಪಕ್ಷಗಳೊಂದಿಗೆ ಚರ್ಚಿಸುವುದಾಗಿ ಘೋಷಿಸಿದ್ದಾರೆ.

**ಸಂವಿಧಾನದ ಆಶಯಕ್ಕೆ ಧಕ್ಕೆ: ಸ್ಟಾಲಿನ್ ಆಕ್ರೋಶ**
ವಿಧಾನಸಭೆಯಲ್ಲಿ ಮಾತನಾಡಿದ ಸ್ಟಾಲಿನ್, ಕೋಟಿಗಟ್ಟಲೆ ಜನರು ಆರಿಸಿ ಕಳುಹಿಸಿದ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದದೆ ರಾಜ್ಯಪಾಲರು ತಾವು ಅಲಂಕರಿಸಿರುವ ಸಾಂವಿಧಾನಿಕ ಹುದ್ದೆಗೆ ಅವಮಾನ ಮಾಡಿದ್ದಾರೆ. ಹಿಂದೆಂದೂ ತಮಿಳುನಾಡು ಇಂತಹ ರಾಜ್ಯಪಾಲರನ್ನು ಕಂಡಿರಲಿಲ್ಲ. ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದವರೇ ಇಂದು ರಾಜಕೀಯ ಏಜೆಂಟರಂತೆ ವರ್ತಿಸುತ್ತಿದ್ದಾರೆ, ಎಂದು ಕಿಡಿಕಾರಿದರು.

**ಸಂಘರ್ಷಕ್ಕೆ ಕಾರಣವಾದ ಅಂಶಗಳು:** ರಾಜ್ಯ ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಸುಳ್ಳು ಮಾಹಿತಿಗಳಿವೆ ಎಂದು ಆರೋಪಿಸಿ ರಾಜ್ಯಪಾಲರು ಭಾಷಣ ಓದದೆ ಸದನದಿಂದ ಹೊರನಡೆದಿದ್ದರು. ದಲಿತರ ಮೇಲಿನ ದೌರ್ಜನ್ಯ, ಕಾನೂನು ಸುವ್ಯವಸ್ಥೆಯಂತಹ ಪ್ರಮುಖ ವಿಷಯಗಳನ್ನು ಭಾಷಣದಲ್ಲಿ ಕೈಬಿಡಲಾಗಿದೆ ಎಂದು ರಾಜಭವನ ಹೇಳಿಕೆ ನೀಡಿತ್ತು. ರಾಜ್ಯದ ಅಭಿವೃದ್ಧಿ ಮತ್ತು ಸಾಧನೆಗಳನ್ನು ಸಹಿಸಲಾಗದೆ ರಾಜ್ಯಪಾಲರು ಅಡ್ಡಿಪಡಿಸುತ್ತಿದ್ದಾರೆ ಎಂಬುದು ಡಿಎಂಕೆ ಸರ್ಕಾರದ ವಾದ.



**ರಾಷ್ಟ್ರಮಟ್ಟದಲ್ಲಿ ಹೋರಾಟದ ಎಚ್ಚರಿಕೆ:** ಈ ಘಟನೆಯನ್ನು ಕರ್ನಾಟಕ ಮತ್ತು ಕೇರಳದ ವಿದ್ಯಮಾನಗಳಿಗೂ ಹೋಲಿಸಿದ ಸ್ಟಾಲಿನ್, ಮೊದಲು ತಮಿಳುನಾಡು, ನಂತರ ಕೇರಳ, ಈಗ ಕರ್ನಾಟಕ ಬಿಜೆಪಿಯೇತರ ರಾಜ್ಯಗಳಲ್ಲಿ ರಾಜ್ಯಪಾಲರು ಇದೇ ಮಾದರಿಯನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ, ವರ್ಷದ ಮೊದಲ ಅಧಿವೇಶನವನ್ನು ರಾಜ್ಯಪಾಲರ ಭಾಷಣದೊಂದಿಗೆ ಆರಂಭಿಸುವ ಹಳೆಯ ಪದ್ಧತಿಯನ್ನು ಕೈಬಿಡಲು ಸಂವಿಧಾನಕ್ಕೆ ತಿದ್ದುಪಡಿ ತರುವುದು ಅನಿವಾರ್ಯ ಆಗಿದೆ, ಎಂದು ಪ್ರತಿಪಾದಿಸಿದರು. ಅಲ್ಲದೆ, ಹಿಂದಿನ ಎಐಎಡಿಎಂಕೆ ಸರ್ಕಾರದ ಅವಧಿಯಲ್ಲಿ ರಾಜ್ಯದ ಸ್ಥಿತಿ ಹದಗೆಟ್ಟಿತ್ತು, ಆದರೆ ಇಂದು ದ್ರಾವಿಡ ಮಾದರಿಯಿಂದಾಗಿ ತಮಿಳುನಾಡು ಇತರ ರಾಜ್ಯಗಳಿಗಿಂತ ಹೆಚ್ಚು ಅಭಿವೃದ್ಧಿ ಹೊಂದುತ್ತಿದೆ ಎಂದು ಅವರು ಹೆಮ್ಮೆಯಿಂದ ನುಡಿದರು.

### ದೇಶ ಪ್ರೇಮದ ಪಾಠ ನಮಗೆ ಬೇಡ

ರಾಷ್ಟ್ರಗೀತೆಗೆ ಅವಮಾನ ಮಾಡಲಾಗಿದೆ ಎಂಬ ರಾಜ್ಯಪಾಲರ ಆರೋಪಕ್ಕೆ ತಿರುಗೇಟು ನೀಡಿದ ಸಿಎಂ, ನಮಗೆ ದೇಶಪ್ರೇಮದ ಬಗ್ಗೆ ಯಾರೂ ಪಾಠ ಮಾಡಬೇಕಿಲ್ಲ. ತಮಿಳುನಾಡಿನ ಸಂಪ್ರದಾಯದಂತೆ ಅಧಿವೇಶನದ ಆರಂಭದಲ್ಲಿ 'ತಮಿಳು ತಾಯಿ ವಾಳ್ತು', ಅಂತ್ಯದಲ್ಲಿ ರಾಷ್ಟ್ರಗೀತೆ ಹಾಡಲಾಗುತ್ತದೆ. ಇದು ದಶಕಗಳಿಂದ ನಡೆದುಬಂದಿರುವ ಪದ್ಧತಿ. ನಾನು ರಾಷ್ಟ್ರಗೀತೆ ಮತ್ತು ದೇಶದ ಮೇಲೆ ಅಪಾರ ಗೌರವ ಹೊಂದಿರುವ ವ್ಯಕ್ತಿ, ಎಂದು ಸ್ಪಷ್ಟಪಡಿಸಿದರು.

### ಡಿಎಂಕೆ ಮುಕ್ತ ತಮಿಳುನಾಡಿಗೆ ಪ್ರಧಾನಿ ಮೋದಿ ಕರೆ

ಈ ಮಧ್ಯೆ, ಪ್ರಧಾನಿ ನರೇಂದ್ರ ಮೋದಿ ಅವರು ಮಧುರಾಂತಕಂನಲ್ಲಿ ನಡೆದ ಬೃಹತ್ ಎನ್‌ಡಿಎ ರ‍್ಯಾಲಿಯಲ್ಲಿ ಡಿಎಂಕೆ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸುವ ಮೂಲಕ ಚುನಾವಣಾ ರಣಕಹಳೆ ಮೊಳಗಿಸಿದ್ದಾರೆ. ತಮಿಳುನಾಡು ಬದಲಾವಣೆಗೆ ಸಿದ್ಧವಾಗಿದೆ. ಡಿಎಂಕೆ ಆಡಳಿತದಿಂದ ರಾಜ್ಯಕ್ಕೆ ಮುಕ್ತಿ ಬೇಕಿದೆ. ಅಭಿವೃದ್ಧಿಗಾಗಿ ರಾಜ್ಯದಲ್ಲಿ 'ಡಬಲ್ ಇಂಜಿನ್' ಎನ್‌ಡಿಎ ಸರ್ಕಾರ ಬರಬೇಕಿದೆ, ಎಂದು ಮೋದಿ ಹೇಳಿದರು. ತಿರುಪರಂಕುಂದ್ರಂನಲ್ಲಿ ದೀಪ ಹಚ್ಚುವ ವಿಚಾರದಲ್ಲಿ ಡಿಎಂಕೆ ತಮಿಳು ಸಂಸ್ಕೃತಿಗೆ ದ್ರೋಹ ಬಗೆಯುತ್ತಿದೆ ಎಂದು ಆರೋಪಿಸಿದ ಅವರು, ಮತ ಬ್ಯಾಂಕ್ ರಾಜಕಾರಣಕ್ಕಾಗಿ ಡಿಎಂಕೆ ನ್ಯಾಯಾಲಯವನ್ನೂ ಬಿಡುತ್ತಿಲ್ಲ ಎಂದು ಟೀಕಿಸಿದರು.

## ಮಿನಿ ನ್ಯೂಸ್

### ಯೂನಸ್‌ನ ಆಡಳಿತ ಕಿತ್ತೊಗೆಯಿರಿ

**ನವದೆಹಲಿ:** ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರ ನೇತೃತ್ವದ ಸರ್ಕಾರವನ್ನು ದೇಶದ ಜನರು ಕಿತ್ತೊಗೆಯಬೇಕು. ಅವರು ಅಧಿಕಾರದಲ್ಲಿ ಇರುವವರೆಗೆ, ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಭಾರತದಲ್ಲಿ ಆಶ್ರಯ ಪಡೆದಿರುವ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ದೇಶದ ಜನರಿಗೆ ಕರೆ ನೀಡಿದ್ದಾರೆ. 17 ತಿಂಗಳ ಹಿಂದೆ ಢಾಕಾದಿಂದ ಪಲಾಯನ ಮಾಡಿ ಭಾರತದಲ್ಲಿ ಆಶ್ರಯ ಪಡೆದಿರುವ ಹಸೀನಾ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಕರೆ ನೀಡಿದ್ದಾರೆ. ಕಳೆದ ವರ್ಷ ದೇಶದಲ್ಲಿ ಘಟನೆಗಳ ಕುರಿತಂತೆ ವಿಶ್ವಸಂಸ್ಥೆಯು ನೈಜ ನಿಷ್ಪಕ್ಷಪಾತ ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು.

ದೇಶದಲ್ಲಿ ಸಂವಿಧಾನ ಮರುಸ್ಥಾಪಿಸಲು, ಅಲ್ಪಸಂಖ್ಯಾತರ ಹಿತರಕ್ಷಿಸಲು ಜನರು ಧ್ವನಿಯೆತ್ತಬೇಕು ಎಂದು ಕರೆ ನೀಡಿದ್ದಾರೆ. ದೇಶ ಈಗ ತೀವ್ರವಾದಿ ಕೋಮುವಾದಿ ಶಕ್ತಿಗಳ ಮತ್ತು ವಿದೇಶಿ ದುಷ್ಕರ್ಮಿಗಳ ದಾಳಿಯಿಂದ ಧ್ವಂಸಗೊಂಡಿದೆ ಎಂದು ಅವರು ಆರೋಪಿಸಿದ್ದಾರೆ. ಹಸೀನಾ ಅವರು ಮಾತನಾಡಿದ್ದ ಧ್ವನಿಮುದ್ರಿಕೆಯನ್ನು ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಲಾಯಿತು. ಫೆಬ್ರುವರಿ 12ರಂದು ಬಾಂಗ್ಲಾದೇಶದ ಸಂಸತ್ತಿಗೆ ಚುನಾವಣೆ ನಡೆಯಲಿದ್ದು, ಹಸೀನಾ ಅವರ ಅವಾಮಿ ಲೀಗ್ ಪಕ್ಷವನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿಷೇಧಿಸಲಾಗಿದೆ.

### ಹೋಮ್‌ವರ್ಕ್ ಮಾಡದ ಮಗಳನ್ನು ಹೊಡೆದು ಕೊಂದ ತಂದೆ

**ಫರಿದಾಬಾದ್:** ಹೋಮ್ ವರ್ಕ್ ಮಾಡದ ನಾಲ್ಕು ವರ್ಷದ ಮಗಳನ್ನು ತಂದೆಯೇ ಹೊಡೆದು ಕೊಂದಿರುವ ಘಟನೆ ಫರಿದಾಬಾದ್‌ನಲ್ಲಿ ನಡೆದಿದೆ.ಈ ಕುರಿತಂತೆ ಮೃತ ಮಗುವಿನ ತಾಯಿ ನೀಡಿದ ದೂರಿನ ಮೇರೆಗೆ ಕೊಲೆಗಾರ ತಂದೆಯ ವಿರುದ್ಧ ಸೆಕ್ಟರ್ 58 ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಯಿಯ ದೂರಿನ ಆಧಾರದ ಮೇರೆಗೆ ಆರೋಪಿ ಕೃಷ್ಣ ಜೈಸ್ವಾಲ್ (31) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯನ್ನು ನಗರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಒಂದು ದಿನದ ಪೊಲೀಸ್ ಕಸ್ಟಡಿಗೆ ಕಳುಹಿಸಲಾಗಿದೆ. ಉತ್ತರ ಪ್ರದೇಶದ ಸೋನ್‌ಭದ್ರ ಜಿಲ್ಲೆಯ ಖೇರತಿಯಾ ಗ್ರಾಮದ ನಿವಾಸಿ ಜೈಸ್ವಾಲ್, ತನ್ನ ಕುಟುಂಬದೊಂದಿಗೆ ಫರಿದಾಬಾದ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಜೈಸ್ವಾಲ್, ಅವರ ಪತ್ನಿ ಇಬ್ಬರೂ ಖಾಸಗಿ ಕಂಪನಿಗಳಲ್ಲಿ ಉದ್ಯೋಗದಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ತಾಯಿ ಹಗಲಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದಾಗ, ಜೈಸ್ವಾಲ್ ಮಕ್ಕಳನ್ನು ನೋಡಿಕೊಳ್ಳಲು ಮತ್ತು ಮಗಳ ಅಧ್ಯಯನವನ್ನು ನೋಡಿಕೊಳ್ಳಲು ಮನೆಯಲ್ಲಿಯೇ ಇದ್ದರು. ಜೈಸ್ವಾಲ್ ಮಗುವಿಗೆ ಒಂದರಿಂದ 50 ರವರೆಗಿನ ಸಂಖ್ಯೆಗಳನ್ನು ಬರೆಯಲು ಕೇಳಿಕೊಂಡಿದ್ದಾನೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಮಗಳು ಅದನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದಾಗ, ಜೈಸ್ವಾಲ್ ಕೋಪಗೊಂಡು ಆಕೆಯ ಮೇಲೆ ಹಲ್ಲೆ ನಡೆಸಿ ಮಾರಕ ಗಾಯಗಳನ್ನು ಉಂಟುಮಾಡಿದ್ದಾನೆ ಎಂದು ಆರೋಪಿಸಲಾಗಿದೆ. ಸಂಜೆ ತಾಯಿ ಕೆಲಸದಿಂದ ಹಿಂತಿರುಗಿದಾಗ ಮನೆಯಲ್ಲಿ ಬಾಲಕಿ ಮೃತಪಟ್ಟಿರುವುದನ್ನು ಕಂಡುಕೊಂಡಾಗ ಪ್ರಕರಣ ಬೆಳಕಿಗೆ ಬಂದಿತು. ಅವರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳೀಯ ಪೊಲೀಸ್ ಠಾಣೆಯ ತಂಡ ಸ್ಥಳಕ್ಕೆ ತಲುಪಿ ಶವವನ್ನು ವಶಕ್ಕೆ ತೆಗೆದುಕೊಂಡಿತು.ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆಗಾಗಿ ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಮರಣೋತ್ತರ ಪರೀಕ್ಷೆಯ ನಂತರ, ಶವವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ ಎಂದು ಫರಿದಾಬಾದ್ ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

### ಮೂರು ಸ್ಥಳಗಳು ಯುನೆಸ್ಕೊ ಪಾರಂಪರಿಕ ತಾಣಗಳ ಪಟ್ಟಿಗೆ

**ಭುವನೇಶ್ವರ:** ಪ್ರಾಚೀನ ಭಾರತದ ಈಗಿನ ಒಡಿಶಾ ರಾಜ್ಯದ ಭಾಗದಲ್ಲಿ ಬೌದ್ಧ ಪಂಥ ಹುಲುಸಾಗಿ ಬೆಳೆದು ಆ ಪಂಥಕ್ಕೆ ಭದ್ರವಾದ ನೆಲೆ ಒದಗಿಸಿತ್ತು. ಬೌದ್ಧ ಪಂಥದ ಅನೇಕ ಪ್ರಾಚೀನ ಕುರುಹುಗಳು ಒಡಿಶಾದಲ್ಲಿ ಇನ್ನೂ ಸಾಕಷ್ಟು ಸಿಗುತ್ತವೆ. ಈ ಹಿನ್ನೆಲೆಯಲ್ಲಿ ಭಾರತ ಸರ್ಕಾರ ಕಳುಹಿಸಿ ಕೊಟ್ಟಿದ್ದ ಯುನೆಸ್ಕೋ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಒಡಿಶಾದ ಬೌದ್ಧ ನೆಲೆಗಳಾದ ರತ್ನಗಿರಿ, ಉದಯಗಿರಿ, ಲಲಿತಗಿರಿ ಐತಿಹಾಸಿಕ ತಾಣಗಳನ್ನು ಯುನೆಸ್ಕೋ ಸಂಸ್ಥೆ ಶಾರ್ಟ್ ಲಿಸ್ಟ್ ಮಾಡಿದೆ. ಇನ್ನೇನು ಅಧಿಕೃತ ಘೋಷಣೆಯೊಂದೇ ಬಾಕಿ. ಒಡಿಶಾದ ಪ್ರವಾಸೋದ್ಯಮ ಸಚಿವ ಪಾರ್ವತಿ ಪರೀದಾ ಅವರು ಈ ವಿಷಯನ್ನು ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದರು. ಕಳೆದ ಡಿಸೆಂಬರ್‌ನಲ್ಲಿ ಭಾರತ ಸರ್ಕಾರದ ಪ್ರಾಚ್ಯ ಇಲಾಖೆ ಒಡಿಶಾದ ರತ್ನಗಿರಿ, ಉದಯಗಿರಿ ಹಾಗೂ ಲಲಿತಗಿರಿ ಐತಿಹಾಸಿಕ ತಾಣಗಳನ್ನು ಯುನೆಸ್ಕೊ ತಾಣಗಳನ್ನಾಗಿ ಮಾಡಲು ಪಟ್ಟಿ ಕಳುಹಿಸಿಕೊಟ್ಟಿತ್ತು ಎಂದು ತಿಳಿಸಿದ್ದಾರೆ. ಈ ಮೂರು ತಾಣಗಳು ಶಾರ್ಟ್ ಲಿಸ್ಟ್‌ನಲ್ಲಿ ಬಂದಿದ್ದು ತುಂಬಾ ಸಂತೋಷವಾಗಿದೆ. ಇವು ಯುನೆಸ್ಕೊ ಪಾರಂಪರಿಕ ತಾಣಗಳಾಗಿ ಹೊರಹೊಮ್ಮುವುದರಲ್ಲಿ ಸಂದೇಹವಿಲ್ಲ ಎಂದಿದ್ದಾರೆ.

ರತ್ನಗಿರಿ, ಉದಯಗಿರಿ, ಲಲಿತಗಿರಿ ತಾಣಗಳು ಬೌದ್ಧ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿದ್ದು ಭಾರತದ ಪ್ರಮುಖ ಬೌದ್ಧ ನೆಲೆಗಳಾಗಿ ಸ್ಥಾನ ಪಡೆದುಕೊಂಡಿವೆ. ಇವುಗಳನ್ನು ಬೌದ್ಧ ಪರಂಪರೆಯ ಡೈಮಂಡ್ ಟ್ರಯಾಂಗಲ್ ಎಂದು ಕರೆಯಲಾಗುತ್ತದೆ. ಕಟಕ್ ಜಿಲ್ಲೆಯಲ್ಲಿರುವ ರತ್ನಗಿರಿ, ಉದಯಗಿರಿ, ಲಲಿತಗಿರಿ ತಾಣಗಳು ಪ್ರಾಚೀನ ಭಾರತದಲ್ಲಿ ಹೀನಯಾನ, ಮಹಾಯಾನ, ವಜ್ರಯಾನಕ್ಕೆ ನೆಲೆ ಒದಗಿಸಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಹಿಂಸಾತ್ಮಕ ಪ್ರತಿಭಟನೆ: 5 ಸಾವಿರಕ್ಕೂ ಅಧಿಕ ಸಾವು

**ದುಬೈ:** ಇರಾನ್‌ನಲ್ಲಿ ಈಚೆಗೆ ನಡೆದ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ 5,002 ಮಂದಿ ಮೃತಪಟ್ಟಿದ್ದಾರೆ ಎಂದು ಅಮೆರಿಕ ಮೂಲದ ಮಾನವ ಹಕ್ಕುಗಳ ಸಂಘಟನೆ ತಿಳಿಸಿದೆ.ಮೃತರಲ್ಲಿ 4,716 ಪ್ರತಿಭಟನಕಾರರು, 203 ಭದ್ರತಾ ಸಿಬ್ಬಂದಿ, 43 ಮಕ್ಕಳು, 40 ನಾಗರಿಕರು ಸೇರಿದ್ದಾರೆ. 26,800ಕ್ಕೂ ಅಧಿಕ ಮಂದಿಯನ್ನು ಬಂಧಿಸಲಾಗಿದೆ ಎಂದು ಹೇಳಿದೆ.

ಪ್ರತಿಭಟನೆಯಲ್ಲಿ 3,117 ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ಆಡಳಿತವು ಹೇಳಿತ್ತು. ಆದರೆ, ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಆಡಳಿತವು ಕಠಿಣ ಕ್ರಮ ಕೈಗೊಂಡಿದ್ದರಿಂದ ಸಾವಿನ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ಹೇಳಿದ್ದವು. ಇರಾನ್‌ನಲ್ಲಿ ಆರ್ಥಿಕತೆಯ ಕುಸಿತದಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿತ್ತು. ಜ.8ರಿಂದ ಹಲವು ದಿನ ಜನರು ಬೀದಿಗಿಳಿದು ಪ್ರತಿಭಟಿಸಿದ್ದರು.




**ಪಶ್ಚಿಮ ಏಷ್ಯಾದತ್ತ ಅಮೆರಿಕ ಯುದ್ಧ ನೌಕೆ:** ಅಮೆರಿಕ ಸೇನೆಯು ತನ್ನ ಯುದ್ಧ ನೌಕೆಗಳನ್ನು ಪಶ್ಚಿಮ ಏಷ್ಯಾ ಕಡೆಗೆ ಕಳುಹಿಸುತ್ತಿದೆ. ಪ್ರತಿಭಟನಕಾರರನ್ನು ಹತ್ಯೆ ಮಾಡಿದರೆ ಇರಾನ್ ಮೇಲೆ ದಾಳಿ ನಡೆಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದರು.

ಯುದ್ಧ ವಿಮಾನವಾಹನ ನೌಕೆ ಯುಎಸ್‌ಎಸ್ ಅಬ್ರಹಾಂ ಲಿಂಕನ್ ನೇತೃತ್ವದಲ್ಲಿ ಯುದ್ಧ ನೌಕೆಗಳ ತಂಡವು ದಕ್ಷಿಣ ಚೀನಾ ಸಮುದ್ರದಿಂದ ಪ್ರಯಾಣ ಬೆಳೆಸಿದೆ. ಈ ಯುದ್ಧ ನೌಕೆಗಳ ತಂಡವು ಇದೀಗ ಹಿಂದೂ ಮಹಾಸಾಗರದಲ್ಲಿದೆ ಎಂದು ನೌಕಾಪಡೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ನಡೆಸಬೇಕಾಗಿ ಬಂದರೆ, ಸಜ್ಜಾಗುವ ನಿಟ್ಟಿನಲ್ಲಿ ಯುದ್ಧ ನೌಕೆಗಳನ್ನು ಕಳುಹಿಸುತ್ತಿದ್ದೇವೆ. ಆದರೆ ಅವುಗಳನ್ನು ಬಳಸುವ ಅನಿವಾರ್ಯತೆ ಎದುರಾಗದು' ಎಂದು ಟ್ರಂಪ್ ಹೇಳಿದ್ದರು.

**ಟ್ರಂಪ್ ಹೇಳಿಕೆ ಸುಳ್ಳು:** ತಾನು ಮಧ್ಯಪ್ರವೇಶಿಸಿದ್ದರಿಂದ ಇರಾನ್ ಸರ್ಕಾರ 800 ಪ್ರತಿಭಟನಕಾರರ ಮರಣದಂಡನೆ ನಿರ್ಧಾರವನ್ನು ಕೈಬಿಟ್ಟಿದೆ ಎಂಬ ಟ್ರಂಪ್ ಹೇಳಿಕೆಯನ್ನು ಇರಾನ್‌ನ ಪ್ರಾಸಿಕ್ಯೂಟರ್ ಅಲ್ಲಗಳೆದಿದ್ದಾರೆ. ಟ್ರಂಪ್ ಹೇಳಿಕೆ ಸಂಪೂರ್ಣ ಸುಳ್ಳು ಎಂದು ಪ್ರಾಸಿಕ್ಯೂಟರ್ ಮೊಹಮ್ಮದ್ ಮೊವಾಹದಿ ಅವರು ಹೇಳಿರುವುದಾಗಿ ಇರಾನ್ ನ್ಯಾಯಾಂಗದ ಸುದ್ದಿ ಸಂಸ್ಥೆ ಮೀಜಾನ್ ವರದಿ ಮಾಡಿದೆ. ಟ್ರಂಪ್ ನೀಡಿರುವ ಸಂಖ್ಯೆಯಲ್ಲಿ ಯಾವುದೇ ಹುರುಳಿಲ್ಲ, ಇರಾನ್ ನ್ಯಾಯಾಂಗವು ಅಂತಹ ಯಾವುದೇ ನಿರ್ಧಾರ ಮಾಡಿಲ್ಲ ಎಂದಿದ್ದಾರೆ.

## ಸಾಮಾಜಿಕ ಜಾಲತಾಣಗಳ ಮೇಲಿನ ನಿಯಂತ್ರಣಕ್ಕೆ ಕೈಲಾಶ್ ಸತ್ಯಾರ್ಥಿ ಬೆಂಬಲ

**ಹೈದರಾಬಾದ್:** ಸಾಮಾಜಿಕ ಜಾಲತಾಣಗಳನ್ನು ಮಕ್ಕಳು ಹೆಚ್ಚಾಗಿ ಬಳಸುವುದರಿಂದ ಅವರ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಹಾಗಾಗಿ, ಬಳಕೆಯ ಮೇಲೆ ನಿಯಂತ್ರಣ ವಿಧಿಸುವುದಕ್ಕೆ ನನ್ನ ಬೆಂಬಲವಿದೆ ಎಂದು ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಅವರು ಶನಿವಾರ ಹೇಳಿದ್ದಾರೆ. ಕೈಲಾಶ್ ಸತ್ಯಾರ್ಥಿ ಅವರು ಹೈದರಾಬಾದ್‌ನಲ್ಲಿ ಜರುಗುತ್ತಿರುವ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿಯಾಗಿದ್ದರು. ಕಾರ್ಯಕ್ರಮದಲ್ಲಿ ಅವರ ಕರುಣ ದಿ ಪವರ್ ಆಫ್ ಕಂಪ್ಯಾಷನ್' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಆಸ್ಟ್ರೇಲಿಯಾ ಸೇರಿದಂತೆ ಕೆಲವು ದೇಶಗಳು ಮಾಡಿದಂತೆ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳನ್ನು ನಿರ್ಬಂಧಿಸಿ ಎಂದು ನಾನು ಹೇಳುತ್ತಿಲ್ಲ. ಆದರೆ, ಅದರ ಮೇಲೆ ಕೆಲವು ನಿಯಂತ್ರಣಗಳನ್ನು ಹೇರುವುದರಿಂದ ನೈತಿಕ ಮೌಲ್ಯಗಳನ್ನು ಹೊಂದಿರುವ ಸಮುದಾಯವನ್ನು ನಿರ್ಮಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

ಸಾಮಾಜಿಕ ಜಾಲತಾಣಗಳ ಮೂಲಕ ದ್ವೇಷ, ಅಶಾಂತಿ ಉಂಟು ಮಾಡುವ ಕೆಲಸವಾಗುತ್ತಿದೆ. ಸತ್ಯಕ್ಕಿಂತ ಹೆಚ್ಚು ಸುಳ್ಳು ಸುದ್ದಿಗಳು ಅದರಲ್ಲಿ ಹರಡುತ್ತವೆ. ಇದು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದು ತಿಳಿಸಿದ್ದಾರೆ.

## ನ್ಯಾಟೊ ಪಡೆಗೆ ಅವಮಾನ; ಟ್ರಂಪ್ ಕ್ಷಮೆಯಾಚನೆ ಬಯಸಿದ ಬ್ರಿಟನ್ ಪ್ರಧಾನಿ

**ಲಂಡನ್:** ಅಫ್ಘಾನಿಸ್ತಾನದಲ್ಲಿ ನಡೆದ ಕಾರ್ಯಾಚರಣೆಯ ಸಂದರ್ಭದಲ್ಲಿ ನ್ಯಾಟೊ ಮಿತ್ರರಾಷ್ಟ್ರಗಳ ಸೇನಾಪಡೆಯು ಫ್ರಂಟ್ ಲೈನ್‌ನಲ್ಲಿ ಇರಲಿಲ್ಲ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯು ಅತ್ಯಂತ ಅವಮಾನಕರ ಎಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಪ್ರತಿಕ್ರಿಯಿಸಿದ್ದಾರೆ. ನ್ಯಾಟೊ ಪಡೆ ಕುರಿತು ಅಮೆರಿಕ ಅಧ್ಯಕ್ಷರ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಸ್ಟಾರ್ಮರ್, ಟ್ರಂಪ್ ಕ್ಷಮೆಯಾಚನೆ ಬಯಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಸ್ಟಾರ್ಮರ್, 2001ರಲ್ಲಿ ಅಮೆರಿಕದಲ್ಲಿ ನಡೆದ ದಾಳಿಯ ಬಳಿಕ ಅಫ್ಘಾನಿಸ್ತಾನದಲ್ಲಿ ನಡೆದ ಸಂಘರ್ಷದ ಸಂದರ್ಭದಲ್ಲಿ 457 ಬ್ರಿಟಿಷ್ ಯೋಧರು ಮೃತಪಟ್ಟಿದ್ದರು ಎಂಬುದು ಬಹುಶಃ ಟ್ರಂಪ್‌ಗೆ ಗೊತ್ತಿರಲಿಕ್ಕಿಲ್ಲ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಅಫ್ಘಾನಿಸ್ತಾನಕ್ಕೆ ನ್ಯಾಟೊ ಪಡೆಗಳು ಸೈನಿಕರನ್ನು ಮಾತ್ರ ಕಳುಹಿಸಿದ್ದರು. ಆದರೆ ಸೇನೆಯು ಹಿಂದೆಯೇ ಉಳಿದಿತ್ತು. ಮುಂಭಾಗದಲ್ಲಿ ಇರಲಿಲ್ಲ. ಒಂದು ವೇಳೆ ಅಮೆರಿಕ ಬಯಸಿದ್ದರೂ ನ್ಯಾಟೊ ಪಡೆಗಳು ನೆರವಿಗೆ ಬರುತ್ತಿರಲಿಲ್ಲ ಎಂದು ಟ್ರಂಪ್ ಹೇಳಿದ್ದರು. ಇದು ಬ್ರಿಟನ್‌ನಲ್ಲಿ ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.


ಆದರೆ ವಾಸ್ತವಾಗಿ 9/11ರ ದಾಳಿಯ ನಂತರ ಬ್ರಿಟನ್ ಸೇರಿದಂತೆ ಯುರೋಪಿನ ಹಲವು ರಾಷ್ಟ್ರಗಳು ಅಫ್ಘಾನಿಸ್ತಾನದಲ್ಲಿ ಅಮೆರಿಕದ ಕಾರ್ಯಾಚರಣೆಯ ಜೊತೆಗೆ ಕೈಜೋಡಿಸಿಕೊಂಡಿದ್ದವು. ಈ ಸಂಘರ್ಷದಲ್ಲಿ ಬ್ರಿಟನ್ ಸಹಿತ ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಡೆನ್ಮಾರ್ಕ್ ಮತ್ತು ಇತರೆ ದೇಶಗಳ ಯೋಧರು ಮೃತಪಟ್ಟಿದ್ದರು ಎಂದು ಸ್ಟಾರ್ಮರ್ ಹೇಳಿದ್ದಾರೆ.



ಮೊದಲನೆಯದಾಗಿ ಅಫ್ಘಾನಿಸ್ತಾನ ಸಂಘರ್ಷದಲ್ಲಿ ಹುತಾತ್ಮರಾಗಿದ್ದ 457 ಸೈನಿಕರಿಗೆ ಗೌರವ ಸಲ್ಲಿಸುತ್ತೇನೆ. ಅವರ ಧೈರ್ಯ, ದೇಶಕ್ಕಾಗಿ ಮಾಡಿದ ಬಲಿದಾನವನ್ನು ಎಂದಿಗೂ ಮರೆಯುವುದಿಲ್ಲ ಎಂದಿದ್ದಾರೆ. ಈ ಸಂಘರ್ಷಲ್ಲಿ ಹಲವಾರು ಮಂದಿ ಗಾಯಗೊಂಡಿದ್ದರು. ಕೆಲವರಿಗೆ ಬದುಕನ್ನೇ ಬದಲಿಸುವ ರೀತಿಯ ಗಾಯಗಳಾಗಿದ್ದವು. ಹಾಗಾಗಿ ಟ್ರಂಪ್ ಹೇಳಿಕೆ ಅವಮಾನಕರ, ಭೀತಿ ಹುಟ್ಟಿಸುತ್ತಿದೆ. ಅಫ್ಘಾನಿಸ್ತಾನ ಸಂಘರ್ಷದಲ್ಲಿ ಮೃತಪಟ್ಟ, ಗಾಯಗೊಂಡವರ ಕುಟುಂಬದವರಿಗೆ ನೋವನ್ನುಂಟು ಮಾಡಿದೆ ಎಂದು ಹೇಳಿದ್ದಾರೆ. ಏತನ್ಮಧ್ಯೆ ಬ್ರಿಟನ್ ಪ್ರಧಾನಿಯ ಹೇಳಿಕೆಯನ್ನು ಅಮೆರಿಕದ ಟ್ರಂಪ್ ಆಡಳಿತ ತಿರಸ್ಕರಿಸಿದೆ. ನ್ಯಾಟೊಗಾಗಿ ಮಿತ್ರರಾಷ್ಟ್ರಗಳಿಗಿಂತ ಅಮೆರಿಕವೇ ಹೆಚ್ಚಿನದ್ದನ್ನು ಮಾಡಿದೆ ಎಂದು ಶ್ವೇತಭವನದ ವಕ್ತಾರೆ ಟೇಲರ್ ರೋಜರ್ಸ್ ಹೇಳಿದ್ದಾರೆ.

## ಅಮೆರಿಕದಲ್ಲಿ ಗುಂಡಿನ ದಾಳಿ: ಹತ್ಯೆಯಾದ ನಾಲ್ವರೂ ಭಾರತೀಯರೇ ಪ್ರಕರಣಕ್ಕೆ ಟ್ವಿಸ್ಟ್

**ವಾಷಿಂಗ್ಟನ್:** ಶಂಕಿತ ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಅಮೆರಿಕದಲ್ಲಿ ನಾಲ್ವರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಮೃತಪಟ್ಟ ಎಲ್ಲರ ರಾಷ್ಟ್ರೀಯತೆ ಬಹಿರಂಗಗೊಂಡಿಲ್ಲ. ಈ ಪೈಕಿ ಒಬ್ಬರನ್ನು ಭಾರತ ಮೂಲದ ವ್ಯಕ್ತಿ ಎಂದು ಅಟ್ಲಾಂಟಾದ ಭಾರತೀಯ ಕಾನ್ಸುಲೇಟ್ ಜನರಲ್ ಖಚಿಪಡಿಸಿದೆ. ಅಟ್ಲಾಂಟಾದ ಗ್ವಿನ್ನೆಟ್ ಕೌಂಟಿಯಲ್ಲಿ ಈ ದುರಂತ ನಡೆದಿದೆ. ಗುಂಡಿನ ದಾಳಿ ನಡೆಸಿದ ಶಂಕಿತನನ್ನು ವಿಜಯ್ ಕುಮಾರ್ (51) ಎಂದು ಗುರುತಿಸಲಾಗಿದೆ.



ಮೃತರ ಪೈಕಿ ಅವರ ಪತ್ನಿ ಮೀನು ದೊಗ್ರಾ(43) ಸಹ ಸೇರಿದ್ದಾರೆ. ಗೌರವ್ ಕುಮಾರ್(33), ನಿಧಿ ಚಂದರ್(37) ಮತ್ತು ಹರೀಶ್ ಚಂದರ್(38) ಮೃತಪಟ್ಟ ಇತರರು. ಹೆಸರುಗಳನ್ನು ಗಮನಿಸಿದರೆ ಮೃತರೆಲ್ಲರೂ ಭಾರತೀಯರಿರಬಹುದು ಎಂದೆನಿಸುತ್ತದೆ. ಆದರೆ, ಅಧಿಕೃತವಾಗಿ ಒಬ್ಬ ವ್ಯಕ್ತಿಯ ರಾಷ್ಟ್ರೀಯತೆಯನ್ನು ಮಾತ್ರ ಖಚಿತಪಡಿಸಲಾಗಿದೆ ಎಂದು ವರದಿ ತಿಳಿಸಿದೆ.

ಶಂಕಿತ ಕೌಟುಂಬಿಕ ಕಲಹ ಸಂಬಂಧಿತ ಈ ದುರಂತ ಘಟನೆ ಬಗ್ಗೆ ಅತೀವ ದುಃಖ ವ್ಯಕ್ತಪಡಿಸುತ್ತೇವೆ. ಮೃತರಲ್ಲಿ ಭಾರತೀಯ ಪ್ರಜೆ ಸಹ ಇದ್ದಾರೆ. ಗುಂಡಿನ ದಾಳಿ ನಡೆಸಿದವನನ್ನು ಬಂಧಿಸಲಾಗಿದೆ.

ಮೃತರ ಕುಟುಂಬ ಸದಸ್ಯರಿಗೆ ಸಾಧ್ಯವಿರುವ ಎಲ್ಲಾ ನೆರವು ನೀಡಲಾಗುವುದು ಎಂದು ಭಾರತೀಯ ಕಾನ್ಸುಲೇಟ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

**ಪತಿ, ಪತ್ನಿ ನಡುವೆ ವಾಗ್ವಾದ:** ಗ್ವಿನ್ನೆಟ್ ಕೌಂಟಿ ಪೊಲೀಸರ ಪ್ರಕಾರ, ವಿಜಯ್ ಕುಮಾರ್ ಮತ್ತು ಅವರ ಪತ್ನಿ ಮೀನು ದೊಗ್ರಾ, ತಮ್ಮ 12 ವರ್ಷದ ಮಗನ ಜೊತೆ ಬ್ರೂಕ್ ಇವಿ ಕೋರ್ಟ್‌ನಲ್ಲಿರುವ ತಮ್ಮ ಸಂಬಂಧಿಕರಾದ ಗೌರವ್, ನಿಧಿ ಮತ್ತು ಹರೀಶ್ ಅವರ ಮನೆಗೆ ಬಂದಿದ್ದರು. ಅಲ್ಲಿ 7 ಮತ್ತು 8 ಬರ್ಷದ ಇಬ್ಬರು ಮಕ್ಕಳೂ ಇದ್ದರು. ಸಂಬಂಧಿಕರ ಮನೆಗೆ ತೆರಳುವ ಮುನ್ನ ದಂಪತಿ ತಮ್ಮ ಅಟ್ಲಾಂಟಾದ ನಿವಾಸದಲ್ಲಿ ವಾಗ್ವಾದ ನಡೆಸಿದ್ದರು. ಮೃತರ ಪೈಕಿ ಯಾರು ಭಾರತೀಯ ಎಂದು ಕಾನ್ಸುಲೇಟ್ ಖಚಿತವಾಗಿ ಹೇಳಿಲ್ಲ.


**911ಕ್ಕೆ ಕರೆ ಮಾಡಿದ್ದ ಬಾಲಕ:** ಅಪರಾಧ ಕೃತ್ಯದ ಕುರಿತು ಕರೆ ಬಂದ ಬಳಿಕ ಪೊಲೀಸರು ಮನೆಗೆ ಧಾವಿಸಿದಾಗ 7, 9 ಮತ್ತು 12 ವರ್ಷದ ಮೂವರು ಮಕ್ಕಳು ಮನೆಯಲ್ಲಿ ಅಡಗಿ ಕುಳಿತಿದ್ದರು. ನಾಲ್ವರ ಮೃತದೇಹಗಳು ಪತ್ತೆಯಾಗಿದ್ದವು. ಅಲ್ಲಿದ್ದ 12 ವರ್ಷದ ಬಾಲಕ ಪೊಲೀಸರಿಗೆ ಕರೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಕೌಟುಂಬಿಕ ಸಂಬಂಧಿತ ಗಲಭೆ ಇದಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಯಾವುದೇ ಹೆಸರನ್ನು ಉಲ್ಲೇಖಿಸದ ಪೊಲೀಸರು, ಶಂಕಿತನು ಅಪರಾಧದ ಸ್ಥಳದಿಂದ ಸಮೀಪದಲ್ಲೇ ಇದ್ದನು. ಆತನನ್ನು ವಶಕ್ಕೆ ಪಡೆಯಲಾಗಿದೆ ಎಂದು ತಿಳಿಸಿದ್ದಾರೆ.


### 18ನೇ ರೋಜ್‌ಗಾರ್ ಮೇಳ: 61,000 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಿದ ಪ್ರಧಾನಿ ನರೇಂದ್ರ ಮೋದಿ

# 11 ಲಕ್ಷ ಯುವಕರಿಗೆ ಉದ್ಯೋಗ ಭಾಗ್ಯ

**ನವದೆಹಲಿ:** ಯುವಜನತೆಯ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿರುವ ಕೇಂದ್ರ ಸರ್ಕಾರ, ಶನಿವಾರ ನಡೆದ 18ನೇ ಆವೃತ್ತಿಯ ರೋಜ್‌ಗಾರ್ ಮೇಳದಲ್ಲಿ ದೇಶದಾದ್ಯಂತ ಹೊಸದಾಗಿ ಆಯ್ಕೆಯಾದ 61,000ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಈ ಪತ್ರಗಳನ್ನು ಹಸ್ತಾಂತರಿಸಿ ಯುವ ಜನತೆಗೆ ಶುಭ ಕೋರಿದರು. ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗಳು ಕೇಂದ್ರ ಸರ್ಕಾರದ ವಿವಿಧ ಪ್ರಮುಖ ಇಲಾಖೆಗಳಲ್ಲಿ ಸೇವೆ ಸಲ್ಲಿಸಲಿದ್ದು, ಗೃಹ ಸಚಿವಾಲಯದ ಅಡಿಯಲ್ಲಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಕಾನ್‌ಸ್ಟೇಬಲ್‌ಗಳಾಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಲ್ಲಿ ನರ್ಸಿಂಗ್ ಅಧಿಕಾರಿಗಳಾಗಿ ಹಾಗೂ ಹಣಕಾಸು ಸೇವೆಗಳ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಲಿದ್ದಾರೆ. ಇವರ ಜೊತೆಗೆ ರಕ್ಷಣಾ ಸಚಿವಾಲಯ, ಪರಮಾಣು ಇಂಧನ ಇಲಾಖೆ ಹಾಗೂ PGCIL, HPCL ನಂತಹ ಸಾರ್ವಜನಿಕ ವಲಯದ ಉದ್ಯಮಗಳಿಗೂ ನೇಮಕಾತಿ ನಡೆದಿದೆ. ಜೂನಿಯರ್ ಇಂಜಿನಿಯರ್‌ಗಳು, ಸಹಾಯಕ ಪ್ರಾಧ್ಯಾಪಕರು, ವೈಜ್ಞಾನಿಕ ಸಹಾಯಕರು ಮತ್ತು ತಾಂತ್ರಿಕ, ಆಡಳಿತಾತ್ಮಕ ಹುದ್ದೆಗಳು ಸೇರಿದಂತೆ ವೈವಿಧ್ಯಮಯ ಸ್ತರಗಳಲ್ಲಿ ಈ ಅಭ್ಯರ್ಥಿಗಳು ಕಾರ್ಯನಿರ್ವಹಿಸಲಿದ್ದು, ನಾಗರಿಕ ಕೇಂದ್ರಿತ ಆಡಳಿತವನ್ನು ಬಲಪಡಿಸುವ, ಯುವಕರಿಗೆ ಅರ್ಥಪೂರ್ಣ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಈ ಕ್ರಮವು ಅತ್ಯಂತ ಮಹತ್ವದ್ದಾಗಿದೆ.



ಪ್ರಧಾನ ಮಂತ್ರಿ ಕಚೇರಿ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯ ಪ್ರಕಾರ, ಈವರೆಗೆ ವಿವಿಧ ರೋಜ್‌ಗಾರ್ ಮೇಳಗಳ ಮೂಲಕ 11 ಲಕ್ಷಕ್ಕೂ ಅಧಿಕ ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಇಂದಿನ 18ನೇ ಆವೃತ್ತಿಯ ಮೇಳವು ದೇಶದ 45 ವಿವಿಧ ಸ್ಥಳಗಳಲ್ಲಿ ಏಕಕಾಲಕ್ಕೆ ಆಯೋಜನೆಗೊಂಡಿತ್ತು.



### ಜಾಗತಿಕ ಮಟ್ಟದಲ್ಲಿ ಅವಕಾಶ

ಕೇಂದ್ರ ಸರ್ಕಾರವು 18ನೇ ರೋಜ್‌ಗಾರ್ ಮೇಳದಲ್ಲಿ 61,000ಕ್ಕೂ ಹೆಚ್ಚು ಯುವಕರಿಗೆ ನೇಮಕಾತಿ ಪತ್ರಗಳನ್ನು ವಿತರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಅಭ್ಯರ್ಥಿಗಳಿಗೆ ಶುಭ ಹಾರೈಸಿದರು. ಕೇಂದ್ರದ ವಿವಿಧ ಇಲಾಖೆಗಳಲ್ಲಿ ಹೊಸದಾಗಿ ಆಯ್ಕೆಯಾದವರು ಸೇವೆ ಸಲ್ಲಿಸಲಿದ್ದಾರೆ. ಇದುವರೆಗೆ 11 ಲಕ್ಷಕ್ಕೂ ಅಧಿಕ ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ. ಭಾರತೀಯ ಯುವಕರಿಗೆ ಜಾಗತಿಕ ಮಟ್ಟದಲ್ಲಿ ಅವಕಾಶಗಳು ತೆರೆದುಕೊಳ್ಳಲಿವೆ.


**ಜಾಗತಿಕ ಮಟ್ಟದಲ್ಲಿ ಭಾರತೀಯ ಯುವಕರಿಗೆ ಅವಕಾಶ:** ಭಾರತವು ಹಲವು ದೇಶಗಳೊಂದಿಗೆ ವ್ಯಾಪಾರ ಮತ್ತು ಸಂಚಾರ ಒಪ್ಪಂದಗಳಿಗೆ ಸಹಿ ಹಾಕುತ್ತಿರುವುದನ್ನು ಪ್ರಧಾನಿ ಉಲ್ಲೇಖಿಸಿದರು.


ಈ ಒಪ್ಪಂದಗಳು ಭಾರತೀಯ ಯುವ ಕಾರ್ಯಪಡೆಗೆ ಜಾಗತಿಕ ಮಟ್ಟದಲ್ಲಿ ಅಪಾರ ಅವಕಾಶಗಳನ್ನು ತೆರೆಯಲಿವೆ ಎಂದು ಅವರು ಆಶಯ ವ್ಯಕ್ತಪಡಿಸಿದರು. ದೇಶವು ಈಗ ಸುಧಾರಣೆಯ ಎಕ್ಸ್‌ಪ್ರೆಸ್ ಹಾದಿಯಲ್ಲಿದೆ. ಆಡಳಿತವನ್ನು ಸರಳಗೊಳಿಸುವುದು ಮತ್ತು ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸುವುದು ನಮ್ಮ ಮುಖ್ಯ ಉದ್ದೇಶ, ಎಂದು ಮೋದಿ ಹೇಳಿದರು.

### ಯುವಶಕ್ತಿಯೇ ದೇಶದ ಭವಿಷ್ಯ

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಭಾರತವು ವಿಶ್ವದ ಅತಿ ಕಿರಿಯ ರಾಷ್ಟ್ರಗಳಲ್ಲಿ ಒಂದಾಗಿದೆ. ಯುವಜನತೆಗೆ ದೇಶದ ಒಳಗೆ ಮಾತ್ರವಲ್ಲದೆ, ವಿದೇಶಗಳಲ್ಲೂ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ, ಎಂದರು. ಕಳೆದ ಕೆಲವು ವರ್ಷಗಳಿಂದ ರೋಜ್‌ಗಾರ್ ಮೇಳ ಒಂದು ಸಾಂಸ್ಥಿಕ ವ್ಯವಸ್ಥೆಯಾಗಿ ಬೆಳೆದಿದ್ದು, ಇದರ ಮೂಲಕ ಲಕ್ಷಾಂತರ ಯುವಕರು ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

## 45 ಟೈಟಲ್ ಕೊಟ್ಟಿದ್ದು ನಾನು, ಸೌಜನ್ಯಕ್ಕೂ ನನ್ನ ಹೆಸರು ಹೇಳಿಲ್ಲ





ಅರ್ಜುನ್ ಜನ್ಯ ನಿರ್ದೇಶನದ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ ಶೆಟ್ಟಿ ನಟನೆಯ '45' ಸಿನಿಮಾ ಇತ್ತೀಚೆಗೆ ರಿಲೀಸ್ ಆಗಿ ಕೆಲವರಿಂದ ಮೆಚ್ಚುಗೆ ಪಡೆಯಿತು. ಈಗ ಚಿತ್ರ ಒಟಿಟಿಗೂ ಬಂದಿದೆ. '45' ಅನ್ನೋದು ಸಿನಿಮಾದ ಕಥೆಗೆ ಹೆಚ್ಚು ಸೂಕ್ತ. ಹೀಗಾಗಿ, ಈ ಟೈಟಲ್ ಇಡಲಾಗಿದೆ. ಈಗ ಟೈಟಲ್ ವಿಷಯಕ್ಕೆ ಸಂಬಂಧಿಸಿದಂತೆ ಸಿನಿಮಾ ಹಾಗೂ ಕಿರುತೆರೆ ಕಲಾವಿದ ಮಿತ್ರ ಮಾತನಾಡಿದ್ದಾರೆ. 'ಟೈಟಲ್ ನನ್ನದಾಗಿತ್ತು, ಅವರಿಗೆ ನೀಡಿದ್ದೇನೆ' ಎಂದಿದ್ದಾರೆ. ಸಿನಿಮಾ ವೀಕ್ಷಿಸಿದವರಿಗೆ '45' ಎಂಬ ಟೈಟಲ್ ಯಾಕೆ ಇಡಲಾಗಿದೆ ಎಂಬುದು ಮನದಟ್ಟಾಗುತ್ತದೆ. ಈ ಟೈಟಲ್ ಇಡೋಣ ಎಂದು ನಿರ್ದೇಶಕರು ಹಾಗೂ ನಿರ್ಮಾಪಕರು ನಿರ್ಧರಿಸಿದಾಗ ನಟ ಮಿತ್ರ ಅವರು ಈ ಶೀರ್ಷಿಕೆ ನೋಂದಣಿ ಮಾಡಿಸಿದ ವಿಷಯ ಗೊತ್ತಾಗಿದೆ.

ಹೀಗಾಗಿ, ಟೈಟಲ್‌ನ ಅವರ ಬಳಿ ಕೇಳಿ ಪಡೆದರು ನಿರ್ಮಾಪಕ ರಮೇಶ್ ರೆಡ್ಡಿ. ಸೌಜನ್ಯಕ್ಕೆ ಒಮ್ಮೆ ಹೆಸರನ್ನಾದರೂ ಹೇಳಬಹುದಿತ್ತು ಎಂಬುದು ಮಿತ್ರನ ಅಭಿಪ್ರಾಯ. ಕನ್ನಡ ಪಿಚ್ಚರ್‌ಗೆ ನೀಡಿದ ಸಂದರ್ಶನದಲ್ಲಿ ಮಿತ್ರ ಮಾತನಾಡಿದ್ದಾರೆ. '45 ಟೈಟಲ್ ಕೊಟ್ಟಿದ್ದೇ ನಾನು. ನನ್ನ ಬ್ಯಾನರ್ ಅಡಿಯಲ್ಲಿ ಸಿನಿಮಾ ನೋಂದಣಿ ಮಾಡಿಸಿದ್ದೆ. ರಮೇಶ್ ರೆಡ್ಡಿ ಅವರು ಕರೆ ಮಾಡಿದರು. ನಮ್ಮ ಕಥೆಗೆ ಈ ಶೀರ್ಷಿಕೆ ಹೊಂದಾಣಿಕೆ ಆಗುತ್ತಿದೆ, ಟೈಟಲ್ ಬೇಕಿತ್ತು. ಅರ್ಜುನ್ ಜನ್ಯ ನಿರ್ದೇಶನ ಇದೆ ಎಂದು ವಿವರಿಸಿದರು' ಎಂದಿದ್ದಾರೆ ಮಿತ್ರ. ಹಣ ನೀಡೋಕೆ ಬಂದರು. ನಾನು ಬೇಡ ಎಂದೆ. ಥ್ಯಾಂಕ್ಸ್ ಕಾರ್ಡ್ ಹಾಕ್ತಾರೆ ಅಥವಾ ಸಂದರ್ಶನದಲ್ಲಿ ಹೇಳ್ತಾರೆ ಎಂದುಕೊಂಡಿದ್ದೆ. ಕೊನೆಪಕ್ಷ ಅರ್ಜುನ್ ಜನ್ಯ ನೆನಪಿಸಿಕೊಳ್ಳುತ್ತಾರೆ ಎಂದುಕೊಂಡಿದ್ದೆ. ಆದರೆ, ಏನೂ ಮಾಡಿಲ್ಲ. ಪ್ರೀತಿಯಿಂದ ಟೈಟಲ್ ಬಿಟ್ಟು ಕೊಟ್ಟಿದ್ದೇನೆ, ಹಣ ನಿರೀಕ್ಷಿಸಿಲ್ಲ. ಬ್ಯುಸಿ ಇಂದ ಮರೆತು ಹೋಗಿರಬಹುದು. ಸೇವೆನ ಪರಿಗಣಿಸಬೇಕಿತ್ತು ಎಂಬುದು ನನ್ನ ಅಭಿಪ್ರಾಯ' ಎನ್ನುತ್ತಾರೆ ಮಿತ್ರ. '45' ಸಿನಿಮಾಡಿ. 25ರಂದು ಥಿಯೇಟರ್‌ಗೆ ಬಂತು. ಈಗ ಜನವರಿ 23ರಂದು ಜೀ 5 ಅಲ್ಲಿ ಪ್ರಸಾರ ಆರಂಭಿಸಿದೆ.

## ಅಂದುಕೊಂಡಿದ್ದಕ್ಕಿಂತ ಡಬಲ್ ಸಂಪಾದಿಸಿದ ಗಿಲ್ಲಿ ನಟ



ಬಿಗ್ ಬಾಸ್ ಶೋ ಗಿಲ್ಲಿ ಅವರ ಬದುಕನ್ನೇ ಬದಲಾಯಿಸಿತು. ಚಿನ್ನದ ಅಂಗಡಿ ಉದ್ಘಾಟನೆಗೆ ಹೋದಾಗ ಅಭಿಮಾನಿಗಳ ಪ್ರೀತಿಯಿಂದ ಜನಸಾಗರವೇ ಸೇರಿತ್ತು. ಈ ಅಗಾಧ ಜನಪ್ರಿಯತೆ ಅವರಿಗೆ ಅನಿರೀಕ್ಷಿತವಾಗಿದ್ದು, ಬಿಗ್ ಬಾಸ್ ನಂತರ ಅವರ ಯಶಸ್ಸು ದ್ವಿಗುಣಗೊಂಡಿದೆ.

ಒಂದು ಶೋ ಎಷ್ಟು ದೊಡ್ಡ ಮಟ್ಟದಲ್ಲಿ ಜನಪ್ರಿಯತೆ ತಂದುಕೊಡಬಹುದು ಎಂಬುದಕ್ಕೆ ಬಿಗ್ ಬಾಸ್ ಶೋ ಉತ್ತಮ ಉದಾಹರಣೆ. ಗಿಲ್ಲಿ ನಟ ಅವರು ಅಪಾರವಾದ ಜನಪ್ರಿಯತೆ ಸಂಪಾದಿಸಿದ್ದಾರೆ. ಹೋದಲ್ಲಿ ಬಂದಲ್ಲಿ ಜನರು ಮುತ್ತಿಕೊಳ್ಳುತ್ತಿದ್ದಾರೆ. ಶುಕ್ರವಾರ ಬೆಂಗಳೂರಿನಲ್ಲಿ ಚಿನ್ನದ ಅಂಗಡಿ ಉದ್ಘಾಟನೆಗೆ ಹೋದಾಗ ಅವರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿದ್ದರು. ಇಷ್ಟೆಲ್ಲ ಜನಪ್ರಿಯತೆ ಮಧ್ಯೆ ಗಿಲ್ಲಿ ನಟ ಅವರು ಅಂದುಕೊಂಡಿದ್ದಕ್ಕಿಂತ ದುಪ್ಪಟ್ಟು ಸಂಪಾದನೆ ಮಾಡಿದ್ದಾರೆ. ಗಿಲ್ಲಿ ಅವರು ಹಲವು ರಿಯಾಲಿಟಿ ಶೋಗಳನ್ನು ಮಾಡಿ ಬಂದವರು. ಅವರು 5-6 ಶೋ ಮಾಡಿದ್ದಾಗಿ ಬಿಗ್ ಬಾಸ್ ಮನೆಯಲ್ಲಿ ಹೇಳಿಕೊಂಡಿದ್ದರು. ಯಾವ ಶೋನಲ್ಲೂ ವಿನ್ನರ್ ಆಗೋಕೆ ಅವರಿಂದ ಸಾಧ್ಯವೇ ಆಗಿಲ್ಲ. ಜೊತೆಗೆ ಅಂದುಕೊಂಡ ರೀತಿಯಲ್ಲಿ ಹಿಂಬಾಲಕರನ್ನು ಸಂಪಾದಿಸಲು ಅವರ ಬಳಿ ಸಾಧ್ಯವಾಗಿರಲಿಲ್ಲ. ಆದರೆ, ಬಿಗ್ ಬಾಸ್ ಶೋ ಎಲ್ಲವನ್ನೂ ಬದಲಿಸಿತು.

ಬಿಗ್ ಬಾಸ್‌ಗೆ ಹೋಗುವಾಗ ಗಿಲ್ಲಿ ನಟನಿಗೆ ಇನ್‌ಸ್ಟಾಗ್ರಾಮ್‌ನಲ್ಲಿ ಇದ್ದಿದ್ದು ಕೇವಲ 1 ಲಕ್ಷ ಹಿಂಬಾಲಕರು. ಬಿಗ್ ಬಾಸ್ ಶೋ ಮುಗಿಯಲು ಇನ್ನೇನು ತಿಂಗಳು ಬಾಕಿ ಇದೆ ಎಂದಾಗ ಗಿಲ್ಲಿ ಒಂದು ಮಾತನ್ನು ಹೇಳಿದ್ದರು. 'ಕಾವು (ಕಾವ್ಯಾ) ಇನ್‌ಸ್ಟಾದಲ್ಲಿ ಒಂದು ಮಿಲಿಯನ್ ಫಾಲೋವರ್ಸ್ ಆದ್ರೆ ಸಾಕಿತ್ತು' ಎಂದಿದ್ದರು. ಇದಾದ ಬಳಿಕ ಗಿಲ್ಲಿಯ ಹಿಂಬಾಲಕರ ಸಂಖ್ಯೆ ಮಿತಿಮೀರಿ ಏರಿಕೆ ಆಯಿತು. ಗಿಲ್ಲಿನ ಇನ್‌ಸ್ಟಾದಲ್ಲಿ ಫಾಲೋ ಮಾಡುವಂತೆ ಫ್ಯಾನ್ಸ್ ಕರೆಕೊಟ್ಟರು. ಇದಾದ ಬಳಿಕ ಅವರ ಇನ್‌ಸ್ಟಾ ಹಿಂಬಾಲಕರ ಸಂಖ್ಯೆ ಹೆಚ್ಚುತ್ತಾ ಹೋದವು. ಫಿನಾಲೆ ದಿನ ಎನ್ನುವಾಗ 1.2 ಮಿಲಿಯನ್ ಹಿಂಬಾಲಕರನ್ನು ಅವರು ಸಂಪಾದಿಸಿದ್ದರು. ಈಗ ಆ ಸಂಖ್ಯೆ 2 ಮಿಲಿಯನ್ ತಲುಪಿದೆ.

20 ಲಕ್ಷ ಹಿಂಬಾಲಕರನ್ನು ಸಂಪಾದಿಸಿ ಅವರು ದಾಖಲೆ ಬರೆದಿದ್ದಾರೆ. ಅವರು ಅಂದುಕೊಂಡಿದ್ದು 10 ಲಕ್ಷ, ಸಿಕ್ಕಿದ್ದು ಮಾತ್ರ 20 ಲಕ್ಷ. ಸ್ಪರ್ಧಿಸಿದವರ ಪೈಕಿ ನಿವೇದಿತಾ ಗೌಡ ಹೆಚ್ಚು ಹಿಂಬಾಲಕರನ್ನು ಹೊಂದಿದ್ದಾರೆ. ಅವರನ್ನು ಗಿಲ್ಲಿ ಹಿಂದಿಕ್ಕೋ ಸಾಧ್ಯತೆ ದಟ್ಟವಾಗಿದೆ. ಗಿಲ್ಲಿಗೆ ಇನ್ನೂ ಈ ಜನಪ್ರಿಯತೆಯನ್ನು ಅರಗಿಸಿಕೊಳ್ಳೋಕೆ ಸಾಧ್ಯವಾಗುತ್ತಿಲ್ಲ. ಅವರು ರಿಯಾಲಿಟಿನ ಒಪ್ಪಿಕೊಳ್ಳಲು ಸಾಕಷ್ಟು ಕಷ್ಟಪಡುತ್ತಿದ್ದಾರೆ.

## ರಾಜಾಸಾಬ್ ಚಿತ್ರದಿಂದ ನಿರ್ಮಾಪಕರಿಗೆ ನಷ್ಟ



ದೊಡ್ಡ ಸೂಪರ್‌ಸ್ಟಾರ್ ನಿರ್ಮಾಣಕ್ಕೆ ಸಾಕಷ್ಟು ಹಣ ಖರ್ಚು ಮಾಡಿ ಮಾಡಿದ ಚಿತ್ರ, ಬಾಕ್ಸ್ ಆಫೀಸ್‌ನಲ್ಲಿ ಬ್ಲಾಕ್‌ಬಸ್ಟರ್ ಆಗುವುದಿಲ್ಲ. ಕಥೆಯೇ ಚಿತ್ರದ ಮೂಲ ಮತ್ತು ಕಥೆಯ ಬಲದ ಮೇಲೆ ಮಾತ್ರ ಚಿತ್ರ ಸೂಪರ್‌ಹಿಟ್ ಆಗಬಹುದು. ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಬಿಡುಗಡೆಯಾದ ದೊಡ್ಡ ಬಜೆಟ್ ಚಿತ್ರ ಈಗ ಸಂಕಷ್ಟದಲ್ಲಿದೆ. ಅದುವೇ ಪ್ರಭಾಸ್ ಅವರ 'ದಿ ರಾಜಾ ಸಾಬ್'.

ಈ ಚಿತ್ರ ಅತಿದೊಡ್ಡ ಫ್ಲಾಪ್ ಚಿತ್ರವಾಗಿದೆ. ಪ್ರಭಾಸ್ ಅವರ ಸ್ಟಾರ್‌ಡಮ್ ಕಾರಣಕ್ಕೆ ಸಿನಿಮಾ ಒಳ್ಳೆಯ ಓಪನಿಂಗ್ ಪಡೆಯಿತು. ಆದರೆ ಈ ಆವೇಗವನ್ನು ಕಾಯ್ದುಕೊಳ್ಳಲು ಸಾಧ್ಯವಾಗಲಿಲ್ಲ. ಈಗ, ಬಿಡುಗಡೆಯಾದ ಹನ್ನೆರಡನೇ ದಿನದಂದು, ಕೆಲವು ಲಕ್ಷ ರೂಪಾಯಿಗಳನ್ನು ಗಳಿಸುವುದು ಕಷ್ಟಕರವಾಗಿದೆ. 400 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ನಿರ್ಮಿಸಲಾದ ಈ ಚಿತ್ರವು ಇಲ್ಲಿಯವರೆಗೆ ಶೇಕಡಾ 64ಕ್ಕಿಂತ ಹೆಚ್ಚು ನಷ್ಟವನ್ನು ಕಂಡಿದೆ. ಪ್ರಭಾಸ್ ಅವರ 'ದಿ ರಾಜಾ ಸಾಬ್' ಚಿತ್ರ ನಿರ್ಮಾಪಕರ ಎಲ್ಲಾ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ಬಿಡುಗಡೆಗೂ ಮುನ್ನ ಈ ಚಿತ್ರದ ಬಗ್ಗೆ ತುಂಬಾ ಚರ್ಚೆ ನಡೆದಿದ್ದು, ಅದು ಎಲ್ಲಾ ಬಾಕ್ಸ್ ಆಫೀಸ್ ದಾಖಲೆಗಳನ್ನು ಮುರಿಯುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಚಿತ್ರ ಥಿಯೇಟರ್‌ಗಳಲ್ಲಿ ಬಿಡುಗಡೆಯಾದ ತಕ್ಷಣ ಚಿತ್ರದ ಭವಿಷ್ಯ ಸ್ಪಷ್ಟವಾಯಿತು. ಮೊದಲು, ಚಲನಚಿತ್ರ ವಿಮರ್ಶಕರು ಅದರ ಬಗ್ಗೆ ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು.


## ತಂದೆ ಆಗುತ್ತಿದ್ದಾರೆ ಡಾಲಿ ಧನಂಜಯ್: ಸಿಹಿ ಸುದ್ದಿ ಹಂಚಿಕೊಂಡ ನಟ



ಡಾಲಿ ಧನಂಜಯ್ ಕನ್ನಡ ಚಿತ್ರರಂಗದ ಜನಪ್ರಿಯ ನಟ, ನಿರ್ಮಾಪಕ. ತಮ್ಮ ನಟನೆ ಮಾತ್ರವಲ್ಲದೆ ನಿರ್ಮಾಣದಿಂದಲೂ ಅದ್ಭುತ ಸಿನಿಮಾಗಳನ್ನು ಚಿತ್ರರಂಗಕ್ಕೆ ನೀಡುತ್ತಾ ಬರುತ್ತಿದ್ದಾರೆ. ಡಾಲಿ ಧನಂಜಯ್ ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ ವೈದ್ಯೆ ಧನ್ಯತಾ ಅವರೊಟ್ಟಿಗೆ ಅದ್ದೂರಿಯಾಗಿ ವಿವಾಹವಾದರು. ಇದೀಗ ಡಾಲಿ ಧನಂಜಯ್ ಮತ್ತು ಧನ್ಯತಾ ಪೋಷಕರಾಗುತ್ತಿದ್ದು, ಖುಷಿಯ ವಿಷಯವನ್ನು ಡಾಲಿ ಧನಂಜಯ್ ಹಂಚಿಕೊಂಡಿದ್ದಾರೆ. ಇತ್ತೀಚೆಗಷ್ಟೆ ಡಾಲಿ ಧನಂಜಯ್ ಅವರು ಮಾಧ್ಯಮವೊಂದರ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಈ ವೇಳೆ ಡಾಲಿ ಅವರು ತಮ್ಮ ಕುಟುಂಬಕ್ಕೆ ಇನ್ನೊಂದು ಜೀವ ಸೇರ್ಪಡೆ ಆಗುತ್ತಿರುವ ಸುದ್ದಿಯನ್ನು ಹಂಚಿಕೊಂಡಿದ್ದಾರೆ. ಆ ಮೂಲಕ ತಾವು ತಂದೆ ಆಗುತ್ತಿರುವುದಾಗಿ ಡಾಲಿ ಧನಂಜಯ್ ಹೇಳಿದ್ದಾರೆ.

ಡಾಲಿ ಧನಂಜಯ್ ಪತ್ನಿ ಧನ್ಯತಾ ಅವರು ವೈದ್ಯೆಯಾಗಿದ್ದು, ಫೆಬ್ರವರಿ 16 ರಂದು ಡಾಲಿ ಧನಂಜಯ್ ಮತ್ತು ಧನ್ಯತಾ ಅವರು ಮೈಸೂರಿನಲ್ಲಿ ಬಲು ಅದ್ದೂರಿಯಾಗಿ ವಿವಾಹವಾಗಿದ್ದರು.

## ಗುಟ್ಟಾಗಿ ಮದ್ವೆಯಾದ್ರಾ ಸಲ್ಮಾನ್ ಖಾನ್?



ಬಾಲಿವುಡ್‌ನ ಮೋಸ್ಟ್ ಎಲಿಜಬಲ್ ಬ್ಯಾಚುಲರ್ ಅಂದ್ರೆ ಮೊದಲಿಗೆ ನೆನಪಾಗುವುದೇ ಸಲ್ಮಾನ್ ಖಾನ್ ಆದ್ರೆ ಈಗಾಗಲೇ ಅವರಿಗೆ ಅದೆಷ್ಟೋ ಬಾರಿ ಮದುವೆ ಆಗಿದೆ. ಏನಪ್ಪಾ ಇದು ಬ್ಯಾಚುಲರ್ ಅಂತಾರೆ ಮತ್ತೆ ಮದುವೆ ಆಗಿದೆ ಅಂತಾರೆ ಅಂತ ಕನ್ಫ್ಯೂಸ್ ಆಗ್ಬೇಡಿ. ಈಗಾಗಲೇ ಅದೆಷ್ಟೋ ಬಾರಿ ಸಲ್ಲು ಜೊತೆ ಕಾಣಿಸಿಕೊಂಡ ಸುಂದರಿಯರು ಸಲ್ಮಾನ್ ಖಾನ್ ಅವರನ್ನು ಮದುವೆ ಆಗಲಿದ್ದಾರೆ ಎಂಬ ಗಾಸಿಪ್ ಗಳು ಹರಿದಾಡುತ್ತಲೇ ಇತ್ತು. ಆದ್ರೆ ಅದು ಯಾವುದು ನಿಜ ಆಗಲೇ ಇಲ್ಲ. ಇದೀಗ ಸಲ್ಮಾನ್ ಖಾನ್ ಜೊತೆಗೆ ಮತ್ತೊಂದು ಹುಡುಗಿ ಫೋಟೋ ಬಹಳಷ್ಟು ಸದ್ದು ಮಾಡುತ್ತಿದೆ. ಅದೂ ಕೂಡ ಸಲ್ಮಾನ್ ಖಾನ್ ತೋಟದ ಮನೆಯಲ್ಲಿ. ಹೌದು ಇತ್ತೀಚಿನ ದಿನಗಳಲ್ಲಿ ಸಲ್ಮಾನ್ ಖಾನ್ ಮತ್ತು ಅವರ ಪನ್ವೇಲ್ ಫಾರ್ಮ್‌ಹೌಸ್ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಚರ್ಚೆ ನಡೆಯುತ್ತಿದೆ. ಕಾರಣ, ಸಲ್ಮಾನ್ ಖಾನ್ ಯುವತಿಯೊಂದಿಗೆ ಇರುವ ವೈರಲ್ ಫೋಟೋಗಳು. ಅಷ್ಟೇ ಅಲ್ಲದೆ ಈ ವೈರಲ್ ಪೋಸ್ಟ್‌ಗಳು ಆನ್‌ಲೈನ್‌ನಲ್ಲಿ ಬಹಳಷ್ಟು ಚರ್ಚೆಗೆ ಕಾರಣವಾಗಿದೆ. ಕೆಲವರು ಮದುವೆಯ ಬಗ್ಗೆ ಮಾಡುತಿದ್ದರೆ, ಇನ್ನು ಕೆಲವರು ಡೇಟಿಂಗ್ ಮತ್ತು ಫಾರ್ಮ್‌ಹೌಸ್ ಬಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಚರ್ಚೆಗಳಲ್ಲಿ ಹೆಚ್ಚು ಗಮನ ಸೆಳೆದ ಹೆಸರು ಕರಿಷ್ಮಾ ಹಜಾರಿಕಾ. ಸಾಮಾಜಿಕ ಮಾಧ್ಯಮದಲ್ಲಿ ಸುಮಾರು 400,000 ಫಾಲೋವರ್ಸ್ ಹೊಂದಿರುವ ಕರಿಷ್ಮಾ ಹಜಾರಿಕಾ ಬಗ್ಗೆ ನಿರಂತರವಾಗಿ ಪ್ರಶ್ನೆಗಳನ್ನು ಕೇಳಿಬರುತ್ತಿದೆ.

## ಐಪಿಎಲ್‌ಗೆ ತಯಾರಿ ಶುರು ಮಾಡಿದ ಧೋನಿ




2026 ರ ಐಪಿಎಲ್‌ಗೆ ಅಭಿಮಾನಿಗಳು ಕೌಂಟ್‌ಡೌನ್ ಪ್ರಾರಂಭಿಸಿದ್ದಾರೆ. ಮಾರ್ಚ್ ತಿಂಗಳಲ್ಲಿ ಈ ಮಿಲಿಯನ್ ಡಾಲರ್ ಟೂರ್ನಿಗೆ ಚಾಲನೆ ಸಿಗಲಿದೆ. ಹೀಗಾಗಿ ಎಲ್ಲಾ ಫ್ರಾಂಚೈಸಿಗಳು ಕೂಡ ತಮ್ಮ ತಯಾರಿಯನ್ನು ಆರಂಭಿಸಲು ಸಜ್ಜಾಗಿವೆ. ಕಳೆದ ಕೆಲವು ಆವೃತ್ತಿಗಳಿಂದ ಉತ್ತಮ ಪ್ರದರ್ಶನ ನೀಡುವಲ್ಲಿ ಎಡವಿರುವ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಈ ಬಾರಿ ಯುವ ಪಡೆಯೊಂದಿಗೆ ಕಣಕ್ಕಿಳಿಯಲು ಸಜ್ಜಾಗಿದೆ. ಇದರೊಂದಿಗೆ ಕೊನೆಯ ಐಪಿಎಲ್ ಆಡುತ್ತಿರುವ ಎಂಎಸ್ ಧೋನಿ ಕೂಡ ವರ್ಷದ ಬಳಿಕ ಮೈದಾನಕ್ಕೆ ಮರಳಲು ಸಜ್ಜಾಗಿದ್ದು, ತಯಾರಿಯನ್ನು ಶುರು ಮಾಡಿದ್ದಾರೆ.

ವಾಸ್ತವವಾಗಿ ಧೋನಿ ತಮ್ಮ ತವರು ರಾಂಚಿಯಲ್ಲಿ 2026 ರ ಐಪಿಎಲ್ ಆವೃತ್ತಿಗೆ ಸಿದ್ಧತೆಗಳನ್ನು ಪ್ರಾರಂಭಿಸಿದ್ದಾರೆ. ಕಳೆದ ಕೆಲವು ಆವೃತ್ತಿಗಳಿಂದ, ಧೋನಿ ಐಪಿಎಲ್‌ಗೆ ಮರಳುವ ಬಗ್ಗೆ ನಿರಂತರ ಊಹಾಪೋಹಗಳು ಮತ್ತು ವದಂತಿಗಳು ಹಬ್ಬಿದ್ದವು. ಕಳೆದ ವರ್ಷ ಧೋನಿ ತಂಡದ ನಾಯಕತ್ವ ವಹಿಸಿಕೊಂಡು ಆವೃತ್ತಿಯನ್ನು ಮುಗಿಸಿದಾಗಲೂ ಇದೇ ಪರಿಸ್ಥಿತಿ ಮುಂದುವರಿದಿತ್ತು. ಆದಾಗ್ಯೂ, ಚೆನ್ನೈ ಸೂಪರ್ ಕಿಂಗ್ಸ್ ಅಧಿಕಾರಿಗಳು ಮುಂದಿನ ಆವೃತ್ತಿಯಲ್ಲಿ ಧೋನಿ ಆಡುತ್ತಾರೆ ಎಂದು ಭರವಸೆ ನೀಡಿದ್ದರು. ಅದಕ್ಕೆ ಪೂರಕವಾಗಿ ಇದೀಗ, ಧೋನಿ ಕೂಡ ನೆಟ್ಸ್‌ನಲ್ಲಿ ಬೆವರು ಹರಿಸಲು ಆರಂಭಿಸಿದ್ದಾರೆ.

**ಸಹ ಆಟಗಾರರೊಂದಿಗೆ ಧೋನಿ ಅಭ್ಯಾಸ :** ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ಇತ್ತೀಚೆಗೆ ತನ್ನ ಎಕ್ಸ್ ಖಾತೆಯಲ್ಲಿ ರಾಂಚಿ ಕ್ರೀಡಾಂಗಣದ ನೆಟ್ಸ್‌ನಲ್ಲಿ ತೆಗೆದ ವಿಡಿಯೋವನ್ನು ಪೋಸ್ಟ್ ಮಾಡಿದೆ. ವೀಡಿಯೊದಲ್ಲಿ, ಧೋನಿ ಅಭ್ಯಾಸಕ್ಕೆ ಸಿದ್ಧರಾಗುತ್ತಿರುವುದನ್ನು ಕಾಣಬಹುದು. ಧೋನಿ ತಮ್ಮ ಫ್ರಾಂಚೈಸಿ ಸಿಎಸ್‌ಕೆಯ ಹಳದಿ ಪ್ಯಾಡ್ ಗಳನ್ನು ಧರಿಸಿರುವುದನ್ನು ಕಾಣಬಹುದು. ಧೋನಿ ಜೊತೆ ಜಾರ್ಖಂಡ್ ಕ್ರಿಕೆಟ್‌ನ ತಮ್ಮ ಜೂನಿಯರ್ ಮತ್ತು ಭಾರತದ ಮಾಜಿ ತಂಡದ ಸಹ ಆಟಗಾರ ಸೌರಭ್ ತಿವಾರಿ ಕೂಡ ಅಭ್ಯಾಸಕ್ಕೆ ಸಿದ್ಧರಾಗುತ್ತಿರುವುದನ್ನು ಕಾಣಬಹುದು. ಸೌರಭ್ ತಿವಾರಿ ಈಗ ಜೆಎಸ್‌ಸಿಎಯಲ್ಲಿ ಅಧಿಕಾರಿಯಾಗಿರುವುದು ಗಮನಿಸಬೇಕಾದ ಸಂಗತಿ.

**ಧೋನಿಯ ಕೊನೆಯ ಸೀಸನ್:** ಧೋನಿಯ ಆಟವನ್ನು ಮೈದಾನದಲ್ಲಿ ಕಣ್ತುಂಬಿಕೊಳ್ಳಲು ಕೋಟ್ಯಾಂತರ ಅಭಿಮಾನಿಗಳು ಕಾಯುತ್ತಿದ್ದಾರೆ. ಮೇಲೆ ಹೇಳಿದಂತೆ ಕಳೆದ ಕೆಲವು ಆವೃತ್ತಿಗಳಿಂದ ಪ್ರತಿ ಆವೃತ್ತಿಯ ಆರಂಭಕ್ಕೂ ಮುನ್ನ ಇದು ಧೋನಿಯ ಕೊನೆಯ ಸೀಸನ್ ಎಂಬ ಸುದ್ದಿಗಳು ಹುಟ್ಟಿಕೊಳ್ಳುತ್ತವೆ. ಆದರೆ ಧೋನಿ ಮಾತ್ರ ನನ್ನಲ್ಲಿ ಇನ್ನು ಆಟ ಉಳಿದಿದೆ ಎಂಬುದನ್ನು ಸಾಭೀತುಪಡಿಸುತ್ತಾ ಬಂದಿದ್ದಾರೆ. ಐಪಿಎಲ್‌ನ 19 ನೇ ಸೀಸನ್ ಮಾರ್ಚ್ 26 ರಂದು ಪ್ರಾರಂಭವಾಗಿ ಮೇ 31 ರವರೆಗೆ ನಡೆಯಲಿದೆ. ಆದಾಗ್ಯೂ, ಹೊಸ ಸೀಸನ್‌ನ ವೇಳಾಪಟ್ಟಿ ಇನ್ನೂ ಬಿಡುಗಡೆಯಾಗಿಲ್ಲ.

## ತವರಿನಲ್ಲಿ 'ಶತಕ' ಪೂರೈಸಿದ ಟೀಮ್ ಇಂಡಿಯಾ




ಟೀಮ್ ಇಂಡಿಯಾ, ನ್ಯೂಝಿಲೆಂಡ್ ವಿರುದ್ಧ 2ನೇ ಟಿ20 ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಹೊಸ ವಿಶ್ವ ದಾಖಲೆ ನಿರ್ಮಿಸಿದೆ. ರಾಯ್‌ಪುರದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಶಹೀರ್ ವೀರ್ ನಾರಣಾಯಣ್ ಸಿಂಗ್ ಮೈದಾನದಲ್ಲಿ ಟೀಮ್ ಇಂಡಿಯಾ ಕಣಕ್ಕಿಳಿಯುತ್ತಿದ್ದಂತೆ ತವರಿನಲ್ಲಿ 100 ಟಿ20 ಪಂದ್ಯಗಳನ್ನಾಡಿದ ವಿಶೇಷ ದಾಖಲೆಯನ್ನು ತಮ್ಮದಾಗಿಸಿಕೊಂಡರು. ಈ ಮೂಲಕ ಈ ಸಾಧನೆ ಮಾಡಿದ ವಿಶ್ವದ 3ನೇ ತಂಡವೆಂಬ ಹೆಗ್ಗಳಿಕೆಗೂ ಪಾತ್ರರಾದರು.

ಇದಕ್ಕೂ ಮುನ್ನ ಟಿ20 ಕ್ರಿಕೆಟ್‌ನಲ್ಲಿ ತವರಿನಲ್ಲಿ 100 ಪಂದ್ಯಗಳನ್ನಾಡಿದ ವಿಶೇಷ ದಾಖಲೆ ನ್ಯೂಝಿಲೆಂಡ್ ಹಾಗೂ ವೆಸ್ಟ್ ಇಂಡೀಸ್ ತಂಡಗಳ ಹೆಸರಿನಲ್ಲಿ ಮಾತ್ರ ಇತ್ತು. ನ್ಯೂಝಿಲೆಂಡ್ ತಂಡವು ತವರಿನಲ್ಲಿ ಒಟ್ಟು 113 ಟಿ20 ಪಂದ್ಯಗಳನ್ನಾಡಿದೆ. ಹಾಗೆಯೇ ವೆಸ್ಟ್ ಇಂಡೀಸ್ ತವರಿನಲ್ಲಿ 108 ಪಂದ್ಯಗಳನ್ನಾಡಿದ ದಾಖಲೆ ಹೊಂದಿದೆ.

ಇದೀಗ ಭಾರತ ತಂಡವು ಈ ಪಟ್ಟಿಗೆ ಸೇರ್ಪಡೆಯಾಗಿದೆ. ಟೀಮ್ ಇಂಡಿಯಾ ಈವರೆಗೆ 265 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದೆ. ಇದರಲ್ಲಿ ಭಾರತದಲ್ಲಿ ಆಡಿದ ಪಂದ್ಯಗಳ ಸಂಖ್ಯೆ 100. ಈ ಮೂಲಕ ತವರು ಮೈದಾನದಲ್ಲಿ 100 ಟಿ20 ಪಂದ್ಯಗಳನ್ನಾಡಿದ ವಿಶೇಷ ದಾಖಲೆ ಪಟ್ಟಿಗೆ ಟೀಮ್ ಇಂಡಿಯಾ ಸೇರ್ಪಡೆಯಾಗಿದೆ.

ಇನ್ನು ಭಾರತ ತಂಡವು ಈವರೆಗೆ ಆಡಿದ 265 ಟಿ20 ಪಂದ್ಯಗಳಲ್ಲಿ 183 ಮ್ಯಾಚ್ ಗಳಲ್ಲಿ ಜಯ ಸಾಧಿಸಿದೆ. ಇನ್ನು ಸೋತಿರುವುದು ಕೇವಲ 73 ಪಂದ್ಯಗಳಲ್ಲಿ ಮಾತ್ರ. ಇನ್ನುಳಿದ ಪಂದ್ಯಗಳಲ್ಲಿ 7 ಮ್ಯಾಚ್‌ಗಳು ಟೈ ಆಗಿದೆ. ಹಾಗೆಯೇ 6 ಪಂದ್ಯಗಳು ಕಾರಣಾಂತರಗಳಿಂದ ರದ್ದಾಗಿದ್ದವು. ಅಂದರೆ ಟಿ20 ಕ್ರಿಕೆಟ್‌ನಲ್ಲಿ ಅತ್ಯಧಿಕ ಪಂದ್ಯಗಳನ್ನು ಗೆದ್ದ ತಂಡವೆಂಬ ವಿಶ್ವ ದಾಖಲೆ ಕೂಡ ಟೀಮ್ ಇಂಡಿಯಾ ಹೆಸರಿನಲ್ಲಿದೆ.

## ಸೂರ್ಯನಿಗೆ ಸಿಗದ ಪಂದ್ಯ ಶ್ರೇಷ್ಠ ಪ್ರಶಸ್ತಿ



ನ್ಯೂಝಿಲೆಂಡ್ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಭಾರತ ತಂಡ ಅಮೋಘ ಜಯ ಸಾಧಿಸಿದೆ. ಅದು ಕೂಡ 208 ರನ್‌ಗಳ ಬೃಹತ್ ಗುರಿಯನ್ನು ಬೆನ್ನತ್ತುವ ಮೂಲಕ. ರಾಯ್‌ಪುರದ ಶಹೀದ್ ವೀರ್ ನಾರಾಯಣ್ ಸಿಂಗ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ನ್ಯೂಝಿಲೆಂಡ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 208 ರನ್ ಕಲೆಹಾಕಿತು. ಈ ಗುರಿಯನ್ನು ಬೆನ್ನತ್ತಿದ ಭಾರತ ತಂಡವು ಉತ್ತಮ ಆರಂಭ ಪಡೆದಿರಲಿಲ್ಲ. ಕೇವಲ 6 ರನ್‌ಗಳಿಸುವಷ್ಟರಲ್ಲಿ ಸಂಜು ಸ್ಯಾಮ್ಸನ್ (6) ಹಾಗೂ ಅಭಿಷೇಕ್ ಶರ್ಮಾ (0) ಅವರ ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕಣಕ್ಕಿಳಿದ ಇಶಾನ್ ಕಿಶನ್ ಹಾಗೂ ಸೂರ್ಯಕುಮಾರ್ ಯಾದವ್ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಕ್ರೀಸ್‌ಗೆ ಆಗಮಿಸುತ್ತಿದ್ದಂತೆ ಸಿಡಿಲಬ್ಬರ ಶುರು ಮಾಡಿದ ಇಶಾನ್ ಕಿಶನ್ ನ್ಯೂಝಿಲೆಂಡ್ ಬೌಲರ್‌ಗಳನ್ನು ಮನಸೋ ಇಚ್ಛೆ ದಂಡಿಸಿದರು. ಪರಿಣಾಮ ಪಾಕೆಟ್ ಡೈನಾಮೊ ಬ್ಯಾಟ್‌ನಿಂದ ಕೇವಲ 32 ಎಸೆತಗಳಲ್ಲಿ 11 ಫೋರ್ ಹಾಗೂ 4 ಭರ್ಜರಿ ಸಿಕ್ಸರ್ ಗಳು ಮೂಡಿಬಂತು. ಅಷ್ಟೇ ಅಲ್ಲದೆ 3ನೇ ವಿಕೆಟ್‌ಗೆ 116 ರನ್‌ಗಳ ಜೊತೆಯಾಟವಾಡಿದ ಇಶಾನ್ ಕಿಶನ್ (76) ಔಟಾದರು. ಇದಾದ ಬಳಿಕ ಸಂಪೂರ್ಣ ಜವಾಬ್ದಾರಿ ಹೆಗಲೇರಿಸಿಕೊಂಡ ಟೀಮ್ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಮೈದಾನದ ಮೂಲೆ ಮೂಲೆಗೂ ಫೋರ್‌ಗಳನ್ನು ಬಾರಿಸಿದ ಸೂರ್ಯ 37 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 9 ಫೋರ್ ಗಳೊಂದಿಗೆ ಅಜೇಯ 82 ರನ್ ಬಾರಿಸಿದರು. ಈ ಮೂಲಕ 15.2 ಓವರ್ ಗಳಲ್ಲಿ ಟೀಮ್ ಇಂಡಿಯಾ ಗುರಿ ಮುಟ್ಟಿಸಿದರು.

## ತ್ರಿ ಸೆಂಚುರಿ.... ಸರ್ಫರಾಝ್ ಖಾನ್ ವಿಶ್ವ ದಾಖಲೆ



ಸರ್ಫರಾಝ್ ಖಾನ್ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಅದು ಕೂಡ ದೇಶೀಯ ಅಂಗಳದಲ್ಲಿ ಒಂದೇ ಸೀಸನ್‌ನಲ್ಲಿ 3 ಸೆಂಚುರಿ ಸಿಡಿಸುವ ಮೂಲಕ. ಈ ಸೆಂಚುರಿಗಳೊಂದಿಗೆ ವಿಶೇಷ ಸಾಧನೆಗೈದ ಮೊದಲ ಭಾರತೀಯ ಬ್ಯಾಟರ್ ಎಂಬ ದಾಖಲೆಯನ್ನು ಸರ್ಫರಾಝ್ ಖಾನ್ ತಮ್ಮದಾಗಿಸಿಕೊಂಡಿದ್ದಾರೆ. ಪ್ರಸ್ತುತ ನಡೆಯುತ್ತಿರುವ ಹೈದರಾಬಾದ್ ವಿರುದ್ಧದ ರಣಜಿ ಪಂದ್ಯದಲ್ಲಿ ಮುಂಬೈ ಪರ 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸರ್ಫರಾಝ್ ಖಾನ್ 219 ಎಸೆತಗಳಲ್ಲಿ 9 ಭರ್ಜರಿ ಸಿಕ್ಸ್ ಹಾಗೂ 19 ಫೋರ್‌ಗಳೊಂದಿಗೆ 227 ರನ್ ಬಾರಿಸಿ ಅಬ್ಬರಿಸಿದ್ದಾರೆ. ಇದಕ್ಕೂ ಮುನ್ನ ನಡೆದ ವಿಜಯ್ ಹಝಾರೆ ಏಕದಿನ ಟೂರ್ನಿಯಲ್ಲಿ ಗೋವಾ ವಿರುದ್ಧದ ಪಂದ್ಯಗಳಲ್ಲಿ ಮಧ್ಯಮ ಕ್ರಮಾಂಕದಲ್ಲಿ ಕಣಕ್ಕಿಳಿದಿದ್ದ ಸರ್ಫರಾಝ್ ಖಾನ್ ಕೇವಲ 75 ಎಸೆತಗಳಲ್ಲಿ 14 ಸಿಕ್ಸರ್ ಹಾಗೂ 9 ಫೋರ್‌ಗಳೊಂದಿಗೆ 157 ರನ್ ಬಾರಿಸಿದ್ದರು. ಈ ಮೇಲಿನ ಎರಡು ಶತಕಗಳಿಗೂ ಮುನ್ನ ಸರ್ಫರಾಝ್ ಖಾನ್ ಸೈಯ್ಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಅಸ್ಸಾಂ ವಿರುದ್ಧ ಕೇವಲ 47 ಎಸೆತಗಳಲ್ಲಿ ಶತಕ ಬಾರಿಸಿದ್ದರು. ಈ ಮೂರು ಶತಕಗಳೊಂದಿಗೆ ಇದೀಗ ಸರ್ಫರಾಝ್ ಖಾನ್ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅಂದರೆ ಒಂದೇ ಸೀಸನ್‌ನಲ್ಲಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ದ್ವಿಶತಕ, ಲಿಸ್ಟ್ ಎ (ಏಕದಿನ) ಕ್ರಿಕೆಟ್‌ನಲ್ಲಿ 150 ಹಾಗೂ ಟಿ20 ಕ್ರಿಕೆಟ್‌ನಲ್ಲಿ 100 ರನ್ ಬಾರಿಸಿದ ಭಾರತದ ಮೊದಲ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ವಿಶ್ವ ಕ್ರಿಕೆಟ್‌ನಲ್ಲಿ ಈ ಸಾಧನೆ ಮಾಡಿದ 3ನೇ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ಇಂಗ್ಲೆಂಡ್ ಡೇನಿಯಲ್ ಬೆಲ್-ಡ್ರಮಂಡ್ ಹಾಗೂ ಅಲೆಕ್ಸ್ ಹೇಲ್ಸ್ ಮಾತ್ರ ಈ ಸಾಧನೆ ಮಾಡಿದ್ದರು. 2016 ಮತ್ತು 2023 ರಲ್ಲಿ ಡೇನಿಯಲ್ ಬೆಲ್-ಡ್ರಮಂಡ್ ಒಂದೇ ಸೀಸನ್‌ನಲ್ಲೂ ಮೂರು ಸ್ವರೂಪಗಳಲ್ಲಿ 200+, 150+, 100+ ರನ್ ಗಳಿಸಿದ್ದರು. ಇದಾದ ಬಳಿಕ 2017 ರಲ್ಲಿ ಅಲೆಕ್ಸ್ ಹೇಲ್ಸ್ ಈ ಸಾಧನೆ ಸರಿಗಟ್ಟಿದ್ದರು. ಇದೀಗ ಸರ್ಫರಾಝ್ ಖಾನ್ 2025-26 ರ ದೇಶೀಯ ಸೀಸನ್ ಮೂಲಕ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 200+, ಏಕದಿನ ಕ್ರಿಕೆಟ್‌ನಲ್ಲಿ 150+ ರನ್, ಟಿ20 ಕ್ರಿಕೆಟ್‌ನಲ್ಲಿ 100+ ರನ್‌ಗಳಿಸಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**